ಪ್ರಬುದ್ಧ ಕರ್ನಾಟಕ

ಸಂಪುಟ ೯೩ ಸಂಚಿಕೆ ೩೫೮

೨೦೧೩

ಪ್ರಸಾರಾಂಗ

ಮೈಸೂರು ವಿಶ್ವವಿದ್ಯಾನಿಲಯ

ಮಾನಸಗಂಗೋತ್ರಿ, ಮೈಸೂರು

ಪ್ರಬುದ್ಧ ಕರ್ಣಾಟಕ

ಸಂಪುಟ ೯೩

ಸಂಚಿಕೆ ೩೫೮

ಪ್ರಸಾರಾಂಗ

ಮೈಸೂರು ವಿಶ್ವವಿದ್ಯಾನಿಲಯ

೨೦೧೬

Prabuddha Karnataka : A Kannada Quarterly of the University of Mysore, Volume 93, Nos. 358; Edited by Prof. Priti Shrimandhar Kumar, Prof. K.N. Ganganaik and Prof. G.R. Thippeswamy; Published by the Director, Prasaranga, Manasagangotri, University of Mysore, MYSORE - 570 006; Pages : x+102=112

ಪ್ರಧಾನ ಸಂಪಾದಕರು

ಪ್ರೊ. ಎಂ.ಜಿ. ಮಂಜುನಾಥ

ಸಂಪಾದಕರು

ಪ್ರೊ. ಪ್ರೀತಿ ಶ್ರೀಮಂಧರ್ ಕುಮಾರ್
ಪ್ರೊ. ಕೆ.ಎನ್. ಗಂಗಾನಾಯಕ್
ಪ್ರೊ. ಜಿ.ಆರ್. ತಿಪ್ಪೇಸ್ವಾಮಿ

ಪ್ರಕಾಶಕರು

ಪ್ರೊ. ಎಂ.ಜಿ. ಮಂಜುನಾಥ
ನಿರ್ದೇಶಕರು
ಪ್ರಸಾರಾಂಗ, ಮಾನಸಗಂಗೋತ್ರಿ
ಮೈಸೂರು – ೫೭೦ ೦೦೬

ಮುದ್ರಕರು

ಶ್ರೀ ಎಸ್. ಸತೀಶ್
ನಿರ್ದೇಶಕರು
ವಿಶ್ವವಿದ್ಯಾನಿಲಯ ಮುದ್ರಣಾಲಯ
ಮಾನಸಗಂಗೋತ್ರಿ, ಮೈಸೂರು – ೫೭೦ ೦೦೬.

ಮುನ್ನುಡಿ

ಪ್ರಬುದ್ಧ ಕರ್ಣಾಟಕ, ಮಾನವಿಕ ಕರ್ಣಾಟಕ, ವಿಜ್ಞಾನ ಕರ್ಣಾಟಕ- ಇವೆಲ್ಲ ನಮ್ಮ ವಿಶ್ವವಿದ್ಯಾನಿಲಯದಿಂದ ಪ್ರಕಟವಾಗುತ್ತಿರುವ ತ್ರೈಮಾಸಿಕಗಳು; ಹಾಗೆಯೇ ಆಂಗ್ಲ ಭಾಷೆಯಲ್ಲಿ ಬರುತ್ತಿರುವ *my*SCIENCE ಹಾಗೂ *my*SOCIETY ಅರ್ಧವಾರ್ಷಿಕಗಳು. ಕನ್ನಡದಲ್ಲಿ ಪಡಿಮೂಡುತ್ತಿರುವ ನಿಯತಕಾಲಿಕೆಗಳ ಕೊಡುಗೆ ದೊಡ್ಡದು. ಇಂದಿಗೂ ಸಂಶೋಧನೆ ಹಾಗೂ ಗ್ರಂಥಾಲಯದ ಭಾಷೆ ಇಂಗ್ಲಿಷ್ ಎಂಬುದನ್ನು ನಾವು ಚೆನ್ನಾಗಿ ಬಲ್ಲೆವು. ಹಾಗಾಗಿ ಆಂಗ್ಲ ಭಾಷೆಯಲ್ಲಿ ಸಂಶೋಧನಾ ಪ್ರಬಂಧಗಳನ್ನು ರಚಿಸುವವರಿಗೆ ಒಂದು ಅರ್ಥದಲ್ಲಿ ಹಾದಿ ಸುಗಮ; ಏಕೆಂದರೆ ಜಗತ್ತಿನಾದ್ಯಂತ ಈ ಭಾಷೆ ಬಳಕೆಯಲ್ಲಿದ್ದು ಪಾರಿಭಾಷಿಕ ಪದಗಳು ಸಿದ್ಧವಾಗಿ ದಕ್ಕುತ್ತವೆ. ಸಾರ್ವತ್ರಿಕವಾಗಿ ಬಳಕೆ ಮಾಡಲೂ ಒದಗುತ್ತವೆ. ಆದರೆ ಕನ್ನಡದಲ್ಲಿ ವೈಜ್ಞಾನಿಕ ವಿಷಯಗಳ ಮೇಲೆ ಸಂಶೋಧನಾತ್ಮಕ ಪ್ರಬಂಧ ಬರೆಯುವವರಿಗೆ ಅಷ್ಟು ಅನುಕೂಲಗಳಿಲ್ಲ. ಆದಾಗ್ಯೂ ಪ್ರಾದೇಶಿಕ ಭಾಷೆಯ ಮೂಲಕ ವಿಜ್ಞಾನವನ್ನು ಅರ್ಥಮಾಡಿಸುವ ಹೊಣೆಗಾರಿಕೆಯನ್ನು ಕನ್ನಡ ವಿಜ್ಞಾನ ಲೇಖಕರು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ.

ಇದು ವಿಜ್ಞಾನ ಮತ್ತು ಮಾನವಿಕಗಳ ಮಾತಾಯಿತು. ಇನ್ನು **ಪ್ರಬುದ್ಧ ಕರ್ಣಾಟಕಕ್ಕೆ** ತನ್ನದೇ ಆದ ಹಿನ್ನೆಲೆಯಿದೆ, ಇತಿಹಾಸವಿದೆ. ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಗಳಂಥ ಮಹನೀಯರು ಕಟ್ಟಿ ಬೆಳೆಸಿದ ನಿಯತಕಾಲಿಕೆಯಿದು. ಮೈಸೂರು ವಿಶ್ವವಿದ್ಯಾನಿಲಯದ ಜೊತೆ ಜೊತೆಗೇ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಂಡ ಹೆಗ್ಗಳಿಕೆ ಈ ನಿಯತಕಾಲಿಕೆಗಿದೆ. ಹಾಗಾಗಿ ಕರ್ನಾಟಕದ ಪ್ರಬುದ್ಧ ಚಿಂತಕರು ಈ ನಿಯತಕಾಲಿಕೆಯನ್ನು ಪ್ರೀತಿಯಿಂದ ನೋಡಿಕೊಳ್ಳಬೇಕಾದ ಜವಾಬ್ದಾರಿ ಹೊತ್ತಿದ್ದಾರೆ. ಆ ಕಾಲದ ಕಠಿಣವಾದ ಮಾನದಂಡಗಳನ್ನು ಇಟ್ಟು ಪ್ರಕಟಣೆಯ ಪ್ರಕ್ರಿಯೆಯನ್ನು ನಿಧಾನಗೊಳಿಸದೆ ಹೊಸದಾಗಿ ಬರಹ ಕಲಿತು ಸಾಗುತ್ತಿರುವ ಯುವ ವಿದ್ವಾಂಸರನ್ನು ತಿದ್ದಿ ಮುನ್ನಡೆಸುವ ದಿಶೆಯಲ್ಲಿ ನಮ್ಮ ಎಲ್ಲ ನಿಯತಕಾಲಿಕೆಗಳ ಸಂಪಾದಕ ಮಂಡಳಿಗಳ ಸಂಚಾಲಕರು ಹಾಗೂ ಸದಸ್ಯರು ಬಲು ಆಸ್ಥೆಯಿಂದ ಕಾರ್ಯೋನ್ಮುಖರಾಗಿದ್ದಾರೆ. ಅವರಿಗೆ ಹಾಗೂ ಅಂದವಾಗಿ ಇವನ್ನು ಪ್ರಕಟಗೊಳಿಸುತ್ತಿರುವ ಪ್ರಸಾರಾಂಗದ ನಿರ್ದೇಶಕರಿಗೆ ಹಾಗೂ ಮುದ್ರಣಾಲಯದ ನಿರ್ದೇಶಕರಿಗೆ ನನ್ನ ಶುಭಕಾಮನೆಗಳನ್ನು ತಿಳಿಸಲು ಹರ್ಷಿಸುತ್ತೇನೆ.

ಪ್ರೊ. ಕೆ.ಎಸ್. ರಂಗಪ್ಪ
ಕುಲಪತಿ

ಪ್ರಕಾಶಕರ ನುಡಿ

ಮೈಸೂರು ವಿಶ್ವವಿದ್ಯಾನಿಲಯವು ಜ್ಞಾನಪ್ರಸಾರದ ಮಹೋನ್ನತ ಉದ್ದೇಶದೊಂದಿಗೆ ಸ್ಥಾಪಿಸಿದ ಪ್ರಸಾರಾಂಗವು ಹೊರತರುತ್ತಿರುವ ಪ್ರಬುದ್ಧ ಕರ್ಣಾಟಕ ನಿಯತಕಾಲಿಕೆಯು ಕನ್ನಡ ನಾಡಿನ ವಿದ್ವತ್ಪತ್ರಿಕೆಗಳಲ್ಲಿ ಬಹು ಪ್ರತಿಷ್ಠಿತ ಸ್ಥಾನವನ್ನು ಪಡೆದಿದೆ. ಕನ್ನಡ ಸಾಹಿತ್ಯ, ಭಾಷಾ ವಿಜ್ಞಾನ, ಜಾನಪದ, ಶಾಸನಶಾಸ್ತ್ರ, ಗ್ರಂಥ ಸಂಪಾದನಾ ಶಾಸ್ತ್ರ, ಸ್ಥಳನಾಮ ವ್ಯಾಸಂಗ, ನಾಣ್ಯಶಾಸ್ತ್ರ, ಇತಿಹಾಸ, ಪುರಾತತ್ವ, ಸಂಸ್ಕೃತಿ ಹೀಗೆ ಹಲವು ಜ್ಞಾನ ಶಿಸ್ತುಗಳಿಗೆ ಸೇರಿದ ಸಂಶೋಧನಾ ಲೇಖನಗಳ ಪ್ರಕಟಣೆಗೆಂದೇ ಮೀಸಲಾಗಿದ್ದು ಕನ್ನಡ ಸಾಹಿತ್ಯಾಭಿಮಾನಿಗಳ, ಸಂಶೋಧಕರ, ವಿದ್ವಾಂಸರ ಮನ್ನಣೆ ಗಳಿಸಿದೆ.

ಕನ್ನಡದಕಣ್ವ ಬಿ.ಎಂ.ಶ್ರೀ, ರಾಷ್ಟ್ರಕವಿ ಕುವೆಂಪು, ಹಿರಿಯ ವಿದ್ವಾಂಸರಾದ ತೀನಂಶ್ರೀ, ಟಿ.ಎಸ್. ವೆಂಕಣ್ಣಯ್ಯ, ತ.ಸು. ಶಾಮರಾಯ, ಡಿ.ಎಲ್. ನರಸಿಂಹಾಚಾರ್, ನಾಡೋಜ ದೇಜಗೌ ಮುಂತಾದ ಹಿರಿಯರ ಪರಿಶ್ರಮ ಪ್ರೋತ್ಸಾಹಗಳಿಂದ ಪ್ರಬುದ್ಧ ಕರ್ಣಾಟಕವು ಪ್ರಬುದ್ಧವಾದ ಸ್ಥಾನವನ್ನು ಪಡೆದಿದೆ. ಪ್ರಸ್ತುತ ಪ್ರಬುದ್ಧ ಕರ್ಣಾಟಕದ ೯೩ನೇ ಸಂಪುಟ ೩೫೮ನೇ ಸಂಚಿಕೆ ಹೊರಬರುತ್ತಿದೆ.

ಪ್ರಸಾರಾಂಗದ ಪ್ರಗತಿಗೆ ಸದಾ ಬೆಂಬಲ ನೀಡುತ್ತಿರುವ ನೆಚ್ಚಿನ ಕುಲಪತಿಗಳಾದ ಪ್ರೊ. ಕೆ.ಎಸ್. ರಂಗಪ್ಪನವರಿಗೆ, ಕುಲಸಚಿವರಾದ ಪ್ರೊ. ಆರ್. ರಾಜಣ್ಣ ಅವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರೂ, ಪ್ರಬುದ್ಧ ಕರ್ಣಾಟಕದ ಸಂಪಾದಕರೂ ಆದ ಪ್ರೊ. ಪ್ರೀತಿ ಶ್ರೀಮಂಧರ್ ಕುಮಾರ್ ಅವರಿಗೆ, ಸಂಪಾದಕರಾದ ಪ್ರೊ. ಕೆ.ಎನ್. ಗಂಗಾನಾಯಕ್ ಅವರಿಗೆ, ಪ್ರೊ. ಜಿ.ಆರ್. ತಿಪ್ಪೇಸ್ವಾಮಿ ಅವರಿಗೆ, ಪ್ರಸಾರಾಂಗದ ಸಹಾಯಕ ನಿರ್ದೇಶಕರಾದ ಶ್ರೀ ಬಿ.ಎಸ್. ಅನಿಲಕುಮಾರ ಅವರಿಗೆ, ಡಿ.ಟಿ.ಪಿ. ವಿಭಾಗದವರಿಗೆ, ಮುದ್ರಣಾಲಯದ ನಿರ್ದೇಶಕರಾದ ಶ್ರೀ ಎಸ್. ಸತೀಶ್ ಅವರಿಗೆ ಹಾಗೂ ಮುದ್ರಣಾಲಯದ ಸಿಬ್ಬಂದಿ ವರ್ಗದವರಿಗೆ ನಾನು ಆಭಾರಿಯಾಗಿದ್ದೇನೆ.

ಪ್ರೊ. ಎಂ.ಜಿ. ಮಂಜುನಾಥ
ನಿರ್ದೇಶಕ, ಪ್ರಸಾರಾಂಗ

ಸಂಪಾದಕರ ನುಡಿ

ಪ್ರಬುದ್ಧ ಕರ್ಣಾಟಕದ ೯೩ನೇ ಸಂಪುಟದ ೩೫೮ನೇ ಸಂಚಿಕೆಯನ್ನು ಓದುಗರ ಕೈಗೊಪ್ಪಿಸಲು ಸಂತೋಷವಾಗುತ್ತಿದೆ. ಈ ಸಂಚಿಕೆಯಲ್ಲಿನ ಎಲ್ಲಾ ಲೇಖನಗಳು ಗುಣಮಟ್ಟದಲ್ಲಿ ಅತ್ಯುತ್ತಮವಾದುವುಗಳಾಗಿವೆ. ಹಾಗಾಗಿ ಇವು ಸಹೃದಯರ ಮನ ಗೆಲ್ಲುತ್ತವೆ ಎಂಬ ಭರವಸೆಯಿಂದ ಅವುಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ. ಜೊತೆಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಇವು ಓದುಗರಿಗೆ ಉಪಯುಕ್ತವಾಗಿ, ಲೇಖಕರ ಹಾಗೂ ನಮ್ಮ ಶ್ರಮ ಸಾರ್ಥಕವಾಗುತ್ತದೆ ಎಂಬ ವಿಶ್ವಾಸವೂ ನಮ್ಮದಾಗಿವೆ.

ಪ್ರಬುದ್ಧ ಕರ್ಣಾಟಕಕ್ಕೆ ಸ್ವತಂತ್ರವೂ, ಸಂಶೋಧನಾತ್ಮಕವೂ ಆದ ಸಾಹಿತ್ಯಕ್ಕೆ ಸಂಬಂಧಪಟ್ಟ ಲೇಖನಗಳನ್ನು ಮಾತ್ರ ಕಳುಹಿಸಬೇಕು. ಜೊತೆಗೆ ಲೇಖನಗಳು ಗುಣಮಟ್ಟದಿಂದ ಕೂಡಿದ್ದು, ಅಕ್ಷರದೋಷಗಳಿರಬಾರದು. ಇಂತಹ ಉತ್ತಮ ಮುದ್ರಿತ ಲೇಖನಗಳ ಜೊತೆಗೆ ಸಿ.ಡಿ.ಯನ್ನು ಕಡ್ಡಾಯವಾಗಿ ಸಲ್ಲಿಸಬೇಕಾಗುತ್ತದೆ. ಮುದ್ರಿತ ಲೇಖನದ ಜೊತೆಗೆ ಸಿ.ಡಿ.ಯನ್ನು ಕಡ್ಡಾಯವಾಗಿ ಕಳುಹಿಸದಿದ್ದಲ್ಲಿ ಲೇಖನವನ್ನು ಪ್ರಕಟಿಸಲಾಗುವುದಿಲ್ಲ. ಲೇಖನವನ್ನು ಕಳುಹಿಸುವ ಲೇಖಕರು, ಲೇಖನದಲ್ಲಿರುವ ಉದ್ಧರಣಗಳಿಗೆ ಆಕರ ಸಂಖ್ಯೆಯನ್ನು ನೀಡಬೇಕೆಂದು ಕೋರುತ್ತೇವೆ. ಇಲ್ಲಿ ನಾವು ಬೇರೆ ಕಡೆ ಪ್ರಕಟವಾದ ಲೇಖನಗಳನ್ನು ಪ್ರಕಟಿಸುವುದಿಲ್ಲ. ಲೇಖನಗಳು ಕನಿಷ್ಟಪಕ್ಷ ಆರು ಫುಲ್‌ಸ್ಕೇಪ್ ಪುಟಗಳಷ್ಟು ಇರಲಿ.

ಲೇಖನಗಳನ್ನು ಈ ಕೆಳಕಂಡ ವಿಳಾಸಕ್ಕೆ ಕಳುಹಿಸಬೇಕಾಗಿ ಕೋರುತ್ತೇವೆ.

ಪ್ರೊ. ಪ್ರೀತಿ ಶ್ರೀಮಂಧರ್ ಕುಮಾರ್
ಪ್ರೊ. ಕೆ.ಎನ್. ಗಂಗಾನಾಯಕ್
ಪ್ರೊ. ಜಿ.ಆರ್. ತಿಪ್ಪೇಸ್ವಾಮಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು – ೫೭೦೦೦೬

ಪರಿವಿಡಿ

೧. ಆಚಾರ್ಯ ಅಕಲಂಕರು : ಒಂದು ಅಧ್ಯಯನ ೦೧
– ರಾಜೇಂದ್ರ ಪಾಟೀಲ್

೨. ಅಭಿನವ ವಾದಿವಿದ್ಯಾನಂದನ 'ಕಾವ್ಯಸಾರ' ೦೭
– ವೃಂದ ಎನ್.ಕೆ.

೩. ವಚನಸಾಹಿತ್ಯದಲ್ಲಿ ಲಿಂಗವ್ಯವಸ್ಥೆ ೨೦
– ಡಾ. ಎನ್. ಕುಮುದ

೪. ಕನಕದಾಸರ ಮೋಹನ ತರಂಗಿಣಿಯಲ್ಲಿ ಮಾನವ
ಪ್ರೇಮದ ಅಭಿವ್ಯಕ್ತಿ ೩೩
– ಪ್ರೊ. ಪ್ರೀತಿ ಶ್ರೀಮಂಧರ್ ಕುಮಾರ್

೫. ಜನಪದ ಗೀತೆಗಳಲ್ಲಿ ವಾಣಿಜ್ಯ ಪರಿಕಲ್ಪನೆ ೩೯
– ಮಂಜು ಎಚ್.ಪಿ.

೬. ಹೊಯ್ಸಳ ಒಂದನೇ ನರಸಿಂಹನ ಕಾಲದ ಶಾಸನೋಕ್ತ ಕೆರೆಗಳು ೪೬
– ಮುನಿಕೆಂಪೇಗೌಡ ಎಂ.

೭ ಪ್ರಸಾರಾಂಗದ ಪ್ರಚಾರೋಪನ್ಯಾಸಮಾಲೆ ಮತ್ತು ಪ್ರಸ್ತುತತೆ ೫೩
– ಲೋಕೇಶ ಆರ್.

೮. ಕ್ರಾಂತಿಕಾಳಿ : ಕಾವ್ಯತತ್ವ ಚಿಂತನೆಯ ಹಿನ್ನೆಲೆಯಲ್ಲಿ ಮರು ಓದು ೬೧
– ಡಾ. ವಿಜಯಕುಮಾರಿ. ಎಸ್. ಕರಿಕಲ್

೯. ಕನ್ನಡ ಪ್ರಬಂಧ ಸಾಹಿತ್ಯಕ್ಕೆ ಸುನಂದ ಬೆಳಗಾಂವಕರ
ಅವರ ಕೊಡುಗೆ ೬೬
– ಪದ್ಮಾವತಿ ಎಸ್.

೧೦. ಎ.ಎಸ್. ಮೂರ್ತಿ ಅವರ ಮಕ್ಕಳ ನಾಟಕಗಳ ತಾತ್ತ್ವಿಕ ನೆಲೆಗಳು ೭೩
– ಗಿರೀಶ್ ಎಂ.ಬಿ.

೧೧. 'ಅನಾದಿ–ಅನಂತ' ಕಾದಂಬರಿಯಲ್ಲಿ ಕಾಮ–ಪ್ರೇಮ ಮೀಮಾಂಸೆ ೮೪
– ಷಣ್ಮುಖ. ಗಣಾಚಾರಿ

೧೨. ತುಂಬರಗುದ್ದಿ ತಾಮ್ರ ಶಾಸನ : ಪುನರ್ ವಿಮರ್ಶೆ ೯೭
– ಬಿ.ಎಸ್. ಅನಿಲ ಕುಮಾರ

ಈ ಸಂಚಿಕೆಯ ಲೇಖಕರು

೧. **ರಾಜೇಂದ್ರ ಪಾಟೀಲ್**
ಕೇ/ಆ. ನಾಗವೇಣಿ ಜೈನ್
ಕಾಳಮ್ಮನ ಗುಡಿಬೀದಿ
ಶ್ರವಣಬೆಳಗೊಳ – ೫೭೩೧೩೫
ಮೊಬೈಲ್ : ೯೪೪೮೩೩೪೧೧೨

೨. **ವೃಂದ ಎನ್.ಕೆ.**
ಸಂಶೋಧನಾ ವಿದ್ಯಾರ್ಥಿನಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು
ಮೊಬೈಲ್ : ೯೭೩೯೯೦೨೪೧೪

೩. **ಡಾ. ಎನ್. ಕುಮುದ**
ಸಹಾಯಕ ಸಂಪಾದಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು
ಮೊಬೈಲ್ : ೯೪೪೯೮೧೩೦೩೦

೪. **ಪ್ರೊ. ಪ್ರೀತಿ ಶ್ರೀಮಂಧರ್ ಕುಮಾರ್**
ಕನ್ನಡ ಪ್ರಾಧ್ಯಾಪಕರು
ನಿರ್ದೇಶಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು
ಮೊಬೈಲ್ : ೯೪೪೯೩೨೩೯೫೦

೫. **ಮಂಜು ಎಚ್.ಪಿ.**
ಸಂಶೋಧಕರು, ಜಾನಪದ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು
ಮೊಬೈಲ್ : ೯೧೬೪೪೩೬೪೩೭

೬. **ಮುನಿಕೆಂಪೇಗೌಡ ಎಂ.**
ಸಂಶೋಧನಾ ವಿದ್ಯಾರ್ಥಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು
ಮೊಬೈಲ್ : ೯೯೦೨೪೦೧೨೦೭

೭. **ಲೋಕೇಶ ಆರ್.**
ಸಂಶೋಧನಾ ವಿದ್ಯಾರ್ಥಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು
ಮೊಬೈಲ್ : ೯೯೪೫೩೯೯೯೮೫

೮. **ಡಾ. ವಿಜಯಕುಮಾರಿ ಎಸ್. ಕರಿಕಲ್**
ಸಹಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು
ಮೊಬೈಲ್ : ೯೪೪೮೭೯೪೯೯೨

೯. **ಪದ್ಮಾವತಿ. ಎನ್**
ಸಂಶೋಧನಾ ವಿದ್ಯಾರ್ಥಿನಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು.

೧೦. **ಗಿರೀಶ್ ಎಂ.ಬಿ.**
ಹಿರಿಯ ಸಂಶೋಧನಾ ವಿದ್ಯಾರ್ಥಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು
ಮೊಬೈಲ್ : ೮೮೬೭೭೩೨೩೪೦

೧೧. **ಷಣ್ಮುಖ. ಗಣಾಚಾರಿ**
ಸಂಶೋಧನಾ ವಿದ್ಯಾರ್ಥಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು

೧೨. **ಬಿ.ಎಸ್. ಅನಿಲ ಕುಮಾರ**
ಸಹಾಯಕ ನಿರ್ದೇಶಕರು, ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು
ಮೊಬೈಲ್ : ೯೯೦೨೪೦೦೫೮೮

೧. ಆಚಾರ್ಯ ಅಕಲಂಕರು : ಒಂದು ಅಧ್ಯಯನ

"ಆಚಾರ್ಯ ಅಕಲಂಕರ ಜೀವನ ಮತ್ತು ಸಾಧನೆ"

– ರಾಜೇಂದ್ರ ಪಾಟೀಲ್

ಶ್ರೀಮದ್ ಭಟ್ಟಾಕಲಂಕರ ಬದುಕಿನ ಬಗೆಗೆ ಸ್ವತಃ ಅವರೇ ಏನೂ ಬರೆದು ತಿಳಿಸಿಲ್ಲ. ಅವರ ಜೀವಿತ ಕಾಲದಲ್ಲಿ ಬದುಕಿದ್ದ ಬೇರೆ ಯಾವ ಆಚಾರ್ಯರು ಕೂಡ ಅಕಲಂಕರ ಬಗ್ಗೆ ತಿಳಿಸಿಲ್ಲ. ಸದ್ಯ ದೊರೆಯುತ್ತಿರುವ ಕಥಾಕೋಶಗಳಲ್ಲಿ ಹೆಚ್ಚು ಪುರಾತನವೆನಿಸಿರುವ ಹರಿಷೇಣಾಚಾರ್ಯರು ಬರೆದಿರುವ ಕಥಾಕೋಶದಲ್ಲಿ ಆಚಾರ್ಯ ಸಮಂತಭದ್ರ ಮತ್ತು ಅಕಲಂಕದೇವರಂತಹ ಯುಗಪ್ರಧಾನ ಆಚಾರ್ಯರ ಕಥೆಗಳೇ ಇಲ್ಲ. ಹರಿಷೇಣರು ತಮ್ಮ ಕಥಾಕೋಶದಲ್ಲಿ ಸ್ವತಃ ಕ್ರಿ.ಶ. ೯೪೧ರಲ್ಲಿ ಕಥಾಕೋಶವನ್ನು ಸಂಪೂರ್ಣಗೊಳಿಸಿದ್ದೇವೆ ಎಂದು ತಿಳಿಸಿದ್ದಾರೆ. ಇದರ ತರುವಾಯದಲ್ಲಿ ಆಗಿರುವ ಪ್ರಭಾಚಂದ್ರ ಎಂಬ ಹೆಸರಿನ ಆಚಾರ್ಯರು ಬರೆದ ಕಥಾಕೋಶದಲ್ಲಿ ಅಕಲಂಕದೇವರ ಕಥೆಯು ದೊರೆಯುತ್ತದೆ. ಅದರ ರಚನೆಯು ಸುಮಾರು ಕ್ರಿ.ಶ. ೧೫ನೇ ಶತಮಾನ ಎಂದು ಪಂಡಿತ್ ನಾಥೂರಾಮ್ ಪ್ರೇಮಿಯವರು ಅನುಮಾನ ಮಾಡಿದ್ದಾರೆ. ಪ್ರಭಾಚಂದ್ರಾಚಾರ್ಯರ ಗದ್ಯಕಥಾಕೋಶವನ್ನೇ ಬ್ರಹ್ಮ ನೇಮಿದತ್ತನೆಂಬುವನು ವಿಕ್ರಮ ಸಂವತ್ ೧೫೭೫ರ ಆಚೆ ಈಚೆಯಲ್ಲಿ ಪದ್ಯ ರೂಪದಲ್ಲಿ ಬರೆದಿದ್ದಾರೆ. ಪುನಃ ಅಕಲಂಕದೇವರ ಬಗೆಗೆ ದೇವಚಂದ್ರನೆಂಬ ಶ್ರಾವಕನು ಕ್ರಿ.ಶ. ೧೬ನೇ ಶತಮಾನದಲ್ಲಿ ತನ್ನ ಕನ್ನಡ ಭಾಷೆಯಲ್ಲಿ ರಾಜಾವಳಿ ಕಥೆಯಲ್ಲಿ ಅಕಲಂಕದೇವರನ್ನು ಪರಿಚಯಿಸಿದ್ದಾನೆ. ಈ ಪ್ರಕಾರ ಕಥಾಗ್ರಂಥಗಳಲ್ಲಿ ೧೪ನೇ ಶತಮಾನಕ್ಕಿಂತ ಪೂರ್ವದಲ್ಲಿ ಯಾವುದೇ ಗ್ರಂಥಗಳಲ್ಲಿ ಆಚಾರ್ಯ ಅಕಲಂಕದೇವರ ಪರಿಚಯವನ್ನು ನೀಡಿರುವುದಿಲ್ಲವೆಂಬುದು ಸ್ಪಷ್ಟವಾಗುತ್ತದೆ.[೧]

ಪಂಡಿತ ನಾಥೂರಾವ್ ಪ್ರೇಮೀಜಿಯುವರು ಕಥಾಕೋಶಗಳೇ ಮೊದಲಾದವುಗಳ ಆಧಾರಗಳ ಜೈನ ಹಿತೈಷಿ ಎಂಬ ಪತ್ರಿಕೆಯಲ್ಲಿ ಅಕಲಂಕದೇವರ ಜೀವನ ವೃತ್ತಾಂತವನ್ನು ಬರೆದಿದ್ದಾರೆ. ಅವುಗಳನ್ನೇ ಆಧಾರವಾಗಿಟ್ಟುಕೊಂಡು ನ್ಯಾಯಕುಮುದಚಂದ್ರದ ಪ್ರಸ್ತಾವನೆಯಲ್ಲಿಯೂ ಬಹಳಷ್ಟು ಬರೆದಿದ್ದಾರೆ. ಇಲ್ಲಿ ಇದನ್ನು ಹೆಚ್ಚು ಚರ್ಚಿಸದೆ ಕೇವಲ ಕೆಲವು ವಿಚಾರಗಳನ್ನು ಮಾತ್ರ ಪ್ರಸ್ತುತಪಡಿಸಲಾಗುತ್ತದೆ.[೨]

ಜನ್ಮಭೂಮಿ ಮತ್ತು ಪಿತೃಕುಲ

ಪ್ರಭಾಚಂದ್ರರ ಗದ್ಯಕಥಾಕೋಶ ಹಾಗೂ ಅದರ ಪರಿವರ್ತಿತ ರೂಪವಾದ ಬ್ರಹ್ಮನೇಮಿದತ್ತರ ಆರಾಧನಾ ಕಥಾಕೋಶದ ಅನುಸಾರ ಆಚಾರ್ಯ ಅಕಲಂಕರ ಜನ್ಮಸ್ಥಳವು ಮಾನ್ಯಖೇಟ ನಗರವಾಗಿದೆ. ಅವರು ಅಲ್ಲಿಯ ರಾಜನಾದ ಶುಭತುಂಗನ ಮಂತ್ರಿ ಪುರುಷೋತ್ತಮನ ಹಿರಿಯ ಪುತ್ರನಾಗಿದ್ದರು. ಶ್ರೀ ದೇವಚಂದ್ರನ ಕನ್ನಡ ಭಾಷೆಯ ರಾಜಾವಳಿ ಕಥೆ ಎಂಬ ಗ್ರಂಥದ ಪ್ರಕಾರ ಆಚಾರ್ಯ ಅಕಲಂಕರನ್ನು ಕಾಂಚಿಯ ಜಿನದಾಸನೆಂಬ ಬ್ರಾಹ್ಮಣನ ಪುತ್ರ ಎಂದು ಹೇಳಿದೆ. ಇವರ ತಾಯಿಯ ಹೆಸರು ಜಿನಮತಿ ಎಂದು ಹೇಳಿದೆ. ಮತ್ತೊಂದು ಮೂರನೆಯ ಉಲ್ಲೇಖವಾದ ತತ್ವಾರ್ಥರಾಜವಾರ್ತಿಕದ ಪ್ರಥಮ ಅಧ್ಯಾಯದ ಕೊನೆಯ ಶ್ಲೋಕದಲ್ಲಿ ಹೀಗೆ ಹೇಳಿದೆ–

ಜೀಯಾಚ್ಚಿರಮಕಲಂಕಬ್ರಹ್ಮಾ ಲಘುಹವ್ವನೃಪತಿವರತನಯಃ
ಅನವರತನಿಖಿಲಜನನುತವಿದ್ಯಃ ಪ್ರಶಸ್ತಜನಹೃದ್ಯಃ ॥

ಈ ಶ್ಲೋಕಾನುಸಾರ ಅಕಲಂಕರು ಲಘುಹವ್ವ ರಾಜನ ಜೇಷ್ಠಪುತ್ರನು, ರಾಜಾವಳಿ ಕಥೆಯ ಉಕ್ತಿಯು ವಿದ್ವತ್‌ವಲಯದಲ್ಲಿ ಅಷ್ಟೊಂದು ಮಾನ್ಯತೆ ಪಡೆಯುತ್ತಿಲ್ಲ ಮತ್ತು ಬಹುತೇಕ ವಿದ್ವಾಂಸರ ಪ್ರಕಾರ ರಾಜವಾರ್ತಿಕದ ಪ್ರಥಮ ಅಧ್ಯಾಯದ ಅಂತಿಮ ಶ್ಲೋಕದ ಕಡೆಗೆ ಗಮನಹರಿಸುವುದು ಕಂಡುಬರುತ್ತದೆ. ಇಲ್ಲಿ ಪಂಡಿತ್ ಮಹೇಂದ್ರಕುಮಾರ್ ಶಾಸ್ತ್ರಿ ಅವರ ಹೇಳಿಕೆ ಏನೆಂದರೆ ಲಘುಹವ್ವ ಮತ್ತು ಪುರುಷೋತ್ತಮ ಎಂಬ ಎರಡೂ ಭಿನ್ನ ಭಿನ್ನ ಹೆಸರುಗಳಾಗಿದ್ದರೂ ಅವು ಒಬ್ಬನೇ ವ್ಯಕ್ತಿಯದೇ ಹೆಸರಾಗಿದೆ. ರಾಷ್ಟ್ರಕೂಟ ವಂಶದ ಎರಡನೇ ಇಂದ್ರರಾಜ ಹಾಗೂ ಕೃಷ್ಣರಾಜರು ಸೋದರರಾಗಿದ್ದರು. ಕರ್ನಾಟಕದ ಇಂದ್ರರಾಜನ ಎರಡನೇ ಪುತ್ರನಾದ ದಂತಿದುರ್ಗನ ದ್ವಿತೀಯನೂ ತನ್ನ ತಂದೆಯ ಮರಣಾನಂತರ ರಾಜಾಧಿಕಾರಿಯಾದನು. ಪ್ರಾಯಃ ದಂತಿದುರ್ಗನು ತನ್ನ ಚಿಕ್ಕಪ್ಪನಾದ ಕೃಷ್ಣರಾಜನನ್ನೇ ಅವ್ವ ಶಬ್ದದಿಂದ ಕರೆಯುತ್ತಿದ್ದಿರಬೇಕು. ಇದಾದರೂ ಸಾಮಾನ್ಯ ನಿಯಮ ಅದರಂತೆ ಪ್ರಜೆಗಳು ಅವನನ್ನು ಅವ್ವ ಎಂದೇ ಕರೆಯುತ್ತಿದ್ದಿರಬೇಕು. ಕೃಷ್ಣರಾಜ ಎಂಬುದು ಆತನ ಎರಡನೇ ಹೆಸರು, ಇವರ ಮತ್ತೊಂದು ಹೆಸರೇ ಶುಭತುಂಗ. ಈತನು ದಂತಿದುರ್ಗನ ನಂತರದ ರಾಜ್ಯಾಧಿಪತಿಯಾದನು.

ಜೈನಧರ್ಮ ಪರಂಪರೆಯಲ್ಲಿ ತೀರ್ಥಂಕರರ ಧಾರ್ಮಿಕ ಪ್ರಚಾರ ಪ್ರಸಾರದ ತರುವಾಯ ಅವರ ತೀರ್ಥ ಪರಂಪರೆಯಲ್ಲಿ ಅವರ ಶಿಷ್ಯ ಸಮುದಾಯವು ನಿರಂತರವಾಗಿ ಧರ್ಮವನ್ನು ಸಂರಕ್ಷಣೆ ಮಾಡುವ ಸಲುವಾಗಿ ಶಿಷ್ಯರ ಪ್ರಭೋದನೆಗಾಗಿ

ಜೈನಧರ್ಮದ ಉಪದೇಶಗಳನ್ನು ಬರೆದಿಡುವುದರ ಮೂಲಕ ಸಾಹಿತ್ಯ ರಚನೆಗೆ ತೊಡಗಿಸಿಕೊಂಡಿರುವುದು ಕಂಡುಬರುತ್ತದೆ. ಎಲ್ಲಿಯವರೆಗೆ ಭಗವಾನ್ ಮಹಾವೀರರ ಉಪದೇಶವು ಶಿಷ್ಯ ಸಮೂಹದಲ್ಲಿ ಸ್ಮೃತಿ ಪರಂಪರೆಯು ಕ್ಷೀಣವಾಗತೊಡಗಿತೋ ಅಂತಹ ಕಾಲಕ್ಕೆ ಜಾಗೃತಗೊಂಡ ಜೈನಾಚಾರ್ಯ ಪರಂಪರೆಯು ಮಹಾವೀರರ ಉಪದೇಶವನ್ನು ಸಂರಕ್ಷಣೆ ಮಾಡುವ ಪ್ರಯತ್ನಕ್ಕೆ ಕೈ ಹಾಕಿತು. ಅದರ ಫಲವಾಗಿ ವೀರ ನಿರ್ವಾಣ ಸಂವತ್ ೭೦೦ ರಿಂದ ೮೦೦ರ ಅವಧಿಯಲ್ಲಿ ಷಟ್‌ಖಂಡಾಗಮ ಮತ್ತು ಕಷಾಯಪ್ರಾಭೃತ, ಆಚಾರ್ಯ ಕುಂದಕುಂದರ ಪಾಹುಡಗಳೇ ಮೊದಲಾದ ಕೃತಿಗಳು ರಚನೆಗೊಂಡವು. ಇದೇ ಪರಂಪರೆ ಬೆಳೆಯುತ್ತಾ ಸಾಗುತ್ತಾ ಬಂದು ವೀರ ನಿರ್ವಾಣ ಸಂವತ್ ಸುಮಾರು ೧೨೦೦ ವರ್ಷಕ್ಕೆ (ಕ್ರಿ.ಶ. ೭ನೇ ಶತಮಾನ) ಜೈನ ಆಚಾರ್ಯ ಪರಂಪರೆಯಲ್ಲಿ ಒಬ್ಬ ಪ್ರಕಾಂಡ ವಿದ್ವಾನ ಆಚಾರ್ಯ ಉದಿಸಿ ಬಂದರು. ಅವರ ಹೆಸರೇ ಆಚಾರ್ಯ ಅಕಲಂಕದೇವ ಎಂದು. ಇವರನ್ನು ಜೈನ ಸಮಾಜವು ತುಂಬಾ ಗೌರವ ಹಾಗೂ ಆದರದಿಂದ ಸ್ಮರಿಸುತ್ತಿದೆ. ಅವರು ಜೈನ ಶಾಸನದ ಬಹು ದೊಡ್ಡ ಪ್ರಚಾರಕರು ಹಾಗೂ ದಿಗ್ವಿಜಯಿಗಳೂ ಆಗಿದ್ದಾರೆ. ನ್ಯಾಯಶಾಸ್ತ್ರವನ್ನು ಬಲ್ಲ ಒಬ್ಬ ಪ್ರಕಾಂಡ ವಿದ್ವಾನ್ ಮಾತ್ರವಲ್ಲ, ಒಬ್ಬ ಮಹಾನ್ ಪ್ರಸಿದ್ಧ ಜೈನ ದಾರ್ಶನಿಕರೂ ಆಗಿದ್ದರು. ತಮ್ಮ ಅಖಂಡ ಯುಕ್ತಿ ಪ್ರಬಲ ತರ್ಕ ಹಾಗೂ ಸಿದ್ಧಾಂತಗಳ ಸಾಮರ್ಥ್ಯಗಳಿಂದ ಭಾರತವರ್ಷದಲ್ಲೆಲ್ಲಾ ವಿಹರಿಸಿ ಧರ್ಮ ದಿಗ್ವಿಜಯವನ್ನು ಮಾಡಿದ್ದಾರೆ. ಒಂದು ಕಾಲಕ್ಕೆ ಬೌದ್ಧರ ಆಘಾತಕ್ಕೆ ಸಿಲುಕಿ ಧ್ವಸ್ತಗೊಂಡಿದ್ದ ಜೈನಸಮಾಜಕ್ಕೆ ಹೊಸ ಚೇತನವನ್ನು ಕೊಟ್ಟು ಧರ್ಮವನ್ನು ಬೆಳಗಿದ ಶ್ರೇಯಸ್ಸು ಆಚಾರ್ಯ ಅಕಲಂಕದೇವರಿಗೆ ಸಲ್ಲುತ್ತದೆ. ಅವರು ದೀದೀಪ್ಯಮಾನ ಸೂರ್ಯನಂತೆ ಉದಯಿಸಿ ತಮ್ಮ ಪ್ರಕಾಶಮಾನವಾದ ಜ್ಞಾನವೆಂಬ ಕಿರಣಗಳಿಂದ ಜನರ ಅಜ್ಞಾನ ಮತ್ತು ಅಂಧಕಾರಗಳನ್ನು ದೂರ ಮಾಡಿದ್ದಾರೆ.

ಆಚಾರ್ಯ ಅಕಲಂಕರ ಬದುಕಿನ ಘಟನೆಗೆ ಸಂಬಂಧಿಸಿದಂತೆ ಹಲವಾರು ಐತಿಹ್ಯಗಳು ದೊರಕುತ್ತವೆ. ಅವರ ಜನ್ಮಸ್ಥಳ ಯಾವುದು? ಎಂಬ ವಿಷಯವು ಇದುವರೆಗೆ ತಿಳಿದುಬಂದಿಲ್ಲ. ಆದರೂ ಬಹುತೇಕ ವಿದ್ವಾಂಸರು ಮಾನ್ಯಖೇಟವು ಅವರ ಜನ್ಮಸ್ಥಳ ಎಂದು ಒಪ್ಪಿದ್ದಾರೆ. ತತ್ವಾರ್ಥರಾಜವಾರ್ತಿಕದ ಮೊದಲನೇ ಅಧ್ಯಾಯದಲ್ಲಿ ತಾನು ಲಘುಹವ್ವನ ಮಗನೆಂದು ಹೇಳಿಕೊಂಡಿದ್ದಾನೆ ಎಂಬ ಅಂಶವು ತಿಳಿದುಬರುತ್ತದೆ. ದೊರೆಯುತ್ತಿರುವ ಅಲ್ಪಸ್ವಲ್ಪ ವಿವರಗಳಾದರು ಅಕಲಂಕರ ಬದುಕಿನ ಕುರಿತಾದ ಕಥೆಗಳು ಮಾತ್ರ ಈ ಕಥಾ ಸಮೂಹಗಳು ನೀಡುವ ಮಾಹಿತಿಗಳಾಧಾರಗಳಿಂದ ಅವರ ಜೀವನದ ಕುರಿತಾಗಿರುವ ಘಟನೆಗಳು ಈ ಮುಂದಿನಂತಿವೆ–

೧. ಬ್ರಹ್ಮ ನೇಮಿದತ್ತರು (ಕ್ರಿ.ಶ. ೧೫) ತಮ್ಮ ಆರಾಧನಾ ಕಥಾಕೋಶದಲ್ಲಿ ಆಚಾರ್ಯ ಅಕಲಂಕರ ಕುರಿತು ತಿಳಿಸಿರುವ ಕಥೆ ಈ ರೀತಿಯಾಗಿದೆ_

ಮಾನ್ಯಖೇಟ ಎಂಬ ಪುರದಲ್ಲಿ ಶುಭತುಂಗನೆಂಬ ರಾಜನು ರಾಜ್ಯವಾಳುತ್ತಿದ್ದನು. ಅವನ ಮಂತ್ರಿಯ ಹೆಸರು 'ಪುರುಷೋತ್ತಮ'. ಅವನ ಪತ್ನಿಯ ಹೆಸರು 'ಪದ್ಮಾವತಿ', ಆಕೆಯ ಗರ್ಭದಲ್ಲಿ 'ಅಕಲಂಕ ನಿಷ್ಕಲಂಕ' ಎಂಬ ಹೆಸರಿನ ಇಬ್ಬರು ಗಂಡುಮಕ್ಕಳು ಜನಿಸಿದ್ದರು. ಒಂದು ಬಾರಿ ಅಷ್ಟಾಹ್ನಿಕ ಎಂಬ ಪರ್ವದಲ್ಲಿ ಆ ಮಂತ್ರಿಯು ಕುಟುಂಬ ಸಮೇತವಾಗಿ 'ರವಿಗುಪ್ತ' ಎಂಬ ಹೆಸರಿನ ಮುನಿಗಳ ಬಳಿ ಹೋದರು. ಮುನಿಗಳು ಧರ್ಮೋಪದೇಶ ಆದ ನಂತರ, ಆ ದಂಪತಿಗಳು ಮುನಿಗಳಿಂದ ಎಂಟು ದಿನಗಳವರೆಗಿನ ಬ್ರಹ್ಮಚರ್ಯ ವ್ರತವನ್ನು ಕೈಗೊಂಡರು. ಆಗ ತಂದೆ ತಾಯಿಗಳು ತನ್ನ ಇಬ್ಬರು ಮಕ್ಕಳಿಗೂ ವಿನೋದಕ್ಕಾಗಿ ಅದೇ ವ್ರತವನ್ನು ಕೊಡಿಸಿದರು. ಆ ಮಕ್ಕಳು ದೊಡ್ಡವರಾದ ಮೇಲೆ ಅವರಿಗೆ ವಿವಾಹ ಮಾಡಬೇಕು ಎಂಬ ಕಾರಣಕ್ಕಾಗಿ ಯೋಗ್ಯ ಕನ್ಯೆಯರಿಬ್ಬರನ್ನು ಗೊತ್ತು ಮಾಡಿದರು. ಆದರೆ ಆ ಇಬ್ಬರು ಮಕ್ಕಳು ಮದುವೆಗೆ ಒಪ್ಪದೇ ನಾವು ಆಜನ್ಮ ಬ್ರಹ್ಮಚಾರಿಗಳಾಗಿ ಇರುತ್ತೇವೆಂದು ದೃಢತೆಯಿಂದ ಹೇಳಿದರು. ಇದರ ತರುವಾಯ ಅಕಲಂಕ ನಿಷ್ಕಲಂಕರು ವಿಶೇಷ ಅಧ್ಯಯನಕ್ಕಾಗಿ ಬೌದ್ಧ ಗುರುಕುಲಕ್ಕೆ ಹೋದರು. ಆ ಕಾಲದಲ್ಲಿ ಭಾರತದಲ್ಲಿ ಬೌದ್ಧ ಧರ್ಮದ ಪ್ರಚಾರ ಬಹಳ ವಿಶೇಷವಾಗಿತ್ತು. ಅದಕ್ಕಾಗಿ ಜೈನರು ಬೌದ್ಧ ಧರ್ಮದ ಕುರಿತಾಗಿ ಸಮಗ್ರ ಪರಿಚಯವನ್ನು ಮಾಡಿಕೊಳ್ಳುವುದು ಅತ್ಯಂತ ಅವಶ್ಯವಾಗಿತ್ತು. ಹೀಗಿರಲು ಬೌದ್ಧ ಗುರುಗಳ ಬಳಿ ಅಧ್ಯಯನ ಮಾಡುತ್ತಿದ್ದಾಗ ಜೈನರ ಸಪ್ತಭಂಗಿಯ ಸಿದ್ಧಾಂತವನ್ನು ಗುರುಗಳು ಹೇಳುತ್ತಿದ್ದಾಗ ಅವರ ಗ್ರಂಥದ ಪಾಠವು ಅಶುದ್ಧವಾಗಿತ್ತು. ಅದರಿಂದ ಶಿಷ್ಯರಿಗೆ ಸರಿಯಾಗಿ ತಿಳಿಸಲು ಅವರು ಸಮರ್ಥರಾಗಲಿಲ್ಲ. ಅದೇ ವೇಳೆಗೆ ಗುರುಗಳು ಬೇರೆಡೆಗೆ ಕಾರಣಾಂತರದಿಂದ ಹೋದರು. ಆ ಸಮಯಕ್ಕೆ ಆಚಾರ್ಯ ಅಕಲಂಕರು ಆ ಅಶುದ್ಧ ಪಾಠವನ್ನು ಶುದ್ಧಗೊಳಿಸಿ ಬರೆದಿಟ್ಟರು. ಆ ನಂತರ ಬಂದು ಅದನ್ನು ನೋಡಿದ ಗುರುವಿಗೆ, ಯಾರೋ ಜೈನರು ಮಾಡಿರಬೇಕೆಂಬ ಸಂಶಯ ಮೂಡಿತು. ಈ ಸಂದರ್ಭದಲ್ಲಿ ಅಕಲಂಕ ನಿಷ್ಕಲಂಕರನ್ನು ಅವರು ಹಲವು ಪರೀಕ್ಷೆಗಳಿಗೆ ಗುರಿ ಪಡಿಸಿದರು. ಎಲ್ಲಾ ಪರೀಕ್ಷೆಗಳಲ್ಲಿಯೂ ಅಕಲಂಕ ನಿಷ್ಕಲಂಕರು ಪಾರಾದರು. ಆದರೂ ರಾತ್ರಿಯ ವೇಳೆ ಮತ್ತೊಂದು ಪರೀಕ್ಷೆಯ ಸಂದರ್ಭದಲ್ಲಿ ಅವರಿಬ್ಬರು ಜಿನೇಂದ್ರ ಎಂದು ಉಚ್ಚರಿಸಿದ ಪರಿಣಾಮವಾಗಿ ಇವರು ಜೈನರು ಎಂಬುದನ್ನು ಖಚಿತ ಮಾಡಿಕೊಂಡರು ಮತ್ತು ಅವರನ್ನು ಕಾರಾಗೃಹಕ್ಕೆ ತಳ್ಳಿದರು. ಅಲ್ಲಿಂದ ಆ ಇಬ್ಬರೂ

ತಪ್ಪಿಸಿಕೊಂಡು ಹೋಗುವ ಪ್ರಯತ್ನದಲ್ಲಿ ತೊಡಗಿದರು. ಈ ವಿಷಯ ತಿಳಿದ ಬೌದ್ಧ ಗುರು ಅವರನ್ನು ಹಿಡಿದುತರುವ ಸಲುವಾಗಿ ನಾಲ್ಕು ದಿಕ್ಕುಗಳಿಗೂ ಸವಾರರನ್ನು ಅಟ್ಟಿದರು. ಕೊನೆಗೆ ಆ ಸವಾರರು ಅಕಲಂಕ ನಿಷ್ಕಲಂಕರಿಬ್ಬರನ್ನು ಬೆನ್ನಟ್ಟಿದರು. ತಮ್ಮನ್ನು ಹಿಂಬಾಲಿಸುತ್ತಿರುವುದನ್ನು ಕಂಡ ಆಚಾರ್ಯ ಅಕಲಂಕರು ತಮ್ಮ ಪ್ರಾಣ ರಕ್ಷಣೆಗಾಗಿ ದಾರಿಯ ಪಕ್ಕದಲ್ಲಿದ್ದ ಒಂದು ಕೆರೆಗೆ ಧುಮುಕಿ ಅಲ್ಲಿದ್ದ ತಾವರೆಯ ಎಲೆಗಳಿಂದ ತಮ್ಮನ್ನು ಮುಚ್ಚಿಕೊಂಡರು. ನಿಷ್ಕಲಂಕರು ತಮ್ಮ ಪ್ರಾಣ ರಕ್ಷಣೆಗಾಗಿ ಮುಂದೆ ಓಡುತ್ತಿದ್ದಾಗ, ಕೆರೆಯಲ್ಲಿ ವಸ್ತ್ರಗಳನ್ನು ತೊಳೆಯುತ್ತಿದ್ದ ಒಬ್ಬ ಅಗಸನು ತಾನೂ ಕೂಡ ಅವರೊಂದಿಗೆ ಓಡತೊಡಗಿದ. ಹಿಂಬಾಲಿಸುತ್ತಿದ್ದ ಸವಾರರು ಅವರಿಬ್ಬರ ಬಳಿ ತಲುಪಿ ಅವರೇ ಅಕಲಂಕ ನಿಷ್ಕಲಂಕರೆಂದು ತಿಳಿದು ಅವರಿಬ್ಬರನ್ನು ಕೊಂದುಹಾಕಿದರು. ಆ ಸವಾರರು ಹಿಂತಿರುಗಿ ಹೋದ ತರುವಾಯ ಅಕಲಂಕರು ಕೆರೆಯಿಂದ ಮೇಲೆ ಬಂದು ನಿರ್ಭಯವಾಗಿ ವಿಹಾರ ಮಾಡಲಾರಂಭಿಸಿದರು.

ಅದೇ ಸಮಯದಲ್ಲಿ ಕಳಿಂಗ ದೇಶದ ರತ್ನ ಸಂಚಯಪುರದ ರಾಜ ಹಿಮಶೀತಲನು ಬೌದ್ಧ ಭಕ್ತನಾಗಿದ್ದ, ಆದರೆ ರಾಣಿ ಮದನ ಸುಂದರಿಯು ಜಿನಭಕ್ತಳಾಗಿದ್ದಳು. ಒಮ್ಮೆ ಅವಳು ವೈಭವದಿಂದ ರಥೋತ್ಸವವನ್ನು ಮಾಡುವ ಬಯಕೆಯನ್ನು ಹೊಂದಿದ್ದಳು. ಅಲ್ಲಿಯ ಬೌದ್ಧ ಗುರು ಅದನ್ನು ತಡೆದು ತನ್ನೊಂದಿಗೆ ಶಾಸ್ತ್ರಾರ್ಥದಲ್ಲಿ ಜಯಿಸದೇ ರಥಯಾತ್ರೆಯನ್ನು ಮಾಡಲು ಬಿಡುವುದಿಲ್ಲ ಎಂದು ಹಟ ಮಾಡಿದನು. ಹಿಮಶೀತಲನು ಗುರುವಿಗೆ ವಿರುದ್ಧವಾಗಿ ಯಾವ ಕಾರ್ಯವನ್ನು ಮಾಡುತ್ತಿರಲಿಲ್ಲ. ರಾಣಿಯೂ ಆಗ ಧರ್ಮಸಂಕಟಕ್ಕೆ ಸಿಲುಕಿದಳು. ಅದೇ ಸಮಯಕ್ಕೆ ರಾಣಿಯ ಪುಣ್ಯದ ಫಲವಾಗಿ ಆಚಾರ್ಯ ಅಕಲಂಕರು ವಿಹಾರ ಮಾಡುತ್ತಾ ರತ್ನ ಸಂಚಯಪುರಕ್ಕೆ ತಲುಪಿದರು. ಈ ವಿಷಯ ರಾಣಿಗೂ ಗೊತ್ತಾಯಿತು. ರಾಣಿಯು ತುಂಬಾ ಭಕ್ತಿಯಿಂದ ಆಚಾರ್ಯ ಅಕಲಂಕರನ್ನು ಕಂಡು ತನ್ನ ಕಷ್ಟವನ್ನು ತಿಳಿಸಿದಳು. ಆ ಕೂಡಲೇ ಅಕಲಂಕಾಚಾರ್ಯರು ಸಂತೋಷದಿಂದ ಶಾಸ್ತ್ರಾರ್ಥ ಮಾಡಲು ಒಪ್ಪಿದರು. ಹಿಮಶೀತಲನ ರಾಜಸಭೆಯಲ್ಲಿ ಶಾಸ್ತ್ರಾರ್ಥ ಆರಂಭಗೊಂಡು ಆರು ತಿಂಗಳ ಕಾಲ ನಡೆಯಿತು. ಬೌದ್ಧ ಗುರುವನ್ನು ಜಯಿಸಲು ಅಕಲಂಕಾಚಾರ್ಯರಿಗೆ ಆಗಲಿಲ್ಲ. ಒಂದು ದಿನ ರಾತ್ರಿ ಇದರ ರಹಸ್ಯ ತಿಳಿಸಲು ಯಕ್ಷಿ ಪದ್ಮಾವತಿಯು ಅಕಲಂಕರಿಗೆ ಸೂಚನೆಯನ್ನು ನೀಡಿದಳು. ಮಾರನೆಯ ದಿನ ಅಕಲಂಕರು ರಾಜಸಭೆಯಲ್ಲಿ ಶಾಸ್ತ್ರಾರ್ಥವನ್ನು ಮಾಡದೆ ಪರದೆಯ ಒಳಗೆ ಗುರುವಿನಿಂದ ಮಣ್ಣಿನ ಕುಂಭದಲ್ಲಿ ಸ್ಥಾಪಿಸಿದ್ದ ಬೌದ್ಧ ದೇವಿ ತಾರೆಯನ್ನು ಕಿತ್ತು ಒಳಗಿದ್ದ ಕುಂಭವನ್ನು ಒಡೆದು ಹಾಕಿದರು. ತಾರಾದೇವಿ ಓಡಿಹೋದಳು. ಬೌದ್ಧಗುರು ಶಾಸ್ತ್ರಾರ್ಥದಲ್ಲಿ ಪರಾಜಿತನಾದನು.[೩]

ಐತಿಹ್ಯ ರೂಪದಲ್ಲಿ ದೊರೆಯುವ ಮತ್ತೊಂದು ಕಥೆಯೆಂದರೆ ದೇವಚಂದ್ರನ ರಾಜಾವಳೀ ಕಥೆಯಲ್ಲಿ ಬರುವ ಅಕಲಂಕರ ಕುರಿತದ್ದಾಗಿದೆ. ಅವನು ಬರೆದಿರುವಂತೆ ಅಕಲಂಕರ ಕುರಿತಾಗಿರುವ ವಿವರಗಳು ಉಪಲಬ್ಧವಿದೆ.

ಕೊನೆಟಿಪ್ಪಣಿಗಳು

೧. ಶ್ರೀಮದ್ ಭಟ್ಟಾಕಲಂಕದೇವ ವಿರಚಿತ ಅಕಲಂಕ ಗ್ರಂಥತ್ರಯಂ – ಪು.ಸಂ. ೧೧, ಸಂಪಾದಕರು : ನ್ಯಾಯಾಚಾರ್ಯ ಪಂಡಿತ ಮಹೇಂದ್ರಕುಮಾರ್ ಶಾಸ್ತ್ರಿ, ಜೈನ್ ಪ್ರಾಚೀನ ನ್ಯಾಯತೀರ್ಥ, ಪ್ರಕಾಶಕರು – ಸರಸ್ವತಿ ಪುಸ್ತಕ ಭಂಡಾರ ಅಹಮದಾಬಾದ್ – ೩೮೦೦೦೧.

೨. ನ್ಯಾಯಕುಮುದಚಂದ್ರದ ಪ್ರಸ್ತಾವನೆ.

೩. ಪಂ. ಕೇ. ಭುಜಬಲಿ ಶಾಸ್ತ್ರೀಯವರು ಬರೆದಿರುವ "ಸಂಸ್ಕೃತ ವಾಂಙ್ಮಯಕ್ಕೆ ಜೈನ ಕವಿಗಳ ಕಾಣಿಕೆ" ಪು.ಸಂ. ೫೧ ರಿಂದ ೫೩. ಪ್ರಕಾಶಕರು–ಆದರ್ಶ ಜೈನ ಗ್ರಂಥಮಾಲೆ ಮೂಡಬಿದಿರೆ – ೧೯೭೧.

ಆಕರ ಗ್ರಂಥಗಳು

೧. ಆಚಾರ್ಯ ಅಕಲಂದೇವ ವಿರಚಿತ **ಅಕಲಂಕ ಗ್ರಂಥತ್ರಯಂ.**

೨. **ನ್ಯಾಯಕುಮುದಚಂದ್ರದ** ಪ್ರಸ್ತಾವನೆ.

೩. ಪಂ. ಕೇ. ಭುಜಬಲಿ ಶಾಸ್ತ್ರೀಯವರು ಬರೆದಿರುವ **ಸಂಸ್ಕೃತ ವಾಂಙ್ಮಯಕ್ಕೆ ಜೈನ ಕವಿಗಳ ಕಾಣಿಕೆ.**

೪. ಬ್ರಹ್ಮ ನೇಮಿದತ್ತನ **ಆರಾಧನಾ ಕಥಾಕೋಶ.**

೫. ದೇವಚಂದ್ರನ **ರಾಜಾವಳಿ ಕಥೆ.**

೬. ಪ್ರಭಾಚಂದ್ರರ **ಕಥಾಕೋಶ.**

೭. **ವಿವೇಕಾಭ್ಯುದಯ** ಮಾಸಿಕ ಪತ್ರಿಕೆ–ಸಂಪಾದಕರು ಶ್ರೀ ಬಿ. ಚಂದ್ರಯ್ಯ ಪ್ರಕಾಶಕರು ಪರಮಪೂಜ್ಯ ಸ್ವಸ್ತಿಶ್ರೀ ಪಂಡಿತಾಚಾರ್ಯವರ್ಯ ಚಾರುಕೀರ್ತಿ ಮಹಾಸ್ವಾಮೀಜಿ.

೮. **ಜೈನಶಿಲಾಲೇಖ ಸಂಗ್ರಹ.**

□□□

೨. ಅಭಿನವ ವಾದಿವಿದ್ಯಾನಂದನ 'ಕಾವ್ಯಸಾರ'

– ವೃಂದ ಎನ್.ಕೆ.

ಮಾತಿನ ಆವಿಷ್ಕಾರ ಮಾಡಿದ ಮನುಷ್ಯ, ಆ ಮಾತುಗಳನ್ನು ಶಾಶ್ವತಗೊಳಿಸಬೇಕೆಂದು ಬರೆಹದ ರೂಪದಲ್ಲಿ ಸಂಗ್ರಹಿಸಿದನು. ಹೀಗೆ 'ಸಾಹಿತ್ಯ'ದ ಆವಿಷ್ಕಾರವಾಯಿತು. ಆದರೆ ಸಾಹಿತ್ಯ ಕೂಡ ತನ್ನ ಮೂಲರೂಪದಲ್ಲಿ ಶಾಶ್ವತವಾಗಿ ಉಳಿಯಲಾರದೆನಿಸಿದಾಗ ಅದರಲ್ಲಿಯ ಅಮೂಲ್ಯವಾದುದನ್ನು ಹಿಡಿದಿಡಬೇಕೆಂದು, ಅಮೂಲ್ಯ ಭಾಗಗಳನ್ನು ಒಂದು ಕಡೆ ಕೆಲವು ನಿರ್ದಿಷ್ಟ ತತ್ವಗಳನ್ನಾಧರಿಸಿ ಕೂಡಿಸಿಡುವ ಕೆಲಸ ಆರಂಭವಾಯಿತು. ಇದೇ ಸಂಕಲನ ಸಾಹಿತ್ಯವೆನಿಸಿದೆ.[೧] ಸಂಕಲನ ಯಾವುದೇ ಒಂದು ಕಾವ್ಯದ ಸಾರಸಂಗ್ರಹವಲ್ಲ. ಬೇರೆ ಬೇರೆ ಕಾವ್ಯಗಳಲ್ಲಿಯ ರಸಪೂರ್ಣವಾದ ಬಿಡಿ ಪದ್ಯಗಳ ಸಂಗ್ರಹ.

ಕನ್ನಡ ವಿಷಯ ವಿಶ್ವಕೋಶದಲ್ಲಿ "ಸಂಕಲನವೆಂದರೆ ಇತರರ ರಚನೆಗಳಿಂದ ಆಯ್ದ ಅವತರಣಿಕೆಗಳನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಅಳವಡಿಸಿಕೊಂಡ ಸಂದರ್ಭ ಗ್ರಂಥ"[೨] ಎನ್ನಲಾಗಿದೆ. ಕಾವ್ಯಸಂಪ್ರದಾಯವಾದ ಅಷ್ಟಾದಶ ವರ್ಣನೆಗಳಿಗನುಸಾರವಾಗಿ ಸಂಯೋಜನೆಗೊಂಡಿರುವ ಸಂಕಲನಗಳು ಸೃಜನೇತರ ಸಾಹಿತ್ಯಕ್ಕೆ ಸೇರುತ್ತವೆಯಾದರೂ ಕಾವ್ಯಗಳಲ್ಲಿಯ ಅತ್ಯುತ್ತಮ ಪ್ರತಿಭಾ ಮಾದರಿಗಳ ಸಂಗ್ರಹಾಲಯಗಳಾಗಿವೆ. ಸಂಕಲನಕ್ಕೂ ಸಂಪಾದನೆಗೂ ವ್ಯತ್ಯಾಸವಿದೆ. ಒಬ್ಬ ಕವಿಯ, ಒಂದು ಕೃತಿಯ ಭಿನ್ನ ಪಾಠಾಂತರಗಳ ನಡುವೆ ಸರಿಯಾದ ಪಾಠಗಳನ್ನು ನಿರ್ಣಯಿಸುವುದು ಸಂಪಾದನೆಯಾದರೆ, ಹಲವು ಕೃತಿಗಳಿಂದ ಸುಂದರವಾದ ಕಾವ್ಯಭಾಗಗಳನ್ನು ಆಯ್ದು ಸಂಗ್ರಹಿಸಿರುವುದು ಸಂಕಲನವಾಗಿದೆ. ಸಂಪಾದನೆ ವಿದ್ವತ್ತನ್ನು ಬಯಸಿದರೆ ಸಂಕಲನ ಒಳ್ಳೆಯ ಅಭಿರುಚಿಯನ್ನು ಅಪೇಕ್ಷಿಸುತ್ತದೆ.

ಕೆ. ಕೃಷ್ಣಮೂರ್ತಿ ಅವರ ಅಭಿಪ್ರಾಯದಂತೆ "ಸಂಕಲನ ಗ್ರಂಥಗಳು ಒಂದು ಭಾಷಾ ಸಾಹಿತ್ಯದ ವೈಭವಗಳ ದಿಗ್ದರ್ಶಿಕೆಗಳು".[೩] ಯಾವುದೇ ಸಾಹಿತ್ಯದಲ್ಲಿ ಸಂಕಲನ ಗ್ರಂಥಗಳು ಕಾಣಿಸಿಕೊಂಡರೆ ಆ ಸಾಹಿತ್ಯ ಸಮೃದ್ಧವಾಗಿ ಬೆಳೆದಿದೆ ಎಂದರ್ಥ. ಈ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಪರಂಪರೆಯನ್ನು ಪರಿಚಯಿಸುವ ಸಂಕಲನಗಳಲ್ಲಿ ಅಭಿನವ ವಾದಿವಿದ್ಯಾನಂದನ 'ಕಾವ್ಯಸಾರ'ವು ಪ್ರಮುಖವಾದುದು.

ಅಭಿನವ ವಾದಿವಿದ್ಯಾನಂದನ ಕಾಲವನ್ನು ನಿರ್ಣಯಿಸಲು ಅವನ ಕೃತಿ 'ಕಾವ್ಯಸಾರ', ವರ್ಧಮಾನನು ರಚಿಸಿದ 'ದಶಭಕ್ತ್ಯಾದಿ ಮಹಾಶಾಸ್ತ್ರ' ಮತ್ತು ನಗರದ ೪೬ನೆಯ ಶಾಸನವನ್ನು ಆಶ್ರಯಿಸಬೇಕಾಗಿದೆ. ಕಾವ್ಯಸಾರದ ಹಸ್ತಪ್ರತಿಯಲ್ಲಿ 'ವಿಜಯ ಸಂವತ್ಸರದ ಭಾದ್ರಪದ ಬ.೩ರಲ್ಲೂ ಶ್ರೀಮದಭಿನವವಾದಿವಿದ್ಯಾನಂದ ಸ್ವಾಮಿಗಳು ಭಲ್ಲಾತಕೀಪುರವರಾಧೀಶ್ವರ ಬೈರಾಗಿಗೆ ಬರಸಿಕೊಟ್ಟ ಕಾವ್ಯಸಾರಕ್ಕೆ ಮಂಗಳ ಮಹಾಶ್ರೀ' ಎಂದಿದೆ. ಇಲ್ಲಿರುವ ಭಲ್ಲಾತಕೀಪುರ ಎಂಬುದು ಗೇರುಸೊಪ್ಪೆಗಿದ್ದ ಮತ್ತೊಂದು ಹೆಸರು. ಬೈರಾಗಿ ಎಂಬುದು ಲಿಪಿದೋಷದಿಂದ ಉಂಟಾಗಿದೆ. ನಗರದ ೪೬ನೆಯ ಶಾಸನದಿಂದ ವಿದ್ಯಾನಂದನು ಸಾಳುವರಲ್ಲಿ ಆಶ್ರಿತನಾಗಿದ್ದನೆಂಬುದು ಶತಸ್ಸಿದ್ಧ. ಕಾವ್ಯಸಾರದಲ್ಲಿ ಉಲ್ಲೇಖಿತವಾಗಿರುವ 'ಬೈರಾಗಿ' ಎಂಬುದನ್ನು ಭೈರವ, ಭೈರರಸ ಎಂದು ವಿವೇಚಿಸುವುದಾದರೆ; ನಗಿರೆಯಲ್ಲಿ ಭೈರವ ಹೆಸರಿನ ಇಬ್ಬರು ರಾಜರಿದ್ದು, ಹಿರಿಯ ಭೈರವನು ಕ್ರಿ.ಶ. ೧೪೩೦ ರಿಂದ ೧೪೬೨ರವರೆಗೆ ಆಳಿದಂತೆ ತಿಳಿಯುತ್ತದೆ.[೯] ಕ್ರಿ.ಶ. ೧೪೬೨ರಲ್ಲಿ ಅಧಿಕಾರಕ್ಕೆ ಬಂದ ಇವನ ಸಹೋದರನಾದ ಚಿಕ್ಕಭೈರವನು ಕ್ರಿ.ಶ. ೧೪೭೧ರವರೆಗೆ ಆಳ್ವಿಕೆ ನಡೆಸಿದನು.[೧೦] ವಿದ್ಯಾನಂದನು ಹೇಳುವ ವಿಜಯ ಸಂವತ್ಸರ ಭಾದ್ರಪದ ಬ.೩ನ್ನು ಮೇಲಿನ ಭೈರವ ಹೆಸರಿನ ಅರಸರ ಕಾಲಘಟ್ಟಕ್ಕೆ ಹೊಂದಿಸಿಕೊಂಡರೆ ಅದು ಶಕವರ್ಷ ೧೩೯೫ ಭಾದ್ರಪದ ಬ.೩ ಗುರುವಾರಕ್ಕೆ ಹೊಂದುತ್ತದೆ, ಅಂದರೆ ಕ್ರಿ.ಶ. ೧೪೭೩ ಸೆಪ್ಟೆಂಬರ್ ೯ ಆಗುತ್ತದೆ. ಆದರೆ ಕ್ರಿ.ಶ. ೧೪೭೧ರಲ್ಲಿ ಚಿಕ್ಕಭೈರವ ಮತ್ತು ಆತನ ಚಿಕ್ಕಮ್ಮನ ಮಗನಾದ ಸಾಳ್ವಮಲ್ಲರ ನಡುವೆ ನಗಿರೆಯ ಸಿಂಹಾಸನಕ್ಕಾಗಿ ಯುದ್ಧ ನಡೆದು, ವಿಜಯಿಯಾದ ಸಾಳ್ವಮಲ್ಲನು ಅಧಿಕಾರಕ್ಕೆ ಬಂದನು.[೧೧] ಚಿಕ್ಕಭೈರವನ ಆಳ್ವಿಕೆಯನ್ನು ದಾಖಲಿಸಿರುವ ಕ್ರಿ.ಶ. ೧೪೭೧ರ ಅನಂತರದ ಯಾವುದೇ ಶಾಸನವು ದೊರೆತಿಲ್ಲವಾದ್ದರಿಂದ, ಸಾಳ್ವಮಲ್ಲನೊಂದಿಗಿನ ಯುದ್ಧದಲ್ಲಿ ಅಥವಾ ಸ್ವಲ್ಪ ಕಾಲದ ಅನಂತರದಲ್ಲಿ ಚಿಕ್ಕಭೈರವನು ಮಡಿದಿರಬೇಕು. ವಿದ್ಯಾನಂದನು ಚಿಕ್ಕಭೈರವನ ಆಣತಿಯಂತೆ ಕೃತಿ ರಚನೆಗೆ ತೊಡಗಿದ್ದು, ತನ್ನ ಆಶ್ರಯದಾತನ ನಿಧನಾನಂತರ ಕ್ರಿ.ಶ. ೧೪೭೩ರಲ್ಲಿ ತನ್ನ ಕೃತಿಯನ್ನು ಪೂರ್ಣಗೊಳಿಸಿದ್ದಾನೆ. ಆದ್ದರಿಂದ ಕೃತಿಯಲ್ಲಿ 'ಭಲ್ಲಾತಕೀಪುರವರಾಧೀಶ್ವರ ಬೈರಾಗಿಗೆ ಬರಸಿಕೊಟ್ಟ....' ಎಂದಿರುವುದು ಚಿಕ್ಕಭೈರವನನ್ನು ಸೂಚಿಸುತ್ತದೆ.

ವರ್ಧಮಾನ ಕವಿಯು ರಚಿಸಿದ ನಗರದ ಶಾಸನವೊಂದರಲ್ಲಿ[೧೨] ವಿದ್ಯಾನಂದನ ವಾದಕೌಶಲವನ್ನು, ಧಾರ್ಮಿಕ ಕಾರ್ಯಗಳನ್ನು ವಿವರಿಸಲಾಗಿದ್ದು, ಶಾಸನದಲ್ಲಿ ಕಾಲವನ್ನು ಸೂಚಿಸಿಲ್ಲ. ಬಿ.ಎಲ್.ರೈಸ್ ಇದರ ಕಾಲವನ್ನು ೧೫೩೦ ಎಂದು ನಿರ್ದೇಶಿಸಿದ್ದಾರೆ.[೧೩] ಶಾಸನದಲ್ಲಿ ಹಲವು ಅರಸರ ಆಳ್ವಿಕೆಯನ್ನು ಉಲ್ಲೇಖಿಸಿದ್ದು, ಇವರಲ್ಲಿ ಮುಖ್ಯನಾದವನು ವಿಜಯನಗರದ ಕೃಷ್ಣದೇವರಾಯ. ನರಸಿಂಹಕುಮಾರ

ಕೃಷ್ಣರಾಯನ ಸಭೆಯಲ್ಲಿ ವಿದ್ಯಾನಂದನು ತನ್ನ ವಾಕ್ಬಲದಿಂದ ಪರಮತ ವಾದಿಗಳನ್ನು ಸೋಲಿಸಿದಂತೆ ಶಾಸನೋಲ್ಲೇಖವಿದೆ. ಕೃಷ್ಣದೇವರಾಯನು ನಾಡು ಕಂಡ ಪ್ರಖ್ಯಾತ ಅರಸನಾಗಿದ್ದು, ಕ್ರಿ.ಶ. ೧೫೦೯ ರಿಂದ ೧೫೨೯ರವರೆಗೆ ವಿಜಯನಗರವನ್ನು ಆಳಿದನು.[೧೪] ಅಲ್ಲದೆ ಶಾಸನದಲ್ಲಿ ವಿದ್ಯಾನಂದನು ಕಾರ್ಕಳದ ಭೈರವ ಭೂಪಾಲನ ಆಸ್ಥಾನದಲ್ಲಿ ಜೈನ ಧರ್ಮವನ್ನು ಬೆಳಗಿದ ಉಲ್ಲೇಖವಿದೆ. ಕಾರ್ಕಳದ ಭೈರವರಲ್ಲಿ ಈ ಹೆಸರು ಸಾಮಾನ್ಯವಾಗಿದ್ದು, ಕ್ರಿ.ಶ. ೧೫೦೧ ರಿಂದ ೧೫೪೦ರ ಅವಧಿಯಲ್ಲಿ ೪ನೆಯ ಭೈರವ ಅಥವಾ ಇಮ್ಮಡಿ ಭೈರರಸವೊಡೆಯನ ಆಳ್ವಿಕೆ ಇದ್ದಂತೆ ತಿಳಿಯುತ್ತದೆ.[೧೫] ಜೊತೆಗೆ ಶಾಸನವು ನಂಜರಾಯ ಪಟ್ಟಣದ ನರಪತಿ ನಂಜಿದೇವನ ಸಭೆಯಲ್ಲಿ ವಿದ್ಯಾನಂದನು ವಾದಿಗಳನ್ನು ಗೆದ್ದನೆಂದು ಹೇಳಿದೆ. ಚೆಂಗಾಳ್ವ ರಾಜವಂಶಜರಲ್ಲಿ ನಾಲ್ಕನೆಯವನಾದ ನಂಜರಾಜನು ಕೊಡಗಿನಲ್ಲಿ ತನ್ನ ಹೆಸರಿನ ನಂಜರಾಯ ಪಟ್ಟಣವನ್ನು ಸ್ಥಾಪಿಸಿ, ಕ್ರಿ.ಶ. ೧೫೦೨ ರಿಂದ ೧೫೩೩ರವರೆಗೆ ಆಳಿದಂತೆ ಹುಣಸೂರು ಶಾಸನದಿಂದ ತಿಳಿದು ಬರುತ್ತದೆ.[೧೬] ಮೇಲೆ ಉಲ್ಲೇಖಿಸಿದ ರಾಜರ ಆಳ್ವಿಕೆಯ ಆಧಾರದ ಮೇಲೆ ಶಾಸನದ ಕಾಲ ಕ್ರಿ.ಶ. ೧೫೩೦ ಎಂಬುದು ಒಪ್ಪಿತವಾಗುತ್ತದೆ.

ನಗರ ಶಾಸನದಲ್ಲಿ 'ಗುರುನೃಪಾಲನಾಸ್ಥಾನದೊಳೆಂ ಕರ್ಣಾಟಕ ದಕ್ಷ ಕೃತಿಯಂ ವರ್ಣಿಸಿ ಜಸವಡದೆ ವಾದಿವಿದ್ಯಾನಂದ' ಎಂಬ ಸ್ತುತಿಯಿದೆ. ಮೂಡಬಿದಿರೆಯ ಹೊಸಬಸ್ತಿಯ ಶಾಸನದಿಂದ ನಗಿರೆಯನ್ನು ಆಳಿದ ಹಿರಿಯ ಭೈರವನಿಗೆ ಗುರುರಾಯನೆಂಬ ಮಗನಿದ್ದನೆಂದು ತಿಳಿಯುತ್ತದೆ.[೧೭] ನಗಿರೆಯಲ್ಲಿ 'ಅಳಿಯಸಂತಾನ ಪದ್ಧತಿ'ಯಿದ್ದು, ಗುರುರಾಯನು ಆಳ್ವಿಕೆ ನಡೆಸಿರುವುದಕ್ಕೆ ಯಾವುದೇ ಆಧಾರಗಳಿಲ್ಲ. ಸಾಳುವ ಮನೆತನದ ಮತ್ತೊಂದು ಶಾಖೆಯಾದ ಹಾಡುವಳ್ಳಿಯಲ್ಲಿ ಗುರುರಾಯ ಎಂಬ ಹೆಸರಿನ ರಾಜ ಆಳ್ವಿಕೆ ನಡೆಸಿರುವುದಕ್ಕೆ ಶಾಸನಾಧಾರಗಳಿವೆ. ಎರಡನೆಯ ಸಂಗಿರಾಯನ ಮಗನಾದ ಗುರುರಾಯ ಒಡೆಯನು ತನ್ನ ಸಹೋದರ ದೇವರಸ ಒಡೆಯನ ತರುವಾಯ ಕ್ರಿ.ಶ. ೧೫೨೭ರಲ್ಲಿ ಅಧಿಕಾರಕ್ಕೆ ಬಂದನು.[೧೮] ಈತನು ಕ್ರಿ.ಶ. ೧೫೨೭ ರಿಂದ ೧೫೩೩ರವರೆಗೆ ಆಳಿದ್ದು,[೧೯] ನಗರ ಶಾಸನದ ಕಾಲಕ್ಕೆ ಸರಿ ಹೊಂದುತ್ತದೆ. ಕ್ರಿ.ಶ. ೧೪೭೩ರಲ್ಲಿ ನಗಿರೆಯ ಚಿಕ್ಕಭೈರವನ ಆಜ್ಞೆಯಂತೆ ಕೃತಿ ರಚಿಸಿದ ವಿದ್ಯಾನಂದ ಕ್ರಿ.ಶ. ೧೫೩೦ರ ಆಸುಪಾಸಿನಲ್ಲಿ ಹಾಡುವಳ್ಳಿಯ ಗುರುರಾಯನಲ್ಲಿ ಆಶ್ರಿತನಾಗಿರಬೇಕು. ಇದರಿಂದ ಶಾಸನದ ಕರ್ತೃ ವರ್ಧಮಾನ ವಿದ್ಯಾನಂದನು ಗುರುನೃಪಾಲನ ಆಸ್ಥಾನದಲ್ಲಿ ಕೃತಿಯನ್ನು ರಚಿಸಿರಬೇಕೆಂದು ಭಾವಿಸಿದಂತಿದೆ ಅಥವಾ ವಿದ್ಯಾನಂದನು ಗುರುರಾಯನ ಆಸ್ಥಾನದಲ್ಲಿಯೂ

ಧಾವಿಸುವ ಸಕಾಲಿಕ ಪ್ರಜ್ಞೆ, ವಿದೇಶಿಯನನ್ನು ವಾದ ಮಾಡಿ ಸೋಲಿಸುವ ಧೈರ್ಯ, ಧೀಶಕ್ತಿ ಶ್ಲಾಘನೀಯವಾದದ್ದು. ಕ್ರೈಸ್ತಮತ ಪ್ರಚಾರಕನನ್ನು ಧಾರ್ಮಿಕ ಜಿಜ್ಞಾಸೆಗೆಳೆದು ವಾದ ಮಾಡಿ ಸೋಲಿಸಿದ್ದು, ಇಡೀ ಇಂಡಿಯಾದ ಸಾಂಸ್ಕೃತಿಕ ಸಂದರ್ಭದಲ್ಲಿಯೇ ವಾದಿವಿದ್ಯಾನಂದರೇ ಮೊತ್ತಮೊದಲಿಗರೆಂಬುದು ಕನ್ನಡಿಗರೂ ಕನ್ನಡ ನಾಡೂ ಹೆಮ್ಮೆ ಪಡುವ ವಿಚಾರ"[೨೪] ಎಂದು ಹೇಳಿರುವುದು ಸ್ವಾಗತಾರ್ಹವಾಗಿದೆ.

ಕಾವ್ಯಸಾರ : ಕವಿಚರಿತೆಕಾರರು ನಗರ ಶಾಸನದ

ಅರ್ಣವವೇಷ್ಟಿತ ವಸುಧಾ
ಕರ್ಣೋಪಮ ಗುರುನೃಪಾಲನಾಸ್ಥಾನದೊಳೇಂ
ಕರ್ಣಾಟದಕ್ಷ ಕೃತಿಯಂ
ವರ್ಣಿಸಿ ಜಸವಡೆದೆ ವಾದಿ ವಿದ್ಯಾನಂದ

ಎಂಬ ಪದ್ಯದ ಆಧಾರದ ಮೇಲೆ ವಿದ್ಯಾನಂದ "ಕನ್ನಡದಲ್ಲಿ ಒಂದು ಗ್ರಂಥವನ್ನು ಬರೆದಂತೆ ತಿಳಿಯುತ್ತದೆ. ಇದು ಕಾವ್ಯಸಾರವೇ ಆಗಿರಲಾರದು, ಬೇರೆ ಗ್ರಂಥವಾಗಿರಬೇಕು"[೨೫] ಎಂದು ಊಹಿಸುತ್ತಾರೆ. ಆದರೆ ಸದ್ಯಕ್ಕೆ ಕಾವ್ಯಸಾರವನ್ನು ಹೊರತುಪಡಿಸಿ ಈ ಕವಿಯ ಹೆಸರಿನಲ್ಲಿ ಬೇರೆ ಯಾವ ಕೃತಿಯೂ ದೊರಕದೆ ಇರುವುದರಿಂದ ಅದು ಕಾವ್ಯಸಾರವೇ ಇರಬಹುದೆಂದು ಭಾವಿಸಬಹುದು.

'ಕಾವ್ಯಸಾರ' ಅಭಿನವ ವಾದಿವಿದ್ಯಾನಂದನಿಂದ ಸಂಕಲಿತವಾದ ಹಳಗನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಎರಡನೆಯ ಸಂಕಲನ ಗ್ರಂಥ. ಮೊದಲನೆಯ ಸಂಕಲನವಾದ ಮಲ್ಲಿಕಾರ್ಜುನನ 'ಸೂಕ್ತಿಸುಧಾರ್ಣವ'ವು ವಿದ್ಯಾನಂದನ 'ಕಾವ್ಯಸಾರ'ಕ್ಕೆ ಮಾದರಿಯಾಗಿದೆ. "ಸೂಕ್ತಿಸುಧಾರ್ಣವ–ಅಭಿನವ ವಾದಿವಿದ್ಯಾನಂದನ ಕಾವ್ಯಸಾರಗಳ ನಡುವೆ ಸು. ೨೭೫ ಪದ್ಯಗಳು ಸಮಾನವಾಗಿರುವುದರಿಂದ ಮಲ್ಲಿಕಾರ್ಜುನನ ಕೃತಿಯನ್ನು ಅಭಿನವ ವಾದಿವಿದ್ಯಾನಂದನು ನೋಡಿರುವುದೂ ಬಳಸಿರುವುದೂ ಬಹುಮಟ್ಟಿಗೆ ಸಿದ್ಧವಾದ ಹಾಗೆಯೇ".[೨೬] ಆದರೂ ಆಕರ ಕೃತಿಗಿಂತ ಭಿನ್ನವಾಗಿದೆ.

ಅಭಿನವ ವಾದಿವಿದ್ಯಾನಂದನ ಕಾವ್ಯಸಾರದಲ್ಲಿ ೪೫ ಅಧ್ಯಾಯಗಳೂ ೧೧೪೩ ಪದ್ಯಗಳೂ ಇವೆ. ಸೂಕ್ತಿ ಸುಧಾರ್ಣವ ಮತ್ತು ಮಲ್ಲಕವಿಯ ಕಾವ್ಯಸಾರಗಳಲ್ಲಿ ಅಷ್ಟಾದಶ ವರ್ಣನೆಗಳಿಗೆ ಸಂಬಂಧಿಸಿದ ಪದ್ಯಗಳು ಸಂಕಲಿತವಾಗಿದ್ದರೆ, ಅಭಿನವ ವಾದಿವಿದ್ಯಾನಂದನು ಕಾವ್ಯದ ಹದಿನೆಂಟು ಅಂಗಗಳನ್ನು ಮೂಲಭೂತವಾಗಿ ಉಳಿಸಿಕೊಂಡಿದ್ದರೂ ಅನೇಕ ಉಪವಿಭಾಗಗಳನ್ನು ಮಾಡಿಕೊಂಡಿರುವುದರಿಂದ ಅಧ್ಯಾಯಗಳ ಸಂಖ್ಯೆಯನ್ನು ಬೆಳೆಸಿದೆ. ಸಂಖ್ಯೆಯ ದೃಷ್ಟಿಯಿಂದ ಹೆಚ್ಚಿನ ಪದ್ಯಗಳು ಚಂದ್ರೋದಯ ವರ್ಣನಂ(೯೩)ದಲ್ಲಿವೆ. ಕಡಿಮೆ ಪದ್ಯಗಳು ಸ್ವಪ್ನ ವರ್ಣನಂ(೨)ದಲ್ಲಿವೆ.

ಅಧ್ಯಾಯಗಳು : ೧. ಪೀಠಿಕಾ ಸಂಧಿ (೬೬), ೨. ಸಮುದ್ರ ವರ್ಣನೆ (೨೦), ೩. ದೇಶ ವರ್ಣನೆ (೩೯), ೪. ನಗರೋಪ ವರ್ಣನೆ (೩೫), ೫. ಪುರ ವರ್ಣನೆ (೪೯), ೬. ರಾಜ ವರ್ಣನಂ (೫೩), ೭. ಸ್ತ್ರೀರೂಪ ವರ್ಣನಂ (೭೧), ೮. ಪುತ್ರದೋಹಲ ವರ್ಣನೆ (೫), ೯. ಪುಷ್ಪವತೀ ವರ್ಣನೆ (೯), ೧೦. ಸ್ವಪ್ನ ವರ್ಣನೆ (೨), ೧೧. ಗರ್ಭ ವರ್ಣನೆ (೧೧), ೧೨. ಕುಮಾರೋದಯ ವರ್ಣನೆ (೪), ೧೩. ಜನ್ಮಾಭಿಷ ವರ್ಣನೆ (೬), ೧೪. ಬಾಲಕೇಳಿ ವರ್ಣನೆ (೯), ೧೫. ಪುರುಷರೂಪ ವರ್ಣನೆ (೬), ೧೬. ಆಸ್ಥಾನ ವರ್ಣನೆ (೨೦), ೧೭. ಶೌರ್ಯ ವರ್ಣನೆ (೩೪), ೧೮. ದೂತ ವರ್ಣನೆ (೨೭), ೧೯. ಅಶುಭ ವರ್ಣನೆ (೬), ೨೦. ಕೋಂಟೆಗಾಳಗದ ವರ್ಣನೆ (೫), ೨೧. ಯುದ್ಧ ವರ್ಣನೆ (೬೪), ೨೨. ಪುರಪ್ರವೇಶ ವರ್ಣನೆ (೧೫), ೨೩. ಪುರುಷ ವಿರಹ ವರ್ಣನೆ (೨೭), ೨೪. ಸ್ತ್ರೀ ವಿರಹ ವರ್ಣನೆ (೪೭), ೨೫. ಅಲಂಕಾರ ವರ್ಣನೆ (೨೧), ೨೬. ಸುರತ ವರ್ಣನೆ (೩೨), ೨೭. ಮಾಗಿಯ ವರ್ಣನೆ (೧೬), ೨೮. ಶಿಶಿರ ವರ್ಣನೆ (೫), ೨೯. ವಸಂತ ವರ್ಣನೆ (೩೨), ೩೦. ಸರೋವರ ವರ್ಣನೆ (೪೬), ೩೧. ನಿದಾಘ ವರ್ಣನೆ (೧೬), ೩೨. ವರ್ಷರ್ತು ವರ್ಣನೆ (೪೮), ೩೩. ಶರದೃತು ವರ್ಣನೆ (೨೩), ೩೪. ಸೂರ್ಯೋದಯ ವರ್ಣನೆ (೮), ೩೫. ಸೂರ್ಯಾಸ್ತಮಯ ವರ್ಣನೆ (೯), ೩೬. ರಾತ್ರಿಯ ವರ್ಣನೆ (೩೧), ೩೭. ಚಂದ್ರೋದಯ ವರ್ಣನೆ (೯೩), ೩೮. ಪ್ರಭಾತ ವರ್ಣನೆ (೯), ೩೯. ಪರ್ವತ ವರ್ಣನೆ (೧೪), ೪೦. ಕಾನನ ವರ್ಣನೆ (೨೨), ೪೧. ಗಜ ವರ್ಣನೆ (೧೪), ೪೨. ಶಬರ ವರ್ಣನೆ (೨೯), ೪೩. ಬೇಂಟೆಯ ವರ್ಣನೆ (೧೯), ೪೪. ತಪೋವನ ವರ್ಣನೆ (೬), ೪೫. ವೈರಾಗ್ಯ ವರ್ಣನೆ (೨೩).

ಸಮುದ್ರ ವರ್ಣನೆಯಿಂದ ಯುದ್ಧ ವರ್ಣನೆಯವರೆಗಿನ ಅಷ್ಟಾದಶ ಕಾವ್ಯಾಂಗಗಳು ಕಾವ್ಯಸಾರದಲ್ಲಿ ನಿರೂಪಿತವಾಗಿದ್ದರೂ ವ್ಯವಸ್ಥಿತ ಕ್ರಮದಲ್ಲಿಲ್ಲ. "ಸೂಕ್ತಿ ಸುಧಾರ್ಣವದ ಹಾಗೆಯೇ ಇಲ್ಲಿಯೂ ಅಷ್ಟಾದಶ ವರ್ಣನೆಗಳ ಪರಿಕ್ರಮವನ್ನು ಹಿಡಿದು ಪೂರ್ವಕವಿ ಕೃತ ಕಾವ್ಯಗಳ ಪದ್ಯಗಳಲ್ಲಿ ಕೆಲವನ್ನು ಆಯ್ದು ಸಂಕಲನ ಗ್ರಂಥವನ್ನು ಸಿದ್ಧಪಡಿಸುವುದೇ ಹವಣಿಕೆಯಾದರೂ, ವರ್ಣನೆಯ ಉಪಾಂಗಗಳನ್ನೂ ಇತರ ವರ್ಣನಾಂಶಗಳನ್ನೂ ಬಿಡಿಸಿ ಬಿಡಿಸಿ ಅಧ್ಯಾಯಗಳ ಸಂಖ್ಯೆಯನ್ನು ಬೆಳೆಸಿದೆ. ಆದರೆ ಹೀಗೆ ಮಾಡುವಲ್ಲಿ ಸೂಕ್ತಿಸುಧಾರ್ಣವದಲ್ಲಿ ಕಂಡುಬರುವ ಅಚ್ಚುಕಟ್ಟಿಲ್ಲ; ಅಸ್ತವ್ಯಸ್ತತೆಯೇ ಕಂಡುಬರುತ್ತದೆ".[೨೭]

ವಿದ್ಯಾನಂದನ ಕಾವ್ಯಸಾರದ ಬಹುತೇಕ ಪದ್ಯಗಳಿಗೆ ಆಕರ ಸೂಚಿತವಾಗಿದೆ. ಕೇವಲ ೪೭ ಪದ್ಯಗಳ ಆಕರ ಮಾತ್ರ ತಿಳಿದಿಲ್ಲ. ಒಂದನೆಯ ಗುಣವರ್ಮನ

೨. ಜವರೇಗೌಡ ದೇ.(ಸಂ), ಕನ್ನಡ ವಿಷಯ ವಿಶ್ವಕೋಶ (ಸಂ.೧), ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ., ೧೯೬೯, ಪು. ೩೫೮.

೩. ಅದೇ, ಪು. ೩೫೮.

೪. ಯಾಕೊಳ್ಳಿ ವಾಯ್ ಎಂ., ಪ್ರಾಚೀನ ಕನ್ನಡ ಕಾವ್ಯ ಸಂಕಲನಗಳು, ಪೂರ್ವೋಕ್ತ, ಪು. ೫೪.

೫. ನರಸಿಂಹಾಚಾರ್ ಎಸ್.ಜಿ., ರಾಮಾನುಜಯ್ಯಂಗಾರ್ ಎಂ.ಎ. (ಸಂ), ಅಭಿನವವಾದಿವಿದ್ಯಾನಂದ ಸಂಕಲಿತ ಕಾವ್ಯಸಾರಂ, ಪೀಠಿಕೆ, ಕರ್ನಾಟಕ ಕಾವ್ಯಮಂಜರಿ, ಮೈಸೂರು, ೧೮೯೮.

೬. ನರಸಿಂಹಾಚಾರ್ಯ ಆರ್., ಕರ್ಣಾಟಕ ಕವಿಚರಿತೆ, ಸಂ. ೨, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೧, ಪು. ೧೭೮.

೭. ಉದ್ಧೃತ; ವೆಂಕಟಾಚಲಶಾಸ್ತ್ರಿ ಟಿ.ವಿ., ಪ್ರಾಚೀನ ಕನ್ನಡ ಕಾವ್ಯಸಂಕಲನ ಗ್ರಂಥಗಳು (ಲೇಖನ), ಶ್ರೀಮುಖ (ಟಿ.ವಿ ವೆಂಕಟಾಚಲಶಾಸ್ತ್ರಿ ಅಭಿನಂದನ ಗ್ರಂಥ), ಬೆಂಗಳೂರು, ೧೯೯೭, ಪು. ೧೫೬.

೮. ಶೆಟ್ಟಿ ಎಸ್.ಡಿ., ತುಳುನಾಡಿನ ಜೈನಧರ್ಮ–ಒಂದು ಸಾಂಸ್ಕೃತಿಕ ಅಧ್ಯಯನ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ, ೨೦೦೨, ಪು. ೨೮೬–೨೮೭.

೯. SII, Vol.VII, 1932, No. 202 & 203.

೧೦. KI, Vol. I, 1941, No. 60 & 61.

೧೧. KI, Vol. I, No. 61.

೧೨. E.C. Vol.15, No. 93, University of Mysore, 2009.

೧೩. B.L. Rice Edition, E.C. Vol.VIII, No. 46, Translation Part, P. 146.

೧೪. ಕರ್ನಾಟಕದ ಪರಂಪರೆ, ಸಂ.೨, ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಬೆಂಗಳೂರು, ೧೯೭೦, ಪು. ೪೫.

೧೫. ಶೆಟ್ಟಿ ಎಸ್.ಡಿ., ತುಳುನಾಡಿನ ಜೈನಧರ್ಮ–ಒಂದು ಸಾಂಸ್ಕೃತಿಕ ಅಧ್ಯಯನ, ಪೂರ್ವೋಕ್ತ, ಪು. ೭೬.

೧೬. E.C. Vol. I, ಹುಣಸೂರು–೨೪, ಉದ್ಧೃತ : ಹೊನ್ನುಸಿದ್ದಾರ್ಥ (ಸಂ), ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂ. ೪, ಭಾಗ. ೨, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿ.ವಿ., ೨೦೧೪, ಪು. ೧೪೫.

೧೭. SII, Vol.VII, 1932, No. 202.

೧೮. KI, Vol.III, Part.1, 1953, No.70.

೧೯. Gururaja Bhatt P., Studies in Tuluva History and Culture, Kalyanapur, 1975, P. 124.

೨೦. ಶೆಟ್ಟಿ ಎಸ್.ಡಿ., ತುಳುನಾಡಿನ ಜೈನಧರ್ಮ–ಒಂದು ಸಾಂಸ್ಕೃತಿಕ ಅಧ್ಯಯನ, ಪೂರ್ವೋಕ್ತ, ಪು. ೨೮೬.

೨೧. ನರಸಿಂಹಾಚಾರ್ ಎಸ್.ಜಿ., ರಾಮಾನುಜಯ್ಯಂಗಾರ್ (ಸಂ), ಅಭಿನವವಾದಿವಿದ್ಯಾನಂದ ಸಂಕಲಿತ ಕಾವ್ಯಸಾರಂ, ಪೀಠಿಕೆ, ಪೂರ್ವೋಕ್ತ.

೨೨. ಉದ್ಧೃತ: ನರಸಿಂಹಾಚಾರ್ಯ ಆರ್., ಕರ್ಣಾಟಕ ಕವಿಚರಿತೆ, ಸಂ. ೨, ಪೂರ್ವೋಕ್ತ, ಪು. ೧೭೮.

೨೩. ನರಸಿಂಹಾಚಾರ್ಯ ಆರ್., ಕರ್ಣಾಟಕ ಕವಿಚರಿತೆ, ಸಂ. ೨, ಪೂರ್ವೋಕ್ತ, ಪು. ೧೭೮.

೨೪. ಪಂಪ ನಾಗರಾಜಯ್ಯ, ಹೊಂಬುಜದ ವೈಭವ, ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೩. ಪು. ೧೨೬.

೨೫. ನರಸಿಂಹಾಚಾರ್ಯ ಆರ್., ಕರ್ಣಾಟಕ ಕವಿಚರಿತೆ, ಸಂ. ೨, ಪೂರ್ವೋಕ್ತ, ಪು. ೧೭೯.

೨೬. ವೆಂಕಟಾಚಲಶಾಸ್ತ್ರಿ ಟಿ.ವಿ., ಪ್ರಾಚೀನ ಕನ್ನಡ ಕಾವ್ಯಸಂಕಲನ ಗ್ರಂಥಗಳು (ಲೇ), ಪೂರ್ವೋಕ್ತ, ಪು. ೧೫೮.

೨೭. ಅದೇ. ಪು. ೧೫೭.

೨೮. ಅದೇ. ಪು. ೧೫೭.

೨೯. ರಾಮೇಗೌಡ (ಸಂ), ಕನ್ನಡ ಸಾಹಿತ್ಯ ಚರಿತ್ರೆ, ಸಂ. ೫, ಭಾಗ. ೩, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ., ೨೦೦೮, ಪು. ೪೧೯.

□□□

ಮೌಲ್ಯಗಳು ಹೆಣ್ಣನ್ನು ಸುತ್ತುವರೆದಿದ್ದ ಇಂತಹ ಸಾಮಾಜಿಕ, ಧಾರ್ಮಿಕ ದಿಗ್ಬಂಧನಗಳು ಪೂರ್ಣ ಪ್ರಮಾಣದಲ್ಲಲ್ಲದಿದ್ದರೂ ಕೆಲಮಟ್ಟಿಗಾದರೂ ಸಡಿಲಗೊಳ್ಳುವಂತೆ ಮಾಡುವಲ್ಲಿ ಯಶಸ್ವಿಯಾದವು.

ವಚನಸಾಹಿತ್ಯದಲ್ಲಿ ಲಿಂಗವ್ಯವಸ್ಥೆಯನ್ನು ಕುರಿತು ವಿವೇಚಿಸುವಾಗ ಬಹು ಮುಖ್ಯವಾಗುವ ವಿಚಾರವೆಂದರೆ ವಚನಯುಗದಲ್ಲಿ ಸ್ತ್ರೀಯರಿಗಿದ್ದ ಸ್ಥಾನಮಾನಗಳು ಎಂತಹವು ಎಂಬುದು.

ವಚನಕಾರರು ಅಥವಾ ಶಿವಶರಣರು ಮೂಲತಃ ವಿಮರ್ಶನ ಪ್ರಜ್ಞೆಯ ಚೇತನಗಳು. ಶಿವಾನುಭವಗೋಷ್ಠಿಗಳಲ್ಲಿ ಕುಳಿತು ಅವರು ಚಿಂತನೆಗಳನ್ನು ಮಾಡುತ್ತಿದ್ದರೆಂಬ ವಿಚಾರ ಎಲ್ಲ ಕಾಲಕ್ಕೂ ಅನುಕರಣೀಯ. ಇವರ ಈ ಬಗೆಯ ಚಿಂತನೆ, ವಿಮರ್ಶೆಗಳು, ಪರಂಪರೆ, ಧರ್ಮ, ದೇವರು, ಸುತ್ತಲ ಸಾಮಾಜಿಕ ಪರಿಸರ ಹೀಗೆ ಹಲವು ಆಯಾಮಗಳನ್ನು ಒಳಗೊಂಡಿದ್ದಲ್ಲದೆ ಈ ಶರಣರು ತಮ್ಮನ್ನು ತಾವೇ ಕುರಿತು ವಸ್ತುನಿಷ್ಠವಾಗಿ ವಿಮರ್ಶೆ ಮಾಡಿಕೊಂಡಂತಹವರು ಎಂಬುದು ಅತ್ಯಂತ ಗಮನೀಯ ವಿಚಾರವಾಗಿದೆ.

ಮತ್ತೊಂದು ಗಮನಾರ್ಹ ಸಂಗತಿಯೆಂದರೆ ಇಂತಹ ವಿಚಾರಕ್ರಾಂತಿಗೆ ಕಾರಣರಾದ ಶಿವಶರಣರು ಬಹಳ ಸಾಮಾನ್ಯ ಜನರೇ ವಿನಾ ಉದ್ದಾಮ ಪಂಡಿತರುಗಳಲ್ಲ. ಹೀಗಿದ್ದೂ ಗಂಡು-ಹೆಣ್ಣು, ಮೇಲು-ಕೀಲು, ಆ ಜಾತಿ-ಈ ಜಾತಿಗಳೆಂಬ ಭೇದಗಳಿಗೆ ಹೊರತಾಗಿ ಮಾನವಧರ್ಮವನ್ನು ಮೆರೆದು ಬದುಕಿದವರು ಎಂಬುದು ಇವರ ಹೆಚ್ಚುಗಾರಿಕೆ. ಇಂತಹ ಶರಣರು ಬಸವಣ್ಣನವರ ನೇತೃತ್ವದಲ್ಲಿ ಸಂಘಟಿತರಾಗಿ ನಡೆಸಿದ ವೈಚಾರಿಕ ಕ್ರಾಂತಿಗಳು ಎಲ್ಲ ಕಾಲಕ್ಕೂ ಅನುಕರಣೀಯ. ತಮ್ಮ ಸುತ್ತಲಿನ ಪರಿಸರದಲ್ಲಿ ತಮ್ಮ ಸ್ವಾನುಭವಕ್ಕೆ ಯಾವುದು ನಿಲುಕಿತೋ ಆ ಅನುಭವಗಳೇ ಇವರ ವಿಚಾರಗಳಿಗೆ ಪ್ರಾಮಾಣ್ಯಗಳಾದವು.

ಇವರಿಗಿಂತ ಹಿಂದಿನ ವೇದಶಾಸ್ತ್ರ ಪುರಾಣಗಳ ಪರಿಚಯ ಶರಣರಿಗೆ ತಕ್ಕಮಟ್ಟಿಗಿದ್ದರೂ ಇವರು ಪ್ರತಿಯೊಂದಕ್ಕೂ ಅಂದರೆ 'ಅನುಭಾವ', 'ಆಧ್ಯಾತ್ಮಿಕ', 'ಸನ್ಯಾಸ' ಇತ್ಯಾದಿಗಳೆಲ್ಲಕ್ಕೂ ತಮ್ಮದೇ ಆದ ನಿಜನೆಲೆಯ ಅರ್ಥಗಳನ್ನು ನೀಡಿ ಇವುಗಳು ಪ್ರತಿಯೊಬ್ಬ ಸಾಮಾನ್ಯನೂ ಆಚರಿಸಿಕೊಳ್ಳಬಹುದಾದ ಸರಳ ಮಾರ್ಗಗಳೆಂಬುದನ್ನು ಮನವರಿಕೆ ಮಾಡಿಕೊಟ್ಟರು. ಇವರ ಪ್ರಕಾರ 'ಅನುಭಾವ'ವೆಂಬುದು 'ಅಂತರಂಗದ ರತ್ನ', ಆಧ್ಯಾತ್ಮಿಕ ಸಾಧನೆಗೆ ದಾರಿಯಾದ 'ಸನ್ಯಾಸ' ಎಂಬುದು 'ಚಿತ್ತದ ಸಮಾಧಾನ ಸ್ಥಿತಿಯನ್ನು ಸಾಧಿಸುವ ವಿಧಾನ'. ಇದು ಸಂಸಾರಕ್ಕೆ ವಿರುದ್ಧವಾದದ್ದಲ್ಲ, ಕಾಡಿಗೆ ಹೋಗಿ ದೇಹದಂಡನೆಯನ್ನು

ಮಾಡಿಕೊಂಡು ಸಾಧಿಸುವಂತಹದ್ದಲ್ಲ. ಇದ್ದಲ್ಲೇ ಮನಸ್ಸನ್ನು ಹದಗೊಳಿಸಿಕೊಳ್ಳುವುದೇ ನಿಜವಾದ ಆಧ್ಯಾತ್ಮಸಾಧನೆ, ನಿಜವಾದ ಸನ್ಯಾಸ. ಹೀಗೆ ಸಂಸಾರ ಹಾಗೂ ಸನ್ಯಾಸವನ್ನು ಸಮನ್ವಯಗೊಳಿಸಿರುವ ಶರಣರ ವಿಚಾರದಲ್ಲಿ ಮತ್ತೊಂದು ಬಹುಮುಖ್ಯ ಅಂಶವೆಂದರೆ ಸ್ತ್ರೀಯರು ಆಧ್ಯಾತ್ಮಸಾಧನೆ ಹಾಗೂ ತಪಸ್ಸಿಗೆ ವಿಘ್ನವೊಡ್ಡುವವರಲ್ಲ ಎಂಬುದು. ಅಂದರೆ ಸ್ತ್ರೀಸಮಾನತೆಯನ್ನು ಸಮಾಜದಲ್ಲಿ ನೈಜ ಅರ್ಥಗಳಲ್ಲಿ ಸ್ಥಾಪಿಸಿದ ಹೆಗ್ಗಳಿಕೆ ವಚನಯುಗದ್ದಾಗಿದೆ. ಶರಣರ ಪ್ರಕಾರ ಆಧ್ಯಾತ್ಮ ಸಾಧನೆಯಲ್ಲಿ ಪುರುಷರಿಗಿರುವಷ್ಟೇ ಸ್ವಾತಂತ್ರ್ಯ ಸ್ತ್ರೀಯರಿಗೂ ಇದೆ, ಮತ್ಯಾವುದೇ ಧರ್ಮ ಅಂದರೆ ವೈದಿಕ, ಜೈನ, ಬೌದ್ಧಮತಗಳು ಈ ಬಗೆಯ ಸ್ತ್ರೀಸಮಾನತೆಯನ್ನು ಒಪ್ಪುವುದಿಲ್ಲ. "................... ಜೈನ (ದಿಗಂಬರ), ಬೌದ್ಧಮತಗಳಂಥ ಮತಗಳು ಸ್ತ್ರೀಜನ್ಮದಲ್ಲಿ ಮುಕ್ತಿಯೇ ಸಾಧ್ಯವಿಲ್ಲ ಎನ್ನುತ್ತಿದ್ದ ಹೊತ್ತಿನಲ್ಲಿ ಆತ್ಮಕ್ಕೆ ಗಂಡು, ಹೆಣ್ಣಿನ ರೂಪವಿಲ್ಲ, ಸಾಧನೆ ಮಾಡಬಲ್ಲ ಜೀವಿ ಹೆಣ್ಣಾದರೇನು, ಗಂಡಾದರೇನು ಎಂಬ ಧೋರಣೆ, ತಾತ್ತ್ವಿಕ ನೆಲೆ ಕೊಟ್ಟ ನೈತಿಕ ಬೆಂಬಲ ದೊಡ್ಡದು. ಮಹಿಳೆ ಅಪೇಕ್ಷಿಸಿದರೆ ಸಂಸಾರದ ಹಂಗನ್ನಾದರೂ ಕಿತ್ತೊಗೆದು ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಬಹುದೆಂಬುದನ್ನು ಅಕ್ಕನಂಥವರು ತೋರಿಸಿಕೊಟ್ಟರು. ಅಪವಾದವಾಗಿಯಾದರೂ ಚಿಂತೆಯಿಲ್ಲ, ಅಕ್ಕನನ್ನು ಈ ಸಮಾಜ ಒಪ್ಪಿಕೊಳ್ಳುವುದರ ಮೂಲಕವೇ ಸಾಂಪ್ರದಾಯಿಕವಾದ ನಂಬಿಕೆ ಜಡತ್ವವನ್ನು ಸ್ವಲ್ಪ ಅಲುಗಿಸಲು ಸಾಧ್ಯವಾಗಿದೆ. ಆಧ್ಯಾತ್ಮಿಕ ಸಾಧನೆಯ ಅವಕಾಶ, ಬೌದ್ಧಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ದೊರೆತದ್ದರ ಫಲವಾಗಿ ತಮ್ಮನ್ನು ತಾವು ಅಭಿವ್ಯಕ್ತಿಸಿಕೊಳ್ಳುವ ಪ್ರಯತ್ನವನ್ನು ಸ್ತ್ರೀಯರು ಮಾಡಿದರು".[೨]

ವೈದಿಕ, ಜೈನಧರ್ಮಗಳು ಸ್ತ್ರೀವರ್ಗಕ್ಕೆ ನಿರಾಕರಿಸಿದ ಕೆಲವು ಧಾರ್ಮಿಕ ವಿಚಾರಗಳನ್ನು ಪರಾಮರ್ಶಿಸಿದ ವಚನಕಾರರು ಗಂಡು ಹೆಣ್ಣಿಗಿರುವ ವ್ಯತ್ಯಾಸವನ್ನು ಅತ್ಯಂತ ತಾರ್ಕಿಕವಾಗಿ, ನಿಷ್ಪಕ್ಷಪಾತವಾಗಿ ಪ್ರತಿಪಾದಿಸಿದರು. ಆಧ್ಯಾತ್ಮ ಸಾಧನೆಗೆ ಪುರುಷನಷ್ಟೇ ಸ್ತ್ರೀಗೂ ಸಮಾನ ಅವಕಾಶವಿದೆ. ಹುಟ್ಟಿನಿಂದ ಹೆಣ್ಣಾದ ಮಾತ್ರಕ್ಕೆ ಅವಳ ವ್ಯಕ್ತಿತ್ವ ಕೀಳಲ್ಲ, ಅವಳ ಅಂತರಾತ್ಮದ ಚೈತನ್ಯಕ್ಕೂ ಸತ್ತ್ವವಿದೆ, ಇತ್ಯಾದಿಯಾದ ಶರಣರ ವಿಚಾರಧಾರೆ ಅವರ ಮಾನವತಾವಾದದ ನಿಲುವುಗಳನ್ನು ಪ್ರತಿಪಾದಿಸುತ್ತದೆ. ಇದಕ್ಕೆ ಪೂರಕವಾಗಿ ಜೇಡರ ದಾಸಿಮಯ್ಯನ ವಚನವನ್ನು ಉಲ್ಲೇಖಿಸಬಹುದು :

ಮೊಲೆ ಮೂಡಿ ಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು
ನಡುವೆ ಸುಳಿವಾತ್ಮನು ಗಂಡೂ ಅಲ್ಲ
ಹೆಣ್ಣೂ ಅಲ್ಲ ಕಾಣ ರಾಮನಾಥ

3

ಹಾಗೆಯೇ ಹಿಂದಿನ ಹಲವು ಧರ್ಮಗಳು ಹೆಣ್ಣನ್ನು ಮಾಯೆ ಎಂದು ಕರೆದು, ಅವಳು ಆಧ್ಯಾತ್ಮ ಸಾಧಕನಿಗೆ ವಿರೋಧಿ, ಆಕೆ ಮೋಹಪರವಶತೆ ಉಂಟುಮಾಡುವವಳು ಇತ್ಯಾದಿಯಾಗಿ ಪ್ರತಿಪಾದಿಸಿದ ಅಸಂಬದ್ಧವಾದ, ಸಾಂಪ್ರದಾಯಿಕವಾದ ವಿಚಾರಗಳನ್ನು ವಚನಕಾರ ಅಲ್ಲಮಪ್ರಭು ಖಂಡಿಸಿರುವ ರೀತಿ ಅನನ್ಯ :

ಹೆಣ್ಣು ಮಾಯೆಯೆಂಬರು, ಹೊನ್ನು ಮಾಯೆ ಎಂಬರು,
ಮಣ್ಣು ಮಾಯೆ ಎಂಬರು;
ಹೆಣ್ಣು ಮಾಯೆ ಅಲ್ಲ, ಹೊನ್ನು ಮಾಯೆ ಅಲ್ಲ,
ಮಣ್ಣು ಮಾಯೆ ಅಲ್ಲ.
ಮನದ ಮುಂದಣ ಆಸೆಯೆ ಮಾಯೆ ಕಾಣಾ
ಗುಹೇಶ್ವರ !

ಹೀಗೆಯೇ ಅಕ್ಕಮಹಾದೇವಿಯು ಗಂಡಿಗೆ ಹೆಣ್ಣು ಮಾಯೆಯಾಗುವುದಾದರೆ ಹೆಣ್ಣಿಗೂ ಗಂಡು ಮಾಯೆಯಾಕಾಗಬಾರದು? ಎಂಬ ದಿಟ್ಟ ವಿಚಾರವನ್ನೆತ್ತುತ್ತಾಳೆ :

ಗಂಡಿಗೆ, ಹೆಣ್ಣಾಗಿ ಕಾಡಿತ್ತು ಮಾಯೆ,
ಹೆಣ್ಣಿಂಗೆ ಗಂಡಾಗಿ ಕಾಡಿತ್ತು ಮಾಯೆ

ಇಲ್ಲಿ ಗಮನಿಸಬಹುದಾದ ಮತ್ತೊಂದು ವಿಚಾರ ವಚನಕಾರರಿಗೆ ಸರಿಸಮಾನರಾಗಿ ವಚನಕಾರ್ತಿಯರೂ ಒಟ್ಟೊಟ್ಟಿಗೆ ವಿಚಾರಕ್ರಾಂತಿಯಲ್ಲಿ ಕಾಣಿಸಿಕೊಂಡಿರುವಂತಹದ್ದು.

ಉಪನಿಷದ್ ಕಾಲದಲ್ಲಿ ಸ್ತ್ರೀ ಸಮಾಜ ಪಡೆದುಕೊಂಡಿದ್ದ ಸ್ವಾತಂತ್ರ್ಯ ಸಮಾನತೆಗಳು ಮತ್ತೊಮ್ಮೆ ನಮಗೆ ಕಾಣಿಸಿಕೊಳ್ಳುವುದು ವಚನಯುಗದಲ್ಲಿಯೇ. ಧಾರ್ಮಿಕ ಸ್ವಾತಂತ್ರ್ಯ ಹಾಗೂ ವಚನಕಾರರಿಗೆ ಸರಿಸಮಾನರಾಗಿ ಗೋಷ್ಠಿಗಳಲ್ಲಿ ಕುಳಿತು ವಿಚಾರ ವಿನಿಮಯ ಮಾಡುವಂತಹ ಸಮಾನತೆಗಳು ಸ್ತ್ರೀಯರಿಗೆ ವಚನಯುಗದಲ್ಲಿ ಲಭಿಸಿತ್ತು. ಹೀಗೆ ವಚನಯುಗದಲ್ಲಿ ಸಮಾನತೆ ಮತ್ತು ಸಾಮರಸ್ಯದ ಆಶಯಗಳು ಹೊಸ ಜೀವನದ ಸೂತ್ರಗಳಾದವು. "ದಕ್ಷಿಣ ಭಾರತದ ಇತಿಹಾಸದಲ್ಲಿ ಮಹಿಳೆಯರ ಮೇಲಿನ ಕ್ರೌರ್ಯವನ್ನು ಸ್ವಲ್ಪವಾದರೂ ತಗ್ಗಿಸುವಂಥ ಅಥವಾ ಕೆಲಮಟ್ಟಿಗಾದರೂ ಸೌಮ್ಯವಾಗಿಸುವಂಥ ಅಂಶಗಳಿದ್ದುವೆಂದು ತೋರುತ್ತದೆ. ಮಾತೃಪ್ರಧಾನ ಕುಟುಂಬ, ಮಾತೃದೇವತಾರಾಧನೆ, ಭಕ್ತಿಪಂಥಗಳ ಪ್ರಾಧಾನ್ಯತೆ ಈ ಮೊದಲಾದವು ಅಂಥ ಕೆಲವು ಅಂಶಗಳು. ಈ ಐತಿಹಾಸಿಕ ಸಂದರ್ಭದ ಹಿನ್ನೆಲೆಯಲ್ಲಿ ಬಂದ ಹನ್ನೆರಡನೆಯ ಶತಮಾನದ ವೀರಶೈವ ಚಳವಳಿ ಇತಿಹಾಸದ ಮುಖ್ಯ ಪ್ರವಾಹದಲ್ಲಿ ಇದ್ದೂ ಇಲ್ಲದಂತಿದ್ದ ಸ್ತ್ರೀಯರನ್ನು ಕುರಿತ ಗೌರವಾದರಗಳು ಕೆಲವು ಕ್ಷೇತ್ರಗಳಲ್ಲಿ ಅವರು ಬೆಳೆಯಲು ಅವಕಾಶಗಳನ್ನು ಕಲ್ಪಿಸಿತು. ಅಂತೆಯೇ ಇಂದು ಸ್ತ್ರೀವಿಮೋಚನೆಯ ದೃಷ್ಟಿಕೋನದಿಂದ ನಮ್ಮ ಇತಿಹಾಸವನ್ನು ನೋಡುವವರಿಗೆ ವಚನಸಾಹಿತ್ಯ ವಿಶಿಷ್ಟ ಅಭ್ಯಾಸಕ್ಕೆ ಯೋಗ್ಯವಾಗಿದೆ".[೩]

ಶೋಷಿತರ ಉದ್ಧಾರ ಹಾಗೂ ಸಮಾನ ಸಂಸ್ಕೃತಿಯ ನಿರ್ಮಾಣ ಇವು ಶರಣರ ವಿಚಾರಕ್ರಾಂತಿಯ ಮೂಲಮಂತ್ರವಾಗಿದ್ದ ಕಾರಣ ವಚನಯುಗದಲ್ಲಿ ಅಲ್ಲಿಯವರೆಗೆ ಜೈವಿಕ ಲಕ್ಷಣಗಳ ಕಾರಣದಿಂದ ಸ್ತ್ರೀತ್ವವನ್ನು ಕನಿಷ್ಠಗೊಳಿಸಿದ್ದ ಸ್ತ್ರೀ ವಿರೋಧಿ ವಿಚಾರಗಳು ನಿರಾಕರಣೆಗೊಂಡು ಸ್ತ್ರೀ-ಪುರುಷ ಸಮಾನತೆಯ ಮಾನವೀಯ ತತ್ತ್ವಗಳು ಪ್ರಕಾಶಗೊಳ್ಳುವಂತಾಯಿತು. ಇದನ್ನು ವಚನ ಚಳುವಳಿಯ ಆರಂಭ ಘಟ್ಟದ ಜೇಡರದಾಸೀಮಯ್ಯನ ವಿಚಾರಗಳಿಂದಲೇ ಗುರುತಿಸಬಹುದು : "ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದಿತ್ತೇ? ಒಡೆಯರ ಪ್ರಾಣಕ್ಕೆ ಇದ್ದಿತ್ತೆ ಯಜ್ಞೋಪವೀತ? ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೇ ಪ್ರಾಣದಲ್ಲಿ ಹಿಡಿಗೋಲ?" (ಶಿವಶರಣೆಯರ ವಚನ ಸಂಪುಟ, ವ. ೧೮೯೮). ಇಂತಹ ವಚನಗಳು ಸ್ವಸ್ಥ ಸಮಾಜರಚನೆಗೆ ಮಾರಕವಾಗಿ ಪರಿಣಮಿಸಿದ್ದ ಮೇಲ್ವರ್ಗದ ಜಾತಿ-ಲಿಂಗ ಭೇದಗಳ ಅರ್ಥರಹಿತ ಅವಾಸ್ತವ ವಿಚಾರಗಳನ್ನೂ ಸ್ವಾರ್ಥಪರ ವಿಚಾರಗಳನ್ನೂ ಕಟುವಾಗಿ ಖಂಡಿಸುವಂತಹವುಗಳಾಗಿವೆ. ಹೀಗೆ ವಚನಕಾರರು "ಸ್ತ್ರೀ ವ್ಯಕ್ತಿತ್ವವನ್ನು ಸುತ್ತುವರೆದಿದ್ದ ವಿಕೃತ ಕಲ್ಪನೆಗಳನ್ನು ವೈಚಾರಿಕ ನೆಲೆಯಲ್ಲಿ ವಿಶ್ಲೇಷಿಸಿದರು. ಶತಮಾನಗಳಿಂದ ಸ್ತ್ರೀ ಅಧೀನತೆಯನ್ನು ಪೋಷಿಸುತ್ತ, ಅಸಮಾನತೆಯನ್ನು ಮೌಲ್ಯವಾಗಿಸಿದ ಪುರುಷ ನೈತಿಕತೆಯನ್ನು ಪರಾಮರ್ಶಿಸಿದರು. ಪ್ರಾಕೃತಿಕವಾಗಿರುವ ಸ್ತ್ರೀ-ಪುರುಷರ ಜೈವಿಕ ಭಿನ್ನತೆಗಳನ್ನು ತರತಮವಾಗಿಸಿ, ಸ್ತ್ರೀತ್ವವನ್ನು ಗೌಣವಾಗಿಸಿದ ವೈದಿಕ ಚಿಂತನಾಕ್ರಮವನ್ನು ನಿರಾಕರಿಸಿ 'ಆತ್ಮ' ತತ್ತ್ವದ ಮೂಲಕ ಸ್ತ್ರೀ-ಪುರುಷ ಸಮಾನತೆಯನ್ನು ಪುರಸ್ಕರಿಸಿದ ಜೇಡರ ದಾಸಿಮಯ್ಯನವರ ಧೋರಣೆಯು ವಚನ ಚಳುವಳಿಯ ಪ್ರಮುಖ ಆಶಯವಾಯಿತು".[೪]

ಆಧ್ಯಾತ್ಮಿಕ ಸಾಧನೆಯ ಹಾದಿಯಲ್ಲಿ ಹೆಣ್ಣುಗಂಡೆನ್ನದೆ ಎಲ್ಲರೂ ನಡೆಯಲು ಅವಕಾಶ ಹಾಗೂ ಉತ್ತೇಜನಗಳನ್ನು ವಚನಯುಗ ನೀಡಿತ್ತು. ನಡುವೆ ಸುಳಿವಾತ್ಮನು ಗಂಡೂ ಅಲ್ಲ ಹೆಣ್ಣೂ ಅಲ್ಲ ಎಂಬಂತಹ ಜೇಡರ ದಾಸಿಮಯ್ಯನ ವಿಚಾರ ಮೊದಲೇ ಹೇಳಿರುವಂತೆ ವಚನ ಚಳುವಳಿ ಸ್ತ್ರೀಯ ಬಗ್ಗೆ ತಾಳಿದ್ದ ಧೋರಣೆಗೆ ಸಾಕ್ಷಿಯಾಗಿದೆ, ಈ ನಿಲುವು ಕೇವಲ ತಾತ್ತ್ವಿಕ ನೆಲೆಯದ್ದಾಗಿರದೆ ಆಚರಣೆಯಲ್ಲಿಯೂ ಕಂಡುಬಂದಿತು. ವಚನ ಚಳುವಳಿಯಲ್ಲಿ ಭಾಗವಹಿಸಿದ ವಚನಕಾರ್ತಿಯರನ್ನು ಗಮನಿಸಿದಾಗ ಅಲ್ಲಿ ಕಂಡುಬರುವ ಸೂಳೆಕಾಯಕದ ರೇವಮ್ಮ, ಧೂಪದ ಗೊಗ್ಗವ್ವೆ, ಸೂಜಿಕಾಯಕದ ತಿಮ್ಮವ್ವೆ , ಕೊಪ್ಪಣದ ಸೋಮವ್ವೆ , ಕನ್ನಡಿಕಾಯಕದ ರೇವಮ್ಮ ಹೀಗೆ ವಿವಿಧ ಕಾಯಕ, ಜಾತಿ, ವರ್ಗಗಳಿಂದ ಬಂದ ಹಲವಾರು ಸಾಮಾನ್ಯ ಸ್ತ್ರೀಯರು ಈ ಚಳುವಳಿಯಲ್ಲಿ ಭಾಗವಹಿಸಿರುವುದಷ್ಟೇ ಅಲ್ಲದೆ

ವಚನಕಾರ್ತಿಯರಾಗಿಯೂ ಗಮನ ಸೆಳೆಯುತ್ತಾರೆ. ಅಷ್ಟೇ ಅಲ್ಲದೆ ರಾಜಮನೆತನದವರೂ, ವೈವಾಹಿಕ ಸಂಬಂಧಗಳ ದೃಷ್ಟಿಯಿಂದ ವಿವಿಧ ಹಿನ್ನೆಲೆಗಳಿಂದ ಬಂದ ಸ್ತ್ರೀಯರೂ, ಅಕ್ಕನಾಗಮ್ಮನಂಥ ವಿಧವೆಯರು, ವೈವಾಹಿಕ ಚೌಕಟ್ಟನ್ನೇ ಧಿಕ್ಕರಿಸಿದ ಅಕ್ಕ, ಎರಡನೆಯ ಪತ್ನಿಯಾದ ನೀಲಲೋಚನೆ, ಅನೇಕ ವಿವಾಹಿತ ಮಹಿಳೆಯರು, ಗಂಡನನ್ನು ತಿದ್ದಿದ ಆಯ್ದಕ್ಕಿ ಮಾರಯನ ಪತ್ನಿ, ಅಲ್ಲಮನನ್ನು ಪ್ರಶ್ನಿಸಿದ ಮುಕ್ತಾಯಕ್ಕ– ಹೀಗೆ ಅಂದಿನ ಸಮಾಜದ ಅನೇಕ ಸ್ತರಗಳನ್ನೂ, ಹಿನ್ನೆಲೆಗಳನ್ನೂ ಪ್ರತಿನಿಧಿಸುವ ಸಾಕಷ್ಟು ವಚನಕಾರ್ತಿಯರು ವಚನ ಚಳುವಳಿಯಲ್ಲಿ ಭಾಗವಹಿಸಿದ್ದಾರೆ. ಈ ಅಂಶ ವಚನಯುಗ ಸ್ತ್ರೀಯರಿಗೆ ಸಮಾಜದಲ್ಲಿ ಕಲ್ಪಿಸಿಕೊಟ್ಟಿದ್ದ ಮುಕ್ತ ಸ್ವಾತಂತ್ರ್ಯ ಹಾಗೂ ಸಮಾನತೆಗಳನ್ನು ಎತ್ತಿಹಿಡಿಯುತ್ತದೆ.

ಹೀಗೆ "ವಚನ ಚಳುವಳಿ ತೆರೆದ ಮುಕ್ತ ಅವಕಾಶದಿಂದಾಗಿ ಮೊದಲ ಬಾರಿಗೆ ಬೌದ್ಧಿಕ, ಆಧ್ಯಾತ್ಮಿಕ, ಸಾಹಿತ್ಯಕ ವಲಯಗಳಿಗೆ ಸಾರ್ವಜನಿಕವಾಗಿ ಮಹಿಳೆಯರು ಬರುವಂತಾಯಿತು. ಈ ವೇಳೆಗಾಗಲೇ ಕನ್ನಡಕ್ಕೆ ೭–೮ ಶತಮಾನಗಳ ಭಾಷಿಕ–ಐತಿಹಾಸಿಕ ಹಿನ್ನೆಲೆಯಿದ್ದರೂ ನಮಗೆ ಉಪಲಬ್ಧವಿರುವ ಮೊದಲ ಕನ್ನಡ ಕವಯಿತ್ರಿಯರು ಈ ವಚನಕಾರ್ತಿಯರೇ ಆಗಿದ್ದಾರೆ. ಸು. ೩೦೦ ಜನ ವಚನಕಾರರ ಪೈಕಿ ೩೦ ಜನ ಮಹಿಳೆಯರಿದ್ದಾರೆ. ನೀಲಲೋಚನೆ, ಗಂಗಾಂಬಿಕೆ, ಅಕ್ಕಮ್ಮ, ಅಕ್ಕನಾಗಮ್ಮ, ಸತ್ಯಕ್ಕ ಮೊದಲಾದ ವಚನಕಾರ್ತಿಯರನ್ನು ಇಲ್ಲಿ ನೆನೆಯಬಹುದು. ಈ ವಚನಕಾರ್ತಿಯರ, ಶರಣೆಯರ ಗುಂಪಿನಲ್ಲಿ ಎದ್ದುಕಾಣುವ ಶ್ರೇಷ್ಠ ಅನುಭಾವಿ ಮತ್ತು ಕವಯಿತ್ರಿ ಅಕ್ಕಮಹಾದೇವಿ".[೫]

ಅಂದಿನ ಸಮಾಜದ ಲಿಂಗವ್ಯವಸ್ಥೆಯಲ್ಲಿ ಸ್ತ್ರೀ ಸಮಾನತೆಗೆ ವಚನಯುಗ ನೀಡಿದ ಮಹತ್ತ್ವಪೂರ್ಣ ಚಿಂತನೆಗಳನ್ನು ಹೀಗೆ ಗುರುತಿಸಬಹುದು.

೧) ಆತ್ಮತತ್ತ್ವದ ಅನನ್ಯತೆಯ ಹಿನ್ನೆಲೆಯಿಂದ, ಸ್ತ್ರೀಯರನ್ನು ಅಧೀನ ವ್ಯವಸ್ಥೆಗೆ ತಳ್ಳಿದ ಆಲೋಚನಾ ಕ್ರಮಗಳನ್ನು ತಾತ್ತ್ವಿಕವಾಗಿ ವಿಶ್ಲೇಷಿಸಿದುದು.

೨) ಅಂದಿನವರೆಗೆ ಬೇರೂರಿ ಸ್ಥಾಪನೆಗೊಂಡಿದ್ದ, ಹೆಣ್ಣೆಂದರೆ 'ಮಿಥ್ಯೆ', 'ಮಾಯೆ' ಎಂಬಂತಹ ಪೊಳ್ಳು ನಂಬಿಕೆಗಳನ್ನು ದೃಢವಾಗಿ ನಿರಾಕರಿಸಿದುದು. ಶರಣರಿಗೆ ಸ್ತ್ರೀ ಎಂಬುದು "ಅರಿತವರಿಗೆ ಮಾಯೆ ಶಕ್ತಿ, ಅರಿಯದವರಿಗೆ ಮಾಯೆ ಮಾರಿ". ಶರಣರ ದೃಷ್ಟಿಯಲ್ಲಿ ಸ್ತ್ರೀ ಎಂಬುದು ಶಕ್ತಿತತ್ತ್ವ ಹಾಗೂ ಸೃಷ್ಟಿತತ್ತ್ವ. ಸದ್‌ವಿವೇಚನೆಗಳು ಮಾನವನಲ್ಲಿ ಶೂನ್ಯಗೊಂಡಾಗ, ವಿವೇಕ ಮಸಳಿಸಿದಾಗ, ಅರಿವನ್ನು ಕಳೆದುಕೊಂಡಾಗ ಮಾನವ ಹುಸಿನಂಬಿಕೆಗಳನ್ನು ಸೃಷ್ಟಿಸಿಕೊಂಡು ಅದಕ್ಕೆ ಶರಣಾಗುತ್ತಾನೆ. ಈ ಕಾರಣದಿಂದ ಸಮಸ್ತ ಮಾನವರನ್ನೂ ಸರಿಯಾದ ವಿವೇಕದೆಡೆ ಕರೆದೊಯ್ಯುವ ಕೆಲಸವನ್ನು ವಚನ ಚಳುವಳಿ ಮಾಡಿತು.

೩) ಲಿಂಗದೀಕ್ಷೆಯ ವಿಚಾರ: ವಚನಕಾರರ ದೃಷ್ಟಿಯಲ್ಲಿ "ದೀಕ್ಷೆ ಎಂದರೆ ಶಿವಜ್ಞಾನವನ್ನು ಕೊಡುವುದೂ ಮಲತ್ರಯಗಳನ್ನು ಕ್ಷಯಿಸುವುದೂ ಯಾವುದೋ ಅದೇ ದೀಕ್ಷೆ. ದೀಕ್ಷೆಗೆ ಎಲ್ಲ ವರ್ಣದವರೂ ಸ್ತ್ರೀಯರೂ ಗಂಡಸರೂ ಸಮಾನ ಹಕ್ಕುಳ್ಳವರು." ಸ್ತ್ರೀ ದೇಹವು ಅಪವಿತ್ರ ಮೈಲಿಗೆಯಿಂದ ಕೂಡಿದ್ದು ಎಂಬ ನಂಬಿಕೆಗಳಿಂದ ಧಾರ್ಮಿಕ ಕಾರ್ಯಗಳಲ್ಲಿ ಆಕೆಯನ್ನು ದೂರವಾಗಿರಿಸಿದ್ದ ಸೂತಕ ಭಾವನೆಗಳನ್ನು ದೂರಮಾಡುವಲ್ಲಿ ಲಿಂಗದೀಕ್ಷೆ ಎಂಬುದು ಮಹತ್ತ್ವದ ಪಾತ್ರ ವಹಿಸಿದೆ. ಅಷ್ಟೇ ಅಲ್ಲದೆ ಸಮಾಜದಲ್ಲಿ ತನುಮನ ಭಾವಗಳಿಗಂಟಿದ್ದ ಹೊಲೆಯ ಎಂಬಂತಹ ಮೌಢ್ಯಭಾವವನ್ನು ಕಿತ್ತೊಗೆಯುವಲ್ಲಿಯೂ ಲಿಂಗದೀಕ್ಷೆ ಬಹಳ ಪರಿಣಾಮಕಾರಿಯಾಗಿದೆ. ಭಕ್ತರೆನಿಸಿದ ಸ್ತ್ರೀ ಪುರುಷರಿಬ್ಬರಿಗೂ ಲಿಂಗದೀಕ್ಷೆ ಎಂಬುದು ಕಡ್ಡಾಯವಾಯಿತು.

ವಚನಕಾರರು ಇಡೀ ಸಮಾಜದಲ್ಲಿ ಎರಡೇ ಪಂಗಡಗಳನ್ನು ಗುರುತಿಸುತ್ತಾರೆ : ೧) ಭವಿ ೨) ಭಕ್ತ.

ಲಿಂಗಧಾರಣ ಮಾಡದವರು ಭವಿಗಳು, ಮಾಡಿದವರು ಭಕ್ತರು. ಇಲ್ಲಿ ಸ್ತ್ರೀ ಪುರುಷ ಭೇದಗಳಿಲ್ಲ. ಭವಿಗೆ ಹುಟ್ಟುಸಾವುಗಳುಂಟು. ಆತನು ಮುಕ್ತಿಗೆ ಅನರ್ಹ. ಸಾಧಕನೆನಿಸಿದವನು ಏಕಲಿಂಗ ನಿಷ್ಠಾಪರನಾಗಿರಬೇಕೆಂದೂ ಅನ್ಯಮಾರ್ಗಾಚರಣೆಗಳ ಮೋಹಕ್ಕೆ ಬಲಿಯಾಗಿ ಚಂಚಲಚಿತ್ತನಾಗಬಾರದೆಂಬುದೂ ಭವಿ, ಭಕ್ತರೆಂಬ ಭೇದದ ಮುಖ್ಯ ಆಶಯವಾಗಿರುವಂತಿದೆ.

ಧರ್ಮಚಿಂತನೆಯಲ್ಲಿ ಸಮಾಜದ ಹಿತಚಿಂತನೆಯೂ ಒಂದು ಅತೀಪ್ರಮುಖ ಭಾಗವಾಗಿದೆ. ಕೆಲವು ವೇಳೆ ಮಾನವ ಕೆಲವು ನೀತಿಗಳನ್ನು ಇತರರಿಗೆ ತಿಳಿಯದಂತೆ ಉಲ್ಲಂಘಿಸುವ ಪ್ರಯತ್ನ ಮಾಡುತ್ತಾನೆ ಅಥವಾ ತಾನು ಬಲಿಷ್ಠನಾಗಿದ್ದರೆ ಸಮಾಜವನ್ನೇ ನಿರ್ಲಕ್ಷಿಸಿ ಉಲ್ಲಂಘಿಸಹೊರಡುತ್ತಾನೆ. ಇಂತಹ ಮನೋಧರ್ಮಕ್ಕೆ ಕಡಿವಾಣದ ಅಗತ್ಯವಿದೆ. ಇದನ್ನು ಧರ್ಮ ಎಂಬುದು ಸ್ವರ್ಗ–ನರಕಗಳ ಕಲ್ಪನೆಗಳಿಂದ ನಿಭಾಯಿಸುತ್ತದೆ. ಮಾನವ ಮಾಡುವ ದುರಾಚಾರಗಳಿಗೆ ಇಹದಲ್ಲಿಯೋ ಪರದಲ್ಲಿಯೋ ಒಟ್ಟಾರೆ ದಂಡನೆಯನ್ನಂತೂ ಅನುಭವಿಸಿಯೇ ತೀರಬೇಕು. ಇದಕ್ಕಾಗಿಯೇ 'ಮಾಡಿದುಣ್ಣೋ ಮಹಾರಾಯ' ಎಂಬಂತಹ ಗಾದೆಗಳೂ ಅನುಭವಜನ್ಯವಾಗಿ ಸೃಷ್ಟಿಗೊಂಡಿವೆ. ಆದ್ದರಿಂದಲೇ ಮನುಷ್ಯ ನೈತಿಕವಾಗಿ ನಿಷ್ಠನಾಗಿರಬೇಕಾದರೆ ಧರ್ಮದಲ್ಲಿ ಪರಮಾತ್ಮನು ಮೆಚ್ಚುವಂತೆ ನಡೆಯಬೇಕು. ಅದರ ಕಟ್ಟಳೆಗಳನ್ನು ಮೀರಬಾರದು. ಇದೇ ವ್ಯಕ್ತಿಯ ಸದಾಚಾರ, ಸದ್ವರ್ತನೆ, ಅಂತರಂಗ ಶುದ್ಧಿಗಳಿಗೆ ದಾರಿ ಮಾಡುವಂತಹುದು ಎಂಬುದು ವಚನಕಾರರ ಅಭಿಮತ. ಈ ದೃಷ್ಟಿಯಿಂದಲೇ ಮೂಡಿಬಂದ ವಚನ :

"ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ,
ಇದಿರ ಹಳಿಯಲು ಬೇಡ, ಇದೇ ಅಂತರಂಗ ಶುದ್ಧಿ, ಬಹಿರಂಗ ಶುದ್ಧಿ,
ಇದೇ ನಮ್ಮ ಕೂಡಲ ಸಂಗಮದೇವರನೊಲಿಸುವ ಪರಿ"

ಈ ಬಗೆಯ ತ್ರಿಕರಣ ಶುದ್ಧಿಯನ್ನು ಮನುಕುಲ ಸಾಧಿಸಿದರೆ ಖಂಡಿತವಾಗಿಯೂ ಅಲ್ಲಿ ಜಾತಿ, ಲಿಂಗ ಭೇದಗಳಿಗೆ, ಅನಾಚಾರ ದುರ್ವರ್ತನೆಗಳಿಗೆ ಆಸ್ಪದವಿರುವುದಿಲ್ಲ. ನಿಜವಾದ ಮಾನವೀಯತೆಗಳು ಸ್ಥಾಪನೆಗೊಂಡು ಗಂಡು–ಹೆಣ್ಣೆನ್ನದೆ ಪ್ರತಿಯೊಂದು ಜೀವಿಯೂ ತನಗೆ ಸಹಜವಾಗಿರುವ ಬದುಕಿನ ಎಲ್ಲ ಹಕ್ಕುಗಳನ್ನೂ ಅನುಭವಿಸುವ ಸ್ವಾತಂತ್ರ್ಯ ಪ್ರಾಪ್ತವಾಗುವುದರಲ್ಲಿ ಸಂದೇಹವಿಲ್ಲ. ಈ ನಿಟ್ಟಿನಿಂದ ವಚನಧರ್ಮ ಎಂಬುದು ನಿತ್ಯಜೀವನದಲ್ಲಿ ಮನುಷ್ಯನು ಯಾವ ಬಗೆಯ ನಿಯಮಗಳನ್ನು ಪಾಲಿಸಿ ಬದುಕಬೇಕೆಂಬುದಕ್ಕೆ ಒಂದು ಸದಾಚಾರ ಸ್ಮೃತಿಯೇ ಆಗಿದೆ. ಹಿಂಸೆ, ಕಳ್ಳತನ, ಸುಳ್ಳು–ವಂಚನೆ, ಸ್ವಾರ್ಥ, ದುರಭಿಮಾನ, ಪರರನ್ನು ನೋಯಿಸುವುದು, ವ್ಯಭಿಚಾರ, ಅಹಂಕಾರ ಇತ್ಯಾದಿ ಅನೀತಿಯ ವಿಚಾರಗಳಿಂದಲೇ ಮನುಷ್ಯಲೋಕ ಹಾಳಾಗುತ್ತಿರುವುದನ್ನು ಮನಗಂಡ ವಚನಕಾರರು ಈ ಎಲ್ಲವೂ ಸಮಾಜದ ದುರ್ಗತಿಗೆ ಹೇಗೆ ಕಾರಣವಾಗುತ್ತಿದೆ ಎಂಬುದನ್ನು ಧಾರ್ಮಿಕ ನೆಲೆಯಿಂದ ವಿಶ್ಲೇಷಿಸಿ ತೋರಿದರು. ಅಷ್ಟೇ ಅಲ್ಲ ಅವರು ಏನು ನುಡಿದರೋ ಅದರಂತೆ ಬದುಕಿ ಸಮಾಜಕ್ಕೆ ಪ್ರತ್ಯಕ್ಷ ಸಾಕ್ಷಿಗಳಾದರು. ಮೊದಲು ಸಮಾಜದ ಆರೋಗ್ಯವನ್ನು ಕಾಪಾಡಬೇಕು. ಅದಕ್ಕಾಗಿ ಸಮಾಜದ ಪ್ರತಿ ವ್ಯಕ್ತಿಯೂ ವಚನಕಾರರ ನೀತಿಯನ್ನು ಅನುಸರಿಸಬೇಕು, ಹೀಗಾದಾಗ ಮಾತ್ರ ಸಮಾಜದಲ್ಲಿ ಎಲ್ಲ ಜೀವಿಗಳ ನಡುವೆಯೂ ಸಮಾನತೆ, ಗೌರವ ಆದರಗಳು ಪ್ರಾಪ್ತವಾಗುತ್ತವೆ. ಅದಕ್ಕಾಗಿಯೇ ಅದುವರೆಗಿನ ಸಮಾಜದಲ್ಲಿ ಅಡಗಿದ್ದ ಒಂದೊಂದು ಹುಳುಕನ್ನೂ ಪತ್ತೆ ಮಾಡಿ ವಿಶ್ಲೇಷಿಸಿ ಅದರ ಒಳಿತು–ಕೆಡುಕುಗಳನ್ನು ಅರ್ಥಮಾಡಿಸಿ, ಯಾವುದು ನಿಜವಾದ ಮನುಷ್ಯಧರ್ಮ, ಯಾವುದು ಮಾನವೀಯತೆ, ಯಾವುದು ಆರೋಗ್ಯಪೂರ್ಣ ಆಲೋಚನೆ, ಯಾವುದು ಶ್ರೇಷ್ಠ ಸಮಾಜ ಎಂಬಿತ್ಯಾದಿ ವಿಚಾರಗಳನ್ನು ವಚನಗಳ ಮೂಲಕ ಮನುಕುಲಕ್ಕೆ ಅರ್ಥಮಾಡಿಸಿ ಆ ರೀತಿ ಬದುಕುವಂತೆ ದಾರಿ ತೋರಿದರು. ಲಿಂಗ ಸಮಾನತೆಯೂ ಇದರಲ್ಲೇ ಅಂತರ್ಗತವಾಯಿತು. ಈ ದಿಶೆಯಲ್ಲಿ ಅವರು ತಳೆದ ನೈತಿಕ ವಿಚಾರಗಳಿಗೆ ಕೆಲವು ವಚನಗಳನ್ನು ಉದಾಹರಿಸಬಹುದು:

"ತಪವೆತ್ತ ಹೆರರ ಕೇಡಿಂಗೆ ಬಗೆವುದೆತ್ತ? ಜಪವೆತ್ತ
ಶರಣ ಮೇಲೆ ಅನ್ನತವ ನುಡಿವುದೆತ್ತ? ಪಂಚಾಚಾರವೆತ್ತ ಪಾತಕಕ್ಕೆ

ಮನ ಬಗೆವುದೆತ್ತ? ಇಂತೀ ಹೊರಬಳಕೆಯ ಲೋಕರಂಜನೆಯಲ್ಲಿಪ್ಪ ವರಿಗೆ ನಾನಂಜುವೆ. ನಿಜ ಗುರು ಸ್ವತಂತ್ರ ಸಿದ್ಧ ಲಿಂಗೇಶ್ವರಾ ನೀನು ಅಂಜಿ ದೂರದಲ್ಲಿ ಓಡುವೆ".

"ಆಸೆಯುಳ್ಳನ್ನಕ್ಕ, ಒಬ್ಬರ ಆಶ್ರಯಿಸುವುದು. ಆಶ್ರಯದಾಸೆ ಕಷ್ಟ ಕಾಣಿರಯ್ಯ. ಆಸೆಯೇ ದಾಸತ್ವ, ನಿರಾಶೆಯೇ ಈಶತ್ವ, ದಾಸತ್ವದ ಈಶತ್ವದ ಈ ಅನುವ ವಿಚಾರಿಸಿ, ನಿರಾಶೆಯಾಗಿಪ್ಪುದೇ ಈಶಪದವಯ್ಯ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ".

"ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ, ನಾನು ಕೈಮುಟ್ಟಿ ಎತ್ತಿದೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಅದೇನು ಕಾರಣವೆಂದಡೆ, ನೀವಿಕ್ಕಿದ ಭಿಕ್ಷೆಯಲ್ಲಿಪ್ಪೆನಾಗಿ. ಇಂತಲ್ಲದೆ ನಾನು ಅಳಿಮನವ ಮಾಡಿ, ಪರದ್ರವ್ಯಕ್ಕೆ ಆಸೆ ಮಾಡಿದೆನಾದಡೆ ನೀನಾಗಲೇ ಎನ್ನ ನರಕದಲದ್ದಿ ನೀನೆದ್ದು ಹೋಗಾ ಶಂಭು ಜಕ್ಕೇಶ್ವರಾ". "ತೊರೆಯ ಮೊವಣ್ಣಗಳಿರಾ, ತೊರೆಯಿರೋ ಪರಧನವ ! ಪರದ್ರವ್ಯದ ಬಿಡದೆ ಹೋಗಿ ತೊರೆಯಲ್ಲಿ ಮಿಂದರೆ, ಆ ತೊರೆ ಎಲ್ಲ ಬರುದೊರೆ ಕಂಡಯ್ಯ ! ಕಳವ ತೊರೆದು ಮಿಂದರೆ ಒಲಿದು ಕೂಡಿ ಕೊಂಬ ನಮ್ಮ ಕೂಡಲ ಸಂಗಮ ದೇವ".

"ಗಂಡನುಳ್ಳಮ್ಮನ ಗೌರಿ ಎಂದು ಕಂಡಡೆ ಭೂಮಂಡಲಕ್ಕೆ ಅರಸಾಗಿ ಪುಟ್ಟುವನಾತನು. ಗಂಡನುಳ್ಳಮ್ಮನ ಕಂಡು ಒಡವೆರೆದಾತ ನರಕದಲ್ಲಿ ದಿಂಡುಗೆಡೆದಿಪ್ಪನೈ ರಾಮನಾಥಾ".

"ಹರಿವ ಹಾವಿಂಗಂಜೆ, ಉರಿಯ ನಾಲಗೆಗಂಜೆ, ಸುರಗಿಯ ಮೊನೆಗಂಜೆ, ಒಂದಕ್ಕಂಜುವೆ, ಒಂದಕ್ಕಳುಕುವೆ. ಪರಸ್ತ್ರೀ ಎಂಬ ಜೂಜಿಂಗಂಜುಂವೆ. ಮುನ್ನಂಜದ ರಾವಣ ಏ ವಿಧಿಗೊಳಗಾದ? ಅಂಜುವೆನಯ್ಯ ಕೂಡಲ ಸಂಗಮ ದೇವಾ".

"ದಯವಿಲ್ಲದ ಧರ್ಮವದಾವುದಯ್ಯ ; ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ. ದಯವೇ ಧರ್ಮದ ಮೂಲವಯ್ಯ. ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯ".

'ಸ್ವಾಮಿ ಭೃತ್ಯ ಸಂಬಂಧಕ್ಕೆ ಆವುದು ಪಥವೆಂದರೆ, ದಿಟವ ನುಡಿವುದು, ನುಡಿದಂತೆ ನಡೆವುದು. ನುಡಿದು ಹುಸಿವ ನಡೆದು ತಪ್ಪುವ ಪ್ರಪಂಚಿಯನೊಲ್ಲ ಕೂಡಲ ಸಂಗಮ ದೇವ".

"......................ಹುಸಿ ಎಂಬುದು ಹೊಲೆ. ಶಿವಭಕ್ತಂಗೆ ಹುಸಿ ಎಂಬುದುಂಟೇ ಅಯ್ಯ? ಹುಸಿಯನಾಡಿ ಲಿಂಗವ ಪೂಜಿಸಿದಡೆ ಹೊಳ್ಳ ಭಿತ್ತಿ ಫಲವನರಸುವಂತೆ ಕಾಣಾ ಚೆನ್ನಮಲ್ಲಿಕಾರ್ಜುನಾ".*

ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃಭಾವ ಇವು ವಚನಯುಗದ ಸಮಾಜದ ಮೂಲಸ್ತಂಭಗಳಾಗಿದ್ದವು. ಇದರ ಸ್ಥಾಪನೆಗಾಗಿ ವಚನಕಾರರು ಲಿಂಗಾಚಾರ,

ಶಿವಾಚಾರ, ಸದಾಚಾರ, ಭೃತ್ಯಾಚಾರ ಮತ್ತು ಗಣಾಚಾರಗಳೆಂಬ ಪಂಚಾಚಾರಗಳ ಮತಧರ್ಮದ ಕಟ್ಟುಪಾಡುಗಳನ್ನು ಸಮಾಜದಲ್ಲಿ ವಿಧಿಸಬೇಕಾಯಿತು.

ಲಿಂಗಾಚಾರ ಎಂಬುದು ಇಷ್ಟಲಿಂಗದ ಆರಾಧನೆಯನ್ನು ಹೇಳುತ್ತಾ ಸಮಾಜದ ಪ್ರತಿಯೊಬ್ಬನೂ ನನ್ನದು ನಿನ್ನದು ಎಂಬ ಹೊಡೆದಾಟ, ಒಳಜಗಳಗಳನ್ನು, ಭಿನ್ನ ಭಾವಗಳನ್ನು ತೊರೆದು ಪರಸ್ಪರ ಭ್ರಾತೃಭಾವದಿಂದ ವರ್ತಿಸುವುದನ್ನು ಬೋಧಿಸುತ್ತದೆ. ಇದರಲ್ಲಿ ಹೆಣ್ಣು–ಗಂಡೆಂಬ ಭೇದಗಳ್ಯಾವುವೂ ಇಲ್ಲ. "ಇಷ್ಟಲಿಂಗ ಎಂಬುದು ಬಾಹ್ಯಪೂಜೆಗೆ ಕೊಟ್ಟ ಕುರುಹು, ಅದು ಸರ್ವರಲ್ಲಿಯೂ ಅಡಗಿರುವ ಮಹಾಚೈತನ್ಯದ ರೂಪು, ಆದುದರಿಂದ ಅದರಲ್ಲಿ ಹೆಚ್ಚು ಕಡಿಮೆಗಳಿಲ್ಲ. ಅದನ್ನು ಧರಿಸಿದವರಲ್ಲಿಯೂ ಹೆಚ್ಚು ಕಡಿಮೆಗಳಿಲ್ಲ".[೬] ಇದಕ್ಕೆ ಉದಾಹರಣೆಯಾಗಿ ಅಲ್ಲಮಪ್ರಭುವಿನ ಒಂದು ವಚನವನ್ನು ಗಮನಿಸಬಹುದು:

"ಎನಗೊಂದು ಲಿಂಗ, ನಿನಗೊಂದು ಲಿಂಗ, ಮನೆಗೊಂದು
ಲಿಂಗವಾಯ್ತು. ಹೋಯಿತ್ತಲ್ಲಾ ಭಕ್ತಿ ಜಲವ ಕೂಡಿ. ಉಳಿ
ಮುಟ್ಟಿದ ಲಿಂಗವ ಮನ ಮುಟ್ಟಬಲ್ಲುದೇ ಗುಹೇಶ್ವರಾ?"

ಶಿವಾಚಾರದಲ್ಲಿ ಮುಖ್ಯವಾಗುವುದು ನಡೆನುಡಿಯೇ ವಿನಾ ಜಾತಿಭೇದಗಳಲ್ಲ. ಲಿಂಗವನ್ನು ಧರಿಸಿದವರೆಲ್ಲ ಕುಲಜರು, ಶಿವಜಾತಿಯವರು. ಸಮಾಜದ ಐಕ್ಯತೆಗೆ ಸಹಾಯವಾಗುವಂತೆ ಮತದಲ್ಲಿ ವರ್ಣವ್ಯತ್ಯಾಸಗಳನ್ನು ಒತ್ತರಿಸಿ ಭಕ್ತರೆಲ್ಲ ಒಂದೇ ಜಾತಿ, ಪರಸ್ಪರ ಸಮಾನರು ಎಂದು ಸಾರಲಾಯಿತು.

"ದಾಸೀಪುತ್ರನಾಗಲಿ, ವೇಶ್ಯಾಪುತ್ರನಾಗಲಿ ಶಿವದೀಕ್ಷೆಯಾದ ಬಳಿಕ ಸಾಕ್ಷಾತ್ ಶಿವನೆಂದು ವಂದಿಸಿ, ಪೂಜಿಸಿ, ಪಾದೋದಕ ಪ್ರಸಾದವಕೊಂಬುದೇ ಯೋಗ್ಯ. ಹೀಗಲ್ಲದೆ, ಉದಾಸೀನವ ಮಾಡಿ ಬಿಡುವವರಿಗೆ ಪಂಚಮಹಾಪಾತಕ ನರಕ ಕಾಣಾ, ಕೂಡಲ ಚನ್ನ ಸಂಗಮ ದೇವಾ".

"ಉಂಬುದು ಉಡುವುದು ಶಿವಾಚಾರ, ಕೊಂಬುದು ಕೊಡವುದು ಕುಲಾಚಾರ ಎಂಬ ಅನಾಚಾರಿಯ ಮಾತಕೇಳಲಾಗದು. ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರ ಒಂದೇ ಎಂದು ಕೊಟ್ಟು ಕೊಂಬುದು ಸದಾಚಾರ, ಉಳಿದವೆಲ್ಲ ಅನಾಚಾರ.... ಕೂಡಲ ಚೆನ್ನ ಸಂಗಮ ದೇವಯ್ಯ".

ಸದಾಚಾರದಲ್ಲಿ ಕಾಯಕಕ್ಕೆ ಅಧಿಕ ಪ್ರಾಶಸ್ತ್ಯ ನೀಡಿ ಕಾಯಕ ಎಂದರೆ ನಿಜವಾದ ಅರ್ಥದಲ್ಲಿ ಏನು ಎಂಬುದನ್ನು ವ್ಯಾಖ್ಯಾನಿಸಲಾಯಿತು. ಕಾಯಕ ಎಂಬುದು ಜೀವನೋಪಾಯಕ್ಕೆ ಅವಲಂಬಿಸಿದ ಒಂದು ವೃತ್ತಿ. ಎಲ್ಲ ವೃತ್ತಿಗಳಿಗೂ

ಸಮಾನ ಗೌರವಗಳಿವೆ. ಅವುಗಳಲ್ಲಿ ಭೇದಗಳಾಗಲಿ ಹೆಚ್ಚು-ಕಡಿಮೆ ಎಂಬ ಭಾವನೆಗಳಾಗಲಿ ಇಲ್ಲ ಎಂಬುದನ್ನು ವಚನಧರ್ಮ ಸಾರಿ ಹೇಳಿತು:

"....ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ...... ಇದು ಕಾರಣ ಕೂಡಲ ಸಂಗಮ ದೇವಾ ಲಿಂಗ ಸಂಗವನರಿತವನೇ ಕುಲಜನು".

ಇಂತಹ ವಚನಗಳು ತಾನು ಹಿಡಿದ ಕಾರ್ಯಕ್ಕೆ ನಿಷ್ಠನಾಗಿರುವುದೇ ಮುಕ್ತಿಸಾಧನ. ಕಾಯಕವೇ ಕೈಲಾಸ ಎಂಬುದನ್ನು ಮನವರಿಕೆ ಮಾಡಿಕೊಟ್ಟವು. ಇದರಿಂದಲೇ ವಚನಕಾರರಲ್ಲಿ ಎಲ್ಲ ಬಗೆಯ ಕಾಯಕದವರೂ ಸಮಾನ ಗೌರವಾದರಗಳನ್ನು ಗಳಿಸಿಕೊಂಡಿರುವುದನ್ನು ಗಮನಿಸಬಹುದು.

ಪಂಚಾಚಾರಗಳಲ್ಲಿ ಬರುವ ಭೃತ್ಯಾಚಾರವೆಂಬುದು ವ್ಯಕ್ತಿ ತಾನು ಎಷ್ಟೇ ದೊಡ್ಡವ್ಯಕ್ತಿಯಾಗಿರಲಿ 'ಎನಗಿಂತ ಕಿರಿಯರಿಲ್ಲ, ಶರಣರಿಗಿಂತ ಹಿರಿಯರಿಲ್ಲ' ಎಂಬ ಮನೋಭಾವದಿಂದ ಸಮಾಜದ ಸೇವೆಗೆ ತನ್ನ ತನು-ಮನ-ಧನಗಳನ್ನೆಲ್ಲ ಅರ್ಪಿಸಿ ಸಮಾಜಕ್ಕೆ ತಾನು ಸೇವಕನೆಂಬ ಮನೋಭಾವ ತಳೆಯುವಂತಹುದು. ವ್ಯಕ್ತಿ ತನ್ನನ್ನು ಸಮಾಜದಲ್ಲಿ ಐಕ್ಯಗೊಳಿಸುವುದೇ ಭೃತ್ಯಾಚಾರದ ಪರಮ ಗುರಿ. ಅಹಂಕಾರ ದುರಭಿಮಾನಗಳನ್ನು ತೊರೆಯುವಂತಹುದೇ ಭೃತ್ಯಾಚಾರದ ಮೂಲಮಂತ್ರ.

ಗಣಾಚಾರವೆಂಬುದು ಸಮಾಜದ ಉದ್ಧಾರಕ್ಕಾಗಿ ಪ್ರಾಣಾರ್ಪಣೆಯನ್ನಾದರೂ ಮಾಡಲು ಸಿದ್ಧರಿರಬೇಕೆಂಬುದನ್ನು ಬೋಧಿಸುತ್ತದೆ. ಒಟ್ಟಾರೆಯಾಗಿ ವಚನಯುಗದ ಪಂಚಾಚಾರಗಳು ಸಮಾಜದಲ್ಲಿ ಸರ್ವಸಮತಾಭಾವಗಳನ್ನೂ ಲಿಂಗಸಮಾನತೆಯನ್ನೂ ಸ್ಥಾಪಿಸುವ ನಿಟ್ಟಿನಲ್ಲಿ ಸಾಕಷ್ಟು ಬೋಧಪ್ರದವಾಗಿವೆ. ಗಂಡು-ಹೆಣ್ಣೆಂಬ ಲಿಂಗಭೇದಗಳಿಲ್ಲದೆ, ಜಾತಿಭೇದಗಳಿಲ್ಲದೆ ಸಮಾಜದ ಸಮಸ್ತ ಜನರೂ ಮುಕ್ತಿಮಾರ್ಗದಲ್ಲಿ ತ್ರಿಕರಣಶುದ್ಧಿಯಿಂದ ನಡೆಯಲು ಸಕಲ ಅವಕಾಶಗಳೂ ವಚನ ಸಮಾಜದಲ್ಲಿ ತೆರೆದುಕೊಂಡಿದ್ದವು ಎಂಬುದು ವಚನಯುಗದ ಶ್ರೇಷ್ಠ ಸಾಧನೆಯಾಗಿದೆ.

ಕೊನೆಟಿಪ್ಪಣಿಗಳು

೧. "ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ" : (ಸಂ) ಡಾ. ಎಚ್.ಎಸ್. ಶ್ರೀಮತಿ; (ಲೇ) 'ಪ್ರಾಚೀನ ಮಹಿಳಾ ಸಾಹಿತ್ಯ: ಪ್ರೇರಣೆ, ಪ್ರಭಾವ, ಪರಿಸರ ಇತ್ಯಾದಿ'; (ಲೇಖಕಿ) ಶಾಂತಾ ಇಮ್ರಾಪುರ; (ಪ್ರ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ೨೦೦೬; ಪುಟ: ೩೭.

೨. 'ಸ್ತ್ರೀವಾದಿ ಸಾಹಿತ್ಯ ವಿಮರ್ಶೆ'; (ಸಂ) ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ; (ಪ್ರ) ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು : ೧೯೯೪; ಲೇ : 'ವಚನಕಾರ್ತಿಯರು : ಒಂದು ವಿಮುಕ್ತಿಪರ ಚಿಂತನೆ; ಲೇಖಕಿ : ಡಾ. ವಿಜಯಾದಬ್ಬೆ ಪು. ೨೧೪'.

೩. ('ಸ್ತ್ರೀವಾದಿ ಸಾಹಿತ್ಯ ವಿಮರ್ಶೆ'; ಸಂ. ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ; ಕನ್ನಡ ಸಂಘ ಕ್ರೈಸ್ಟ್ ಕಾಲೇಜು, ಬೆಂಗಳೂರು; ೧೯೯೪; ಪು. ೨೧೨–೨೧೩).

೪. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ; (ಸಂ) ಡಾ. ಎಚ್.ಎಸ್. ಶ್ರೀಮತಿ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ೨೦೦೬; ಪು. ೩೯.

೫. 'ನಾರಿ:ದಾರಿ–ದಿಗಂತ': ಡಾ. ವಿಜಯಾದಬ್ಬೆ ರಚನಾ ಪ್ರಕಾಶನ; ೧೯೯೭; ಪು. ೧೦೧.

* ಈ ಎಲ್ಲ ವಚನಗಳನ್ನೂ ಎಂ.ಆರ್. ಶ್ರೀಯವರ 'ವಚನಧರ್ಮಸಾರ'ದಿಂದ ಸಂಗ್ರಹಿಸಿಕೊಳ್ಳಲಾಗಿದೆ.

೬. 'ವಚನಧರ್ಮಸಾರ' ಎಂ.ಆರ್. ಶ್ರೀನಿವಾಸಮೂರ್ತಿ; ಮೈಸೂರು ವಿಶ್ವವಿದ್ಯಾನಿಲಯ; ೧೯೫೬; ಪು. ೨೦೬.

□□□

೪. ಕನಕದಾಸರ ಮೋಹನ ತರಂಗಿಣಿಯಲ್ಲಿ ಮಾನವ ಪ್ರೇಮದ ಅಭಿವ್ಯಕ್ತಿ

– ಪ್ರೊ. ಪ್ರೀತಿ ಶ್ರೀಮಂಧರ್ ಕುಮಾರ್

ಈ ವಿಷಯವನ್ನು ಎರಡು ಬಗೆಯಲ್ಲಿ ಅರ್ಥ ಮಾಡಿಕೊಳ್ಳಬಹುದೆನಿಸಿದೆ. ೧) ಮೋಹನ ತರಂಗಿಣಿಯಲ್ಲಿ ಸ್ತ್ರೀವಾದ ಪ್ರತಿಪಾದಿಸುವ ದಾಂಪತ್ಯದ ಪರಿಕಲ್ಪನೆ ಇದೆ ಎಂದು ಗೃಹೀತವಾಗಿಟ್ಟುಕೊಂಡು ಅದನ್ನು ಸಮರ್ಥಿಸುವ ಯತ್ನ.

೨) ಮೋಹನ ತರಂಗಿಣಿಯಲ್ಲಿ ಸ್ತ್ರೀವಾದ ಪ್ರತಿಪಾದಿಸುವ ದಾಂಪತ್ಯದ ಪರಿಕಲ್ಪನೆ ಇದೆಯೆ? ಎಂಬುದನ್ನು ಪ್ರಶ್ನೆಯಾಗಿಸಿಕೊಂಡು ಉತ್ತರ ಶೋಧಕ್ಕೆ ತೊಡಗುವುದು.

ಪ್ರಶ್ನೆಗಿರುವ ಮುಕ್ತತೆಯ ಸಾಧ್ಯತೆಯನ್ನು ಅನುಲಕ್ಷಿಸಿ ನನ್ನ ಕೆಲವು ವಿಚಾರಗಳನ್ನು ನಿಮ್ಮ ಮುಂದೆ ಇಡುತ್ತೇನೆ. ಪ್ರಶ್ನೆ ಬಹಳ ಜಟಿಲವಾದುದು. 'ದಾಂಪತ್ಯ'ವೆಂಬ ಸಾಮಾಜಿಕ ರಚನೆಯನ್ನು ಗಂಡು-ಹೆಣ್ಣುಗಳ ಮನೋ-ದೈಹಿಕ ನೆಲೆಗಳನ್ನು ರೂಪಿಸುವ ನಿರ್ಣಾಯಕ ವಿಧೇಯಕವಾಗಿ ಸ್ತ್ರೀವಾದಿಗಳು ಪರಿಭಾವಿಸಿದ್ದಾರೆ. ಯಾವಾಗ ಜೀವಿಗಳು ತನ್ನ ನಿಸರ್ಗ ಸಹಜತೆಗೆ ಹೊರತಾಗಿ ತನ್ನನ್ನು ತಾನು ಮೀರಲು, ಅನ್ಯಗೊಳಿಸಿಕೊಳ್ಳಲೆತ್ನಿಸುತ್ತಾರೋ ಆಗ ಪ್ರಜ್ಞಾ ಅಸ್ತಿತ್ವ ರೂಪಣೆಯ ನಿರಂತರ ಕ್ರಿಯೆ ಪ್ರಾರಂಭಗೊಳ್ಳುತ್ತದೆಂದು ಸಿಮೊನ್ ದ ಬುವಾ ಹೇಳುತ್ತಾಳೆ. ಈ ಕ್ರಿಯೆಯ ಫಲಿತವಾಗಿಯೇ ಸ್ತ್ರೀ-ಪುರುಷ ಲೈಂಗಿಕತೆ ಹಾಗೂ ಗುಣಸ್ವಭಾವಗಳ ನಿರ್ವಚನಗಳು ಸಿದ್ಧಗೊಂಡಿವೆ. ಈ ಸಿದ್ಧ ನಿರ್ವಚನಗಳು ಕಲಾಭಿವ್ಯಕ್ತಿಗಳಲ್ಲಿ ನಿರಚನಗೊಳ್ಳುವ ಸಂದರ್ಭ ಕುತೂಹಲಕಾರಿಯಾದುದು.

ಇಡೀ ಕಾವ್ಯದ ಕೇಂದ್ರಬಿಂದು 'ಉಷಾಸ್ವಪ್ನ'. ಉಷೆಯ ಮನದಿಂಗಿತವರಿತ ಪಾರ್ವತಿಗೆ ಗೊತ್ತು; ಈ 'ಗಾಡಿಗಾತಿಗೆ ಪುರುಷಾಪೇಕ್ಷೆ' ಇರುವುದೆಂದು. ನಿಗದಿತ ದಿನ ನಿನಗೊಪ್ಪುವ ಮನ್ಮಥರೂಪಿ ನಲ್ಲ ಕನಸಿನಲ್ಲಿ ಕಾಣಿಸಿಕೊಂಡು ಕ್ರೀಡಿಸುವ, ಆ ಪ್ರಿಯತಮನೊಂದಿಗೇ 'ನಿನ್ನ ವಿವಾಹ' ಎಂಬ ಬಾಯಹರಕೆ ಪಾರ್ವತಿಯದು.

ಅದಾದ ನಂತರ ಅನಿರುದ್ಧನೊಂದಿಗೆ ಕನಸಿನಲ್ಲಿ ಉಷೆ ಪಡೆದ ರತಿಸುಖದ ವಿವಿಧಾವಸ್ಥೆಗಳು ರತಿಶಾಸ್ತ್ರಾನುಸಾರಿ ಕಾವ್ಯದಲ್ಲಿ ವರ್ಣಿತವಾಗಿವೆ. ಗಂಡಿನ ಭೋಗಕ್ಕೆ ಹೆಣ್ಣು ನಿಷ್ಕ್ರಿಯ ಪಾತ್ರಮಾತ್ರಳೆಂಬ ಸಾಂಪ್ರದಾಯಿಕ ನಿರೀಕ್ಷೆಗೆ ವ್ಯತಿರಿಕ್ತವಾಗಿ ಉಷೆಯ ಮೂಲಕಾಮದ ಅಭಿವ್ಯಕ್ತಿಯಾಗಿ ಈ ಸ್ವಪ್ನ ಪ್ರಸಂಗವಿದೆ. ಸಿಮೋನ್ ದ ಬುವಾ ಹೇಳುತ್ತಾಳೆ: ಹುಡುಗಿಯೊಬ್ಬಳು ಮರ ಹತ್ತುವುದು, ಹುಡುಗನಂತೆ ತನಗೂ ಮರ ಹತ್ತಲು ಬರುತ್ತದೆಂದು ತೋರಿಸಲು ಅಲ್ಲ. ತಾನೂ ಮರ ಹತ್ತಬೇಕೆಂಬ ಆಂತರಿಕ ಬಯಕೆ ತನ್ನಲ್ಲಿದೆ ಎಂದು ಯಾರೂ ಯಾಕೆ ತಿಳಿಯುವುದಿಲ್ಲವೆನ್ನುತ್ತಾಳೆ. ಉಷೆಯ ಈ ಕಾಮೋತ್ಕಟತೆಯುಳ್ಳ ಸ್ವಪ್ನ ಪ್ರಸಂಗವನ್ನು ಫ್ರಾಯ್ಡ್ ಹಾಗೂ ಯೂಂಗ್‌ರ ಸುಪ್ತ ಹಾಗೂ ಜನಾಂಗ ಸುಪ್ತ ಪ್ರಜ್ಞೆಯ ಸಾಂಕೇತಿಕ ಅಭಿವ್ಯಕ್ತಿಯಾಗಿ ಸರಳವಾಗಿ, ನೇರವಾಗಿ ಅರ್ಥೈಸಲಾಗದು. ಸಂಕೇತಗಳು ಸುಲಭವಾಗಿ ಸಾಮಾನ್ಯೀಕರಣಕ್ಕೆ ಒಳಗಾಗುವ ಕಾರಣ ಅವುಗಳಿಗೆ ಭೌತಿಕ ವಾಸ್ತವ ಭೂಮಿಕೆಯ ಸ್ಪರ್ಶ ದೊರಕುವುದು ಕಷ್ಟವೇ. ಬಹಳ ಸುಲಭವಾಗಿ ದೈವ-ಭಕ್ತ ಸಂಯೋಗದ ಪರಿಭಾಷೆಯೊಂದು ಸಿದ್ಧಗೊಂಡು ಮಾನವ ಜೀವಿ ಸಮಾನತೆಯ ರಾಜಕೀಯ ಆಯಾಮ ಇಲ್ಲವಾಗುತ್ತದೆ. ಕನಸಿನಲ್ಲಿ ಕಂಡ ಗಂಡು ಹೆಣ್ಣಿಗಾಗಿ ಹೆಣ್ಣು ಗಂಡಿಗಾಗಿ ತೀವ್ರ ಉತ್ಕಟತೆ ಹೊಂದುವ ರಮ್ಯ ಕಥಾನಕಗಳು ಪುರಾಣ ಪ್ರತೀಕಗಳಾಗಿಬಿಡುತ್ತವೆ. ಕೃಷ್ಣ-ರಾಧೆ, ರಾಮ-ಸೀತೆ, ವಿಷ್ಣು-ಲಕ್ಷ್ಮಿ ರೂಪದ ಪ್ರತೀಕಗಳು. ಮಹಿಳಾ ಲೈಂಗಿಕತೆಯ ನಿಯಂತ್ರಣ, ಒಡೆತನಗಳಿಗೆ ಮುನ್ನುಡಿ ಬರೆಯುತ್ತವೆ. ದಿನಬೆಳಗಾದರೆ ಮಾಧ್ಯಮಗಳಲ್ಲಿ ವರದಿಯಾಗುವ ಸ್ವಯಂಘೋಷಿತ ದೇವಮಾನವರ ರಾಸಲೀಲೆಗಳ ಸಮರ್ಥನೆ, ಸಾತತ್ಯಗಳಿಗೆ ಇಂಬಾಗುತ್ತವೆ. ಇಷ್ಟೆಲ್ಲಾ ಮಹಿಳಾಪರ ಕಾನೂನುಗಳಿದ್ದರೂ ಅದು ಕ್ರಿಯಾಶೀಲವಾಗದಿರಲು ಮಹಿಳೆಯ ದೇಹ-ಮನಸ್ಸುಗಳ ಮೇಲಿನ ಉಗ್ರ ನಿಯಂತ್ರಣ ಕಾರಣವಾಗಿದೆ. ಈ ನಿಯಂತ್ರಣಕ್ಕೆ ತಾತ್ತ್ವಿಕ ಬೆಂಬಲವನ್ನು ಮೂಲಕಾಮದ ಮತೀಯ ಆವರಣವುಳ್ಳ ದೈವೀಕರಣ ನೀಡುತ್ತದೆ. ಉಷೆಯಂತಹ ತರುಣಿಯ ವಯೋಸಹಜ ಕಾಮನೆಗಳು ಮೂಲಕಾಮದ ಸ್ವರೂಪದಲ್ಲಿಯೇ ವರ್ಣಿತಗೊಂಡಿರುವುದು ಸ್ತ್ರೀವಾದಿಗಳಿಗೆ ಅಪೇಕ್ಷಣೀಯ. ಸ್ವಪ್ನದ ಸಾಂಕೇತಿಕತೆಯನ್ನು ನೈಜ ಅನುಭವವಾಗಿಸುವ ನಿಟ್ಟಿನಲ್ಲಿ ಉಷೆಯ ಸಖಿ ಚಿತ್ರಲೇಖೆ ಕೈಗೊಳ್ಳುವ ಸಾಹಸಯಾತ್ರೆಯು ರೋಚಕವೆನಿಸಿದರೂ ಮಹಿಳಾವಾದಿ ಅಪೇಕ್ಷೆಯ ಸೋದರಿತ್ವದ ಆಶಯಕ್ಕೆ ಪೂರಕವಾಗಿದೆ. ಮೊದಲಿಗೆ ಅನಿರುದ್ಧನ ಚಿತ್ರವನ್ನು ತಂದಾಕೆ ಅನಿರುದ್ಧನನ್ನು ಆಕಾಶಮಾರ್ಗದಿಂದ ತನ್ನ ಬೆನ್ನ ಮೇಲೆ ಹೊತ್ತು ಉಷೆಯ ಮುಂದೆ ಚಿತ್ರಲೇಖೆ ನಿಲ್ಲಿಸುತ್ತಾಳೆ. ಮತ್ತೂ ಒಂದು ವೈಶಿಷ್ಟ್ಯವೆಂದರೆ, ರತಿಸುಖದ ನಂತರ ಉಷೆ ಮತ್ತು ಅನಿರುದ್ಧರು ತಮ್ಮ ತಮ್ಮ ಕುಟುಂಬದ ಸದಸ್ಯರ ಪರಸ್ಪರ

ಪರಿಚಯ ಮಾಡಿಕೊಡುತ್ತಾರೆ. ವಿವಾಹ ಸಂದರ್ಭದಲ್ಲಿ, ಆಯ್ಕೆಯ ನಂತರ ಕುಟುಂಬದ ಪ್ರಸ್ತಾಪ ಬರುವುದು ಒಂದು ಬಗೆಯ ಪಲ್ಲಟವೇ. ಇಡೀ ವರ್ಣವ್ಯವಸ್ಥೆ ನಿಂತಿರುವುದೇ ಜಾತಿ-ಮತ-ಧರ್ಮಗಳ ಗುರುತನ್ನು ಸಂಕರವಾಗದಂತೆ ಕಾಯ್ದುಕೊಳ್ಳುವಲ್ಲಿ. ಗಂಡು-ಹೆಣ್ಣುಗಳ ವೈವಾಹಿಕ ಆಯ್ಕೆಯ ಹಕ್ಕನ್ನು ಸಮುದಾಯಗಳ ಅಧಿಕಾರಶಕ್ತಿಗಳೇ ಚಲಾಯಿಸುತ್ತವೆ. ಗಂಡಿಗಿಂತ ಹಣ್ಣಿಗೆ ಸಂಗಾತಿ ಆಯ್ಕೆಯ ಹಕ್ಕನ್ನು ಕಠೋರವಾಗಿ ನಿರಾಕರಿಸಲಾಗಿದೆ. ಅದು ಶಿಕ್ಷಾರ್ಹ ಅಪರಾಧವೆಂದು ಪರಿಗಣಿತವಾಗಿದೆ. ವಿವಾಹವೆಂಬ ವಿಧ್ಯುಕ್ತ ಆಚರಣೆಯು ಸಮುದಾಯದ ಶ್ರೇಷ್ಠತೆ-ಶುದ್ಧತೆಯ ಸಂಕೇತವಾದ ಮಹಿಳೆಯನ್ನು ಸಮುದಾಯದೊಳಗೇ ಉಳಿಸಿಬಿಡುವ ಕ್ರಿಯೆಯಾಗಿಬಿಡುತ್ತದೆ. ಉಷೆ-ಅನಿರುದ್ಧರ ನಡುವಿನ ಅಂತರವೋ ವರ್ಗ-ವರ್ಣ-ಲಿಂಗ ತಾರತಮ್ಯವನ್ನು ಮೀರಿದ ದೇವ-ದಾನವ ಎಂಬ ಭೇದ ಕಲ್ಪನೆಯಾಧಾರಿತ. ಈ ಭೇದಕ್ಕೆ ಬೆಂಬಲರೂಪಿಗಳಾಗಿ ನಿಂತ ದೈವಗಳೋ ವಿಷ್ಣು-ಶಿವ, ಹರಿ-ಹರ. ಈ ಮತೀಯ ಧ್ರುವೀಕರಣದ ಫಲಿತವೆಂಬಂತೆ ಮೂಡಿಬಂದ ಯುದ್ಧ ಹಾಗೂ ಹಿಂಸೆಗಳು ಸರಣಿ ಪುರಾಣಗಳ ರಚನಾತತ್ತ್ವವೇ ಆಗಿವೆ. ಹೀಗಿರುವಾಗ ಸ್ವತಂತ್ರ ಪ್ರಣಯದಾಟದ ನಂತರ ತಮ್ಮ ಗುರುತನ್ನು ಹಂಚಿಕೊಳ್ಳುವುದು ವೈವಾಹಿಕ ವಿಧೇಯತಾ ಸಂಹಿತೆಯ ಸ್ಪಷ್ಟ ಉಲ್ಲಂಘನೆಯೇ. ಮೂಲ ಕಾಮದ ಬೀಜ ಮೊಳಕೆಯೊಡೆದು ಪ್ರೇಮವಾಗಿ ಅರಳದಂತೆ ಇದುವರೆಗಿನ ಮತೀಯ ಸಂಸ್ಕೃತಿ, ಧರ್ಮಗಳು ಶ್ರಮಿಸುತ್ತಲೇ ಇವೆ. ಕಾಮಶಕ್ತಿಯೇ ಪ್ರೇಮವಾಗುವ ಮಾಂತ್ರಿಕತೆಯ ಬಗೆಗಿನ ವಿಸ್ಮಯಾಶ್ಚರ್ಯ ಸಂಭ್ರಮಗಳನ್ನು ಜಾತಿ ಸಮಾಜಗಳು ಕಳೆದುಕೊಂಡಿವೆ.

ಬಹಳ ಮುಗ್ಧರಾಗಿ ಉಷಾ ಅನಿರುದ್ಧರು ಪರಸ್ಪರ ಪರಿಚಯ ಮಾಡಿಕೊಳ್ಳುತ್ತಾರೆ. "ಸರ್ವೋತ್ತಮಹರಿ ನಮ್ಮಜ್ಜ, ವೈಭವಕರ್ತಳಾದ ಲಕ್ಷ್ಮಿ ನನ್ನಜ್ಜಿ, ಬ್ರಹ್ಮ ನನ್ನ ದೊಡ್ಡಪ್ಪ. ಒಂದೇ ಸಮನೆ ಹೊಗಳುವ ಸಮಸ್ತ ವೇದ-ಶಾಸ್ತ್ರ-ಪುರಾಣಗಳೂ ನಮ್ಮಜ್ಜನನ್ನು ಕಾಣಲಾರದು. ಅಲ್ಲದೆ ಸಮಸ್ತ ದೇವತೆಗಳೇ ಆತನ ಸೇವಕರಾಗಿದ್ದಾರೆ" ಎನ್ನುವ ಅನಿರುದ್ಧ- "ತಮ್ಮ ಪರ ಪ್ರತಿಷ್ಠೆ ವೈಭವಗಳನ್ನು ತಾವೇ ಹೇಳಿಕೊಳ್ಳುತ್ತಾರೆಯೆ? ನಿನ್ನ ತಂದೆ-ತಾತಂದಿರ ಹೆಸರು ಹೇಳು" ಎನ್ನುತ್ತಾನೆ. ಅದಕ್ಕುತ್ತರವಾಗಿ, ಉಷೆ – "ತಾನು ಪಾತಾಳಲೋಕದಧಿಪತಿ ಬಲೀಂದ್ರನ ಮಗನಾದ ಸಾವಿರ ತೋಳುಳ್ಳ ಬಾಣಾಸುರನ ಪುತ್ರಿ-ತ್ರೈಲೋಕ್ಯ ಪ್ರಖ್ಯಾತೆ ಉಷಾದೇವಿ. ಶ್ರೀಹರಿಯೇ ನಮ್ಮಜ್ಜನ ಅರಮನೆ ಬಾಗಿಲು ಕಾಯ್ದಿರುವ. ಪರಶಿವ ನನ್ನ ತಂದೆಯ ಬಾಗಿಲಲ್ಲಿರುವ" ಎನ್ನುತ್ತಾಳೆ. ಹರಿ ಹರರಿಬ್ಬರೂ ಬಾಗಿಲನ್ನು ಕಾಯ್ದರೆಂದರೆ

ನಮ್ಮವರ ವೈಭವದ ಸೀಮೆಯನ್ನು ನೀನೇ ನಿಶ್ಚಯಿಸು ಎಂದು ಉಷೆ ಹೇಳಲು, ಅನಿರುದ್ಧ ಉದಾರ ಮನಸ್ಸಿನಿಂದ ಅದನ್ನು ಸ್ವೀಕರಿಸುತ್ತಾನೆ. ಸಮಾನ ಅಂತಸ್ತು ಪ್ರತಿಷ್ಠೆ ಸ್ಥಾಪಿತವಾದ ಹಿನ್ನೆಲೆಯಲ್ಲಿ – 'ನಮ್ಮ ನಿಮ್ಮವರ ಸೌಭಾಗ್ಯದ ಸಮಾನತೆಯನ್ನು ಮದುವೆಯಲ್ಲಿ ಕಂಡುಕೊಳ್ಳೋಣ'ವೆನ್ನುತ್ತಾನೆ. ಪ್ರೇಮಿಗಳ ಈ ಔದಾರ್ಯಕ್ಕೆ ಪ್ರತಿಯಾಗಿ ನಾರದನಿಂದ ಪ್ರಚೋದನೆಗೊಳಗಾದ ಬಾಣಾಸುರನಿಗದು ಮಾನಹಾನಿಯ ವಿಷಯವಾಗುತ್ತದೆ. ಪ್ರತಿಯೊಂದು ಜಾತಿ–ಮತ–ಸಮುದಾಯ ತನ್ನ ಶ್ರೇಷ್ಠತೆಯನ್ನು ತನ್ನ ಸಮುದಾಯದ ಮಹಿಳೆಯರ ಕನ್ಯತ್ವ, ತಾಯ್ತನ, ಪಾತಿವ್ರತ್ಯಗಳ ಮೂಲಕ ದತ್ತವಾಗುವ ಪಾವಿತ್ರ್ಯ–ಶುದ್ಧತೆ ಮೂಲಕ ಸ್ಥಾಪಿಸಿಕೊಳ್ಳುತ್ತದೆ. "ಪರಶಿವನ ಸದ್ಭಕ್ತರ ಮಗಳಾದವಳು ಸೂಳೆಯಾಗುವುದು ಉಚಿತವೆ?" ಎಂಬ ಜಾತಿ ಅಹಂಕಾರಕ್ಕೆ ಇಂಬುಕೊಡುವ ನಾರದನ ಮಾತುಗಳು ಈ ಹೊತ್ತಿನ ಮರ್ಯಾದಾ ಹತ್ಯೆ ಸಮರ್ಥನೆಯ ಗಟ್ಟಿ ನೆಲೆಯಾಗಿದೆ. ಪ್ರೇಮಿಗಳನ್ನು ಒಗ್ಗೂಡಿಸುವಲ್ಲಿ ಯೋಧನಿಷ್ಠೆಯ ಯುದ್ಧೋತ್ಸಾಹ ತೋರುವ ಚಿತ್ರಲೇಖೆ ಪಾತ್ರದ ಘನತೆಯ ಎದುರು ಶಂಬಕಾಸುರ–ಮನ್ಮಥ, ಕೃಷ್ಣ–ಬಾಣಾಸುರ, ಮನ್ಮಥ–ಷಣ್ಮುಖ, ಅನಿರುದ್ಧ–ಕುಂಭಾಂಡ, ಬಲರಾಮ–ಗಣಪತಿ, ಬಲರಾಮ–ವೀರಭದ್ರ, ಕೊನೆಗೆ ಹರಿ–ಹರ – ಈ ಗಂಡುಗಳ ನಡುವಿನ ಯುದ್ಧವು ಅಸಂಗತವೆನ್ನುವಂತೆ ಕನಕದಾಸರು ಚಿತ್ರಿಸಿದ್ದಾರೆ. ಈ ಅಸಂಗತತೆಗೆ ಪುಷ್ಟಿ ಕೊಡುವಂತೆ ಮತ್ತೊಂದು ಸನ್ನಿವೇಶವಿದೆ. ಕೃಷ್ಣ ಮತ್ತು ಷಣ್ಮುಖರಿಬ್ಬರ ಯುದ್ಧ ಸಂವಾದ ಕೇಳಿದ ಕಾಳಿ ಇದ್ದಕ್ಕಿದ್ದಂತೆ ನಿರ್ವಾಣರೂಪದಲ್ಲಿ ಪ್ರತ್ಯಕ್ಷಳಾದಾಗ ಅದನ್ನು ನೋಡಲಾರದ ಅಚ್ಯುತ ಕಣ್ಣು ಮುಚ್ಚುತ್ತಾನೆ. "ಸುಡು ಸುಡು ಈ ಕಾಳಗಕ್ಕೆ ಬೆಂಕಿ ಬಿತ್ತು" ಎಂದು ಲಜ್ಜೆಗೊಳ್ಳುತ್ತಾನೆ. ಷಣ್ಮುಖನೂ ಕೃಷ್ಣನೊಡನೆ ಕಾಳಗ ಬೇಡವೆಂದು ನಿರ್ಧರಿಸುತ್ತಾನೆ. ಆದರೆ ಈ ಯುದ್ಧವಿರಾಮವನ್ನು ತುಂಬುವಂತೆ ಆಯಾ ಯೋಧರ ವಾಹನಗಳಾದ ನವಿಲು, ಗರುಡ, ನಂದಿಗಳು ವೀರಾವೇಶದಿಂದ ಹೋರಾಡುತ್ತವೆ. ಯೋಧರ ಪರಸ್ಪರ ಮೂದಲಿಕೆಗಳು ವಿವಾಹ ಸಂದರ್ಭದ ಬೀಗರ ಜರಿಯುವಿಕೆಯ ವೈನೋದಿಕ ಪ್ರಸಂಗಗಳಂತಿವೆ. ಆ ಮೂಲಕ ಅಭಿಜಾತ ಕಾವ್ಯಗಳ ಯುದ್ಧಕೇಂದ್ರಿತ ಸಂವಿಧಾನದ ಮೂಲಕ ಪ್ರಕಟವಾಗುವ ಕಾರುಣ, ಶೋಕ, ರೌದ್ರ, ಭೀಭತ್ಸ ರಸಗಳಿಗೆ ಬದಲಾಗಿ ಶೃಂಗಾರವೊಂದನ್ನೇ ಕನಕದಾಸರು ಆಯ್ಕೆ ಮಾಡಿಕೊಳ್ಳುತ್ತಾರೆ. ಮಾನವ ಪ್ರೇಮಕ್ಕೆ ದಕ್ಕಿದ ಆದ್ಯತೆಯಿಂದಾಗಿ ಯುದ್ಧಸಂಸ್ಕೃತಿ ರೂಪಿಸಿದ ಅಲಂಕಾರಿಕ ಅಭಿವ್ಯಕ್ತಿ 'ಮೋಹನ ತರಂಗಿಣಿ'ಯಲ್ಲಿ ಪಲ್ಲಟಗೊಳ್ಳುತ್ತದೆ.

ಉಷಾ–ಅನಿರುದ್ಧರ ವಿವಾಹಪೂರ್ವ ಪ್ರಣಯಾಭಿವ್ಯಕ್ತಿಯ ಕಾರಣ ಉಂಟಾದ ಸಂಘರ್ಷದ ತಾರ್ತಿಕ ಅಂತ್ಯವಾಗಿ ಹರಿಹರರ ಸಾಮರಸ್ಯವಿದೆ.

ಸಾಮಾನ್ಯವಾಗಿ ಭಕ್ತ-ದೈವ ಸಂಬಂಧವನ್ನು ಪತ್ನಿ-ಪತಿ ಸಂಬಂಧದ ಆದರ್ಶೀಕೃತ ರೂಪವಾಗಿಸಲಾಗಿದೆ. ಈ ಎರಡೂ ಸಂಬಂಧಗಳ ಕಟ್ಟಿಗೆ ನಿಲುಕದ ಕಾಮಮೂಲ ಪ್ರೇಮವನ್ನು ಸಾಂಸ್ಥಿಕ ಅಧಿಕಾರ ಶಕ್ತಿಗಳು ಅನುಮಾನ, ಅಸಹನೆ, ದರ್ಪ, ಕ್ರೌರ್ಯದಿಂದಲೇ ಕಂಡಿವೆ. ಕಾಳಿದಾಸನ ಶಾಕುಂತಲ, ಕುಮಾರಸಂಭವ ಪ್ರಸಂಗಗಳನ್ನು ವಿಮರ್ಶಿಸುತ್ತಾ ರವೀಂದ್ರನಾಥ ಠಾಕೂರರು ಭಾರತೀಯ ಸಂಸ್ಕೃತಿಯ ಮೌಲ್ಯ ಕಲ್ಪನೆಯನ್ನು ವಿಶದಪಡಿಸುತ್ತಾರೆ. ಕಾಮವು ತನ್ನ ಕಾಳಿಕೆಯನ್ನು ವಿರಹ, ಪರೀಕ್ಷೆ, ತಪಸ್ಸುಗಳ ಮೂಲಕ ಸಂಸ್ಕರಿಸಿಕೊಂಡಾಗಲೇ ಸಮಷ್ಟಿ ಬದುಕಿಗೆ ಉಪಯುಕ್ತವಾಗಿ ಮೌಲಿಕವೆಂದು ಪರಿಗಣಿತವಾಗುತ್ತದೆ. ಶಿವನನ್ನು ಪಡೆವ ಪಾರ್ವತಿಯ ಉತ್ಕಟ ಪ್ರಣಯವು ಉಗ್ರ ತಪಸ್ಸನ್ನು ಅವಳಿಂದ ಬೇಡುತ್ತದೆ. ಅವರಿಬ್ಬರ ಮಿಲನವು ಪ್ರಣಯಾಭಿಲಾಷೆಯ ಪೂರೈಕೆಗೆ ಸೀಮಿತವಾಗಿರದೆ ದುಷ್ಟ ಸಂಹಾರ ಮಾಡಬಲ್ಲ ಪುತ್ರನನ್ನು ಪಡೆಯುವುದೇ ಆಗಿದೆ. ಈ ಋತಕ್ಕೆ ಕಾಮದೇವನೂ ಅಧೀನ. ಪರಿಣಾಮವಾಗಿ, ಕೊಲ್ಲಬಲ್ಲ ಯೋಧನ ಜನನಕ್ಕಾಗಿ ರತಿ-ಮನ್ಮಥರ ಕುಟುಂಬ ನಾಶವಾಗುತ್ತದೆ. 'ರತಿ ಪ್ರಲಾಪ'ವು ಯುದ್ಧಗಳ ಮೂಲಕ ನಾಶಗೊಂಡ, ಕಾಮಮೂಲ ಪ್ರೇಮವಂಚಿತರಾದವರೆಲ್ಲರಲ್ಲಿ ಅಂತಸ್ಥವಾಗಿರುವ ಶೋಕ ಸ್ಥಾಯಿಯೇ ಆಗಿಬಿಡುತ್ತದೆ. ವಿರುದ್ಧ ಶಕ್ತಿಗಳ ಪರಸ್ಪರ ಬಲಾಬಲಗಳ ಸಂವರ್ಧನೆಗಾಗಿ ಬಲಿಯಾಗುವ 'ಕಾಮ'ನಿಗೊಂದು ಸಾಂಕೇತಿಕತೆ ಪ್ರಾಪ್ತವಾಗುತ್ತದೆ. ಈ ಸಂಕೇತ ವ್ಯವಸ್ಥೆಯಲ್ಲಿ ಸಂಗಾತಿ ರತಿಯ ಸ್ಥಾನವೇನೆಂಬುದು ಪ್ರಶ್ನೆಯೇ. ಟಿಕೆಟ್ಟ ರತಿ ಅಂಬರಾಸುರನಿಂದ ಪೀಡನೆಗೊಳಗಾಗುತ್ತಾಳೆ. ಪೂರ್ಣ ಆಕ್ರಮಣಕ್ಕೆ ಅವಳನ್ನೊಳಪಡಿಸದೆ ಅಡುಗೆ ಮನೆಯ ದಾಸಿಯಾಗಿ ಇರಿಸಲಾಗುತ್ತದೆ. ರುಕ್ಮಿಣಿಯ ಮಗ ಪ್ರದ್ಯುಮ್ನನಾಗಿ ಜನಿಸಿ ಅಪಹರಣಕ್ಕೊಳಗಾದ ಕಾಮ ಮತ್ತದೇ ರತಿಯ ಕೈಗೇ ಕೂಸಾಗಿ ಸೇರುತ್ತಾನೆ. ಇಲ್ಲಿಗೆ ರತಿಯ ಪ್ರೇಮಿ ಪತ್ನಿಯ ಸಾಂಕೇತಿಕತೆ ಪ್ರೇಮಿ-ತಾಯಿಯಾಗಿ ವಿಸ್ತಾರಗೊಳ್ಳುತ್ತದೆ. ಅಗಮ್ಯಗಮನದ ದೋಷ ಈ ವಿಸ್ತರಿತ ಸಾಂಕೇತಿಕತೆಗೆ ತಟ್ಟದು. ಏಕೆಂದರೆ, ಬಾಣಾಸುರನ ಸೋಲಿಗೆ ಕಾರಣವಾಗಬಲ್ಲ ಅನಿರುದ್ಧನ ಜನನಕ್ಕೆ ರತಿ-ಪ್ರದ್ಯುಮ್ನರ ಸಮಾಜ ಒಪ್ಪಿತ ಸಂಬಂಧ ಅತ್ಯಗತ್ಯ. ರತಿ-ಮನ್ಮಥರಿಬ್ಬರೂ ಶಾಪ-ವಿರಹ-ಮಿಲನಗಳ ಆವರಣದಲ್ಲಿ ಪ್ರೌಢರಾಗುವುದು ಸಾಂಸ್ಕೃತಿಕ ಮೌಲ್ಯ ಕಲ್ಪನೆಗೆ ಅತ್ಯಗತ್ಯ. ಒಬ್ಬರನ್ನು ಸೋಲಿಸಿ ಕೊಲ್ಲಲೆಂದೇ ಮತ್ತೊಬ್ಬರನ್ನು ಬಳಸುವ ಅಧಿಕಾರ ರಾಜಕಾರಣದ ಸಂಕಥನವಾಗಿ ಮೋಹನತರಂಗಿಣಿ ಕಾವ್ಯ ಕಾಣುತ್ತದೆ. ಆದರೆ ಅಂಥ ಸಿದ್ಧ ಸಾಮಾಜಿಕ ಪಾತ್ರ ನಿರೀಕ್ಷೆಗಳಾಚೆ ಕೂಡ ತುಡಿಯುವ ಮೂಲಕಾಮದ ಮಹತ್ವವನ್ನು ಮೋಹನತರಂಗಿಣಿ ಎತ್ತಿಹಿಡಿಯುತ್ತದೆ. ಎಲ್ಲ ಜಲ ಬಿಂದುಗಳೂ ಸಾಗರ ತರಂಗ ಲೀಲೆಯಲ್ಲಿ ಇದ್ದೂ

ಇಲ್ಲದಂತಿರುವ ದ್ವೈತ-ಅದ್ವೈತಗಳ ಅಪೂರ್ವ ಸಹಯೋಗವನ್ನು ಮಾನವ ಪ್ರೇಮ ಪ್ರತೀತಗೊಳಿಸುವಂತೆ ಮತ್ತಾವುದೂ ಮನವರಿಕೆ ಮಾಡಿಕೊಡದು. ಕಾಮ-ರತಿ, ಉಷಾ-ಪ್ರದ್ಯುಮ್ನರ ರತಿಸುಖದ ವರ್ಣನೆಗಳು ಅಶ್ಲೀಲವೆಂಬ ಕಾರಣ ನೀಡಿ ಮೋಹನತರಂಗಿಣಿ textನ್ನು ಕೈಬಿಡಬೇಕೆಂಬ ಪ್ರಯತ್ನ ನಡೆದದ್ದುಂಟು. ಕಾಮ ಹಾಗೂ ಪ್ರೇಮಗಳನ್ನು ಬದುಕಾಗಿ ಅನುಭವಿಸದೆ, ಅದರ ಬಗೆಗಿನ ಸಾಂಸ್ಥಿಕ ಭ್ರಮೆಗಳನ್ನು ಹೇರಿಕೊಂಡ ಸಮಾಜ ಎಂದೂ ಜೀವಪರವಾಗದು. ಯುದ್ಧಪಿಪಾಸುತನದ ನಾನಾ ರೂಪಗಳು ತಾಂಡವವಾಡುತ್ತಿರುವ ಸಂದರ್ಭದಲ್ಲಿ ಸ್ತ್ರೀವಾದ ಕೇಳಿಕೊಳ್ಳುವುದಿಷ್ಟೇ! ಮಹಿಳೆಯನ್ನು ಒಳಗೊಂಡಂತೆ ಎಲ್ಲರ ಬದುಕುವ ಹಕ್ಕುಗಳನ್ನು, ಸಂತೋಷದಿಂದ ಬದುಕುವ ಹಕ್ಕುಗಳನ್ನು ಮಾನ್ಯಮಾಡಿ ಎಂದು. ಈ ನಿಟ್ಟಿನಲ್ಲಿ ಮಾನವ ಜೀವಿಗಳನ್ನು ಪರಸ್ಪರ ಎದುರಾಳಿ ಯೋಧರನ್ನಾಗಿಸದೆ, ಅಸಮಾನ ಅಧಿಕಾರ ಸಂಬಂಧಗಳಿಂದ ವಿಮುಕ್ತಿಗೊಳಿಸುವ ಜೀವಸಂಭ್ರಮದ ಸಂಬಂಧಗಳ ಹುಟ್ಟಿಗೆ ಕಾರಣವಾಗುವ ದಾಂಪತ್ಯದ ಆದರ್ಶವನ್ನಂತೂ ಮೋಹನತರಂಗಿಣಿ ಪ್ರಾಮಾಣಿಕವಾಗಿಯೇ ಕಟ್ಟಿಕೊಟ್ಟಿದೆ.

□□□

೫. ಜನಪದ ಗೀತೆಗಳಲ್ಲಿ ವಾಣಿಜ್ಯ ಪರಿಕಲ್ಪನೆ

- ಮಂಜು ಎಚ್.ಪಿ.

ಜಾನಪದ ಒಂದು ಅಂತರಶಿಸ್ತೀಯ ಅಧ್ಯಯನದ ವಿಷಯ. ಜಾನಪದ ಇತರೆ ಶಾಸ್ತ್ರಗಳನ್ನು ಬೆಳೆಯಲು ಬಿಟ್ಟು, ಅವುಗಳಲ್ಲಿ ಜಾನಪದ ತನ್ನ ಇರುವಿಕೆಯನ್ನು ತೋರ್ಪಡಿಸಿಕೊಳ್ಳುವುದು ಅದರ ಚಲನಾಶೀಲತೆ. ಇತಿಹಾಸ, ಮನಶ್ಶಾಸ್ತ್ರ, ಭಾಷಾಶಾಸ್ತ್ರ, ತತ್ವಶಾಸ್ತ್ರ, ಮಾನವಶಾಸ್ತ್ರಗಳೊಂದಿಗೆ ಜಾನಪದ ಸಂಬಂಧ ಹೊಂದಿರುವಂತೆ ವಾಣಿಜ್ಯಶಾಸ್ತ್ರದೊಂದಿಗೆ ಅತ್ಯಂತ ನಿಕಟ ಸಂಬಂಧವನ್ನು ಹೊಂದಿದೆ. ಏಕೆಂದರೆ ಜಾನಪದ ಜನಪದರ ಜೀವನ ಕ್ರಮ. ಜನಪದರ ಬದುಕು ವಾಣಿಜ್ಯ ಕ್ಷೇತ್ರಗಳಲ್ಲಿ ಹಾಸುಹೊಕ್ಕಾಗಿದ್ದು ಇಲ್ಲೆಲ್ಲಾ ಜಾನಪದದ ದ್ರವ್ಯತೆ ವಿಪುಲವಾಗಿದೆ.

"ಒಂದು ವಸ್ತುವಿನ ಉತ್ಪಾದನೆಯಾದಂದಿನಿಂದ ಅದು ಗ್ರಾಹಕನ ಕೈ ಸೇರುವವರೆಗಿನ ಎಲ್ಲಾ ಕಾರ್ಯಗಳಲ್ಲಿ ಜಾನಪದ ಒಳಗೊಳ್ಳುವುದನ್ನು ವಾಣಿಜ್ಯ ಜಾನಪದ ಎಂದು ಕರೆಯಬಹುದು." ಜಾನಪದ ವರ್ಗೀಕರಣದ ಪಿತಾಮಹ 'ಆರ್.ಎಸ್. ಬಾಗ್ಸ್'ರವರು ರಚಿಸಿದ ತಮ್ಮ ಸಂಪ್ರದಾಯಗಳ ಪಟ್ಟಿಯಲ್ಲಿ "ಎಫ್ ೫೩೪ ಕೆಲಸ-ವಾಣಿಜ್ಯ, ಎಫ್ ೫೭೫ ತೂಕ ಮತ್ತು ಅಳತೆಗಳು"[೧] ಎಂದು ಗುರುತಿಸಿ, ಇವುಗಳನ್ನು ಜಾನಪದದಲ್ಲಿ ಅಧ್ಯಯನ ಮಾಡಬಹುದೆಂದು ಹೇಳಿದ್ದಾರೆ. ಈ ಹಿನ್ನೆಲೆಯು ವಾಣಿಜ್ಯದಲ್ಲಿ ಜಾನಪದವನ್ನು ಸಂಶೋಧನಾತ್ಮಕವಾಗಿ ನೋಡುವಂತೆ ಪ್ರೇರೇಪಿಸುತ್ತದೆ. ಅಷ್ಟೇ ಅಲ್ಲದೆ ಲೌರಿಹಾಂಕೋರವರು "ಜಾನಪದದ ಸಮಗ್ರ ದೃಷ್ಟಿಯ ಅಧ್ಯಯನದಲ್ಲಿ" ಜಾನಪದವನ್ನು ವಾಣಿಜ್ಯ ಕಾರಣಗಳಿಗೆ ಬಳಸುವುದು ಸೂಕ್ತ ಎಂದು ಹೇಳಿರುವುದು ಆರ್.ಎಸ್. ಬಾಗ್ಸ್‌ರವರ ವಾಣಿಜ್ಯ ಜಾನಪದದ ಪರಿಕಲ್ಪನೆಯನ್ನು ಮತ್ತಷ್ಟು ಬಲಪಡಿಸುತ್ತದೆ.

ಜನಪದ ಸಾಹಿತ್ಯವು ಜನಸಾಮಾನ್ಯರ ಬದುಕಿನ ದೇವಗಂಗೆ. ಈ ಸಾಹಿತ್ಯದಲ್ಲಿ ಜನಪದಗೀತೆ, ಜನಪದ ಕಥೆ, ಜನಪದ ಮಹಾಕಾವ್ಯ, ಲಾವಣಿ, ಗಾದೆ, ಒಗಟು ಮುಂತಾದ ವಿದ್ವತ್ ಪ್ರಕಾರಗಳಿವೆ. ಜಾನಪದದಲ್ಲಿ ಇವೆಲ್ಲವೂ ಮೇಳೈಸಿಕೊಂಡಂತೆ ಜನಪದ ಸಾಹಿತ್ಯ ಒಂದು ಭಾಗವಾಗಿಯೇ ನಿಲ್ಲುತ್ತದೆ. ಇಂತಹ ಜನಪದ ಸಾಹಿತ್ಯವನ್ನು

ಕಲಾತ್ಮಕ ಪರಿಕಲ್ಪನೆಯಲ್ಲಿ ಮಾತ್ರವಲ್ಲದೆ, ವಾಣಿಜ್ಯದ ಪರಿಕಲ್ಪನೆಯಲ್ಲಿಯೂ ಪರಿಶೀಲಿಸಬೇಕಾಗುತ್ತದೆ. ಜನಪದರಲ್ಲಿ ಒಂದು ಗಾದೆ ಮಾತಿದೆ. 'ಆಡು ಮುಟ್ಟದ ಸೊಪ್ಪಿಲ್ಲ' ಎಂದು, ಅಂತೆಯೇ ಜನಪದ ಸಾಹಿತ್ಯವಿರದ ಕ್ಷೇತ್ರವಿಲ್ಲ ಎಂದು ಹೇಳಬಹುದು. ಜನಪದ ಸಾಹಿತ್ಯ ರಾಶಿಯಲ್ಲಿ ಸಿಂಹಪಾಲನ್ನು ಹೊಂದಿರುವ ಜನಪದ ಗೀತೆಗಳು ಮಾನವನ ಬದುಕಿನ ಪ್ರತಿಯೊಂದು ಚಿತ್ರಣವನ್ನು ತೆರೆದಿಡುವ ಪರಂಪರೆಯನ್ನು ಹೊಂದಿದೆ. "ಅನಕ್ಷರಸ್ಥ ಜನ ಸಮೂಹದ ನಡುವೆ ವಾಕ್ಸಂಪ್ರದಾಯದ ಮೂಲಕ ಹರಿದು ಬಂದಿರುವ ಒಂದು ಗುಂಪಿನ ಕಾವ್ಯ ಮತ್ತು ಸಂಗೀತಗಳ ಸಮಾವೇಶದಿಂದಾದುದು ಜನಪದ ಗೀತೆಗಳು."[೨] ಪರಂಪರಾಗತವಾಗಿ ವಾಕ್ಸಂಪ್ರದಾಯದ ಮೂಲಕ ಬಂದ ಜನಪದ ಗೀತೆಗಳು ಆಯಾ ಕಾಲಘಟ್ಟಗಳ ವಿಚಾರಗಳನ್ನು ತಿಳಿಸುತ್ತದೆ. ವಾಣಿಜ್ಯ ವ್ಯವಸ್ಥೆಯೊಳಗೆ ಸೃಷ್ಟಿಯಾದ ಸಹಕಾರ, ಸಾಟಿ (ಚಾಟಿ) ಪದ್ಧತಿ, ಪರಿಷೆ, ಸಂತೆ, ಬೀದಿ, ಪೇಟೆ, ವ್ಯಾಪಾರ, ಮಾರುಕಟ್ಟೆ ಕುರಿತಾದ ವಿಷಯಗಳು ಜನಪದ ಗೀತೆಗಳಲ್ಲಿ ಅನಾವರಣಗೊಳ್ಳುತ್ತದೆ. ಇದರಿಂದ ಜನಪದ ಗೀತೆಗಳು ಸಹ ಮಾನವ ಜೀವನದ ಕೈಗನ್ನಡಿಯಾಗುತ್ತದೆ ಎಂದು ಹೇಳಬಹುದು.

ಶುಕ್ರವಾರ ಮೈಸೂರಲ್ ಸಂತೆ
ಅಲ್ಲಿ ಮಾರೋದು ಮೂಲಂಗಿ ಕಂತೆ
ಅಯ್ಯಾ ನಿಂಗೂ ನಂಗ್ಯಾಕವಳ ಚಿಂತೆ
ತೆಗೆದೆಸ್ಕೋ ಹಣ ಜೋ ಬಂತೆ ॥

ಜನಪದರು ಕೋಲಾಟದ ಪದಗಳಲ್ಲಿ ವಿವೇಕ, ಪ್ರಾರ್ಥನೆ, ಹಾರೈಕೆಗಳನ್ನು ತಿಳಿಸುವುದರ ಜೊತೆಗೆ ಮಾನವನ ವಾಣಿಜ್ಯ ಚಟುವಟಿಕೆಗಳ ಕೇಂದ್ರವಾದ ಸಂತೆಯ ಬಗ್ಗೆ ಹೇಳುವಂತಹ ವಿಚಾರಗಳು ಕಂಡುಬರುತ್ತವೆ. ವಾರದ ಒಂದೊಂದು ದಿನವು ಸಂತೆ ನಡೆಯುತ್ತಿದ್ದ ವಿಚಾರಗಳನ್ನು ಕಾವ್ಯಾತ್ಮಕವಾಗಿ ಕಟ್ಟಿಕೊಡುವಂತಹ ಕವಿ ಪ್ರತಿಭೆ ಜನಪದರದ್ದು. ಮೈಸೂರಿನಲ್ಲಿ ಶುಕ್ರವಾರ ಸಂತೆ ನಡೆಯುತ್ತಿದ್ದುದು ಐತಿಹಾಸಿಕ ಮಹತ್ವವನ್ನು ಹೊಂದಿದೆ. ೧೮೯೩ರಲ್ಲಿ ಮೈಸೂರಿನ ಹಳೆಯ ಅರಮನೆಗೆ ಬೆಂಕಿ ತಗುಲಿ ಸುಟ್ಟು ಹೋದುದರಿಂದ ಕೋಟೆಯೊಳಗಿನ ಅರಸು ವರ್ಗದವರಿಗೆ, ದಿವಾನರಿಗೆ, ಬ್ರಾಹ್ಮಣಾದಿ ವರ್ಗದವರಿಗೆ ಲಕ್ಷ್ಮೀಪುರಂ ಭಾಗದಲ್ಲಿ ವಸತಿ ಸೌಕರ್ಯ ಕಲ್ಪಿಸಿದಲ್ಲದೆ ಅವರಿಗೆ ಮತ್ತು ಸುತ್ತಮುತ್ತಲ ಜನರಿಗೆ ಅನುಕೂಲವಾಗಲೆಂದು ಇಂದಿನ ವಾಣಿವಿಲಾಸ ಮಾರುಕಟ್ಟೆ ಜಾಗದಲ್ಲಿ ಶುಕ್ರವಾರ ಸಂತೆ ನಡೆಯುವಂತೆ ಅನುವು ಮಾಡಿಕೊಟ್ಟವರು ಅಂದಿನ ಮಹಾರಾಜರು. ವಾರದ ಒಂದೊಂದು ದಿನವು ಸಂತೆ ನಡೆಯುತ್ತಿದ್ದ ಅನೇಕ ಉದಾಹರಣೆಗಳು ಇನ್ನೂ ಜೀವಂತವಾಗಿವೆ.

ಭಾನುವಾರ-ಗೊರೂರಿನಲ್ಲಿ, ಸೋಮವಾರ-ಹೊಳೆನರಸೀಪುರದಲ್ಲಿ, ಮಂಗಳವಾರ-ಹಾಸನದಲ್ಲಿ, ಬುಧವಾರ-ಆಲೂರಿನಲ್ಲಿ, ಶುಕ್ರವಾರ-ನಂಜನಗೂಡಿನಲ್ಲಿ ಸಂತೆಗಳು ಜರುಗುತ್ತವೆ. ಇದೇ ರೀತಿ ಒಂದೊಂದು ವಸ್ತುವಿಗೂ ಒಂದೊಂದು ದಿನ ಸಂತೆಗಳು ಜರುಗುತ್ತವೆ. "ವಿಜಯನಗರದ ಕಾಲದಲ್ಲಿ ಒಂದೊಂದು ವಸ್ತುವಿಗೂ ಒಂದೊಂದು ಸಂತೆಗಳಿದ್ದವೆಂದು ರಾಬರ್ಟ್‌ಸಿವೆಲ್ ಫರ್‌ಗಾಟನ್ ಎಂಫೈರ್ ಕೃತಿಯಲ್ಲಿ ದಾಖಲಿಸಿದ್ದಾರೆ."[೩]

ಕುಂತಾಡು ಮಗಳಿಗೆ ಕೂದಲ ಬಿಟ್ಟೇನ
ನಗರದ ಚೌಲಿ ತರಸೇನ । ಮನೆಯಾನ
ತಮ್ಮಗ ಧಾರೆ ಎರದೇನ ॥

ತಾನು ಹಡೆದ ಮಗಳು ಬಾಲ್ಯಾವಸ್ಥೆಯಲ್ಲಿರುವುದರಿಂದ ಇನ್ನೂ ಜಡೆ ಬೆಳೆದಿಲ್ಲ. ಮದುವೆ ಮಾಡಲು 'ಜಡೆ' ಅನಿವಾರ್ಯವಾಗಿರುವುದು ಇಲ್ಲಿ ವ್ಯಕ್ತವಾಗುತ್ತದೆ. ತನ್ನ ತಮ್ಮನಿಗೆ ಮಗಳನ್ನು ಕೊಡಬೇಕೆಂಬ ಹಠಕ್ಕೆ ಬಿದ್ದಿರುವ ತಾಯಿ ನಗರದಲ್ಲಿ ಸಿಗುವ ಚೌಲಿಯನ್ನಾದರೂ ತಂದು ಮಗಳ ಮದುವೆ ಮಾಡುವ ಬಯಕೆ ಅವಳದು. ನಗರದಲ್ಲಿ ಮದುವೆಗೆ ಬೇಕಾದ ಚೌಲಿಯಂತಹ ವಸ್ತುಗಳು ಮಾರಾಟಕ್ಕೆ ಸಿಗುತ್ತವೆ ಎಂಬುದನ್ನು ಈ ಜನಪದ ಗೀತೆಯಲ್ಲಿ ಕಂಡುಕೊಂಡರು. ಇಲ್ಲಿ ಬಾಲ್ಯವಿವಾಹಕ್ಕೆ ಸಿದ್ಧತೆ ನಡೆಯುತ್ತಿದೆ ಎಂಬುದನ್ನು ಮರೆಯುವಂತಿಲ್ಲ.

ಸಂತೋಷದ ಸುದ್ದಿ, ಸಂತ್ಯಾಗ ಕೇಳಿನಿ
ಕೆಂಚಿ ನನತಂಗಿ ಬಸರಂತ । ಹೇಳ್ಯಾನ
ಹಂಪಿ ಸಾಗರದ ಬಣಜಿಗ ॥

ಬಣಜಿಗರು ಒಂದು ವ್ಯಾಪಾರಿ ಸಮುದಾಯ. ವ್ಯಾಪಾರಕ್ಕಾಗಿ ಬಣಜಿಗರು ಸಂತೆಗಳಿಗೆ ತಿರುಗುವುದು ಸಾಮಾನ್ಯ, ಹೀಗೆ ಅವರು ಸಂತೆಗಳಿಗೆ ಹೋಗುವಾಗ ಸುತ್ತಮುತ್ತಲ ಹಳ್ಳಿಗಳ ಸುಖ-ದುಃಖದ ವಿಚಾರಗಳನ್ನು ಕೊಂಡೊಯ್ಯುತ್ತಿದ್ದರು. ಮಾಧ್ಯಮಗಳ ಕೊರತೆ ಇದ್ದ ಆ ಕಾಲದಲ್ಲಿ ವ್ಯಾಪಾರಿಗಳೇ ವಿಚಾರ ವಿನಿಮಯದ ಮಾಧ್ಯಮ. ಸಂತೆ-ಜಾತ್ರೆಗಳು ವಸ್ತು ವಿಚಾರ ವಿನಿಮಯದ ಕೇಂದ್ರಸ್ಥಾನ. ಇಂತಹ ಸಂತೆಯಲ್ಲಿ ತಂಗಿಯು ಬಸಿರಿರುವ ಸಂತೋಷದ ಸುದ್ದಿಯನ್ನು ಕೇಳಿ ಅಕ್ಕನ ಪ್ರೀತಿಯು ಹೆಚ್ಚಿ, ಸಂತೆಯಲ್ಲಿ ಸಿಗುವ ವಸ್ತುಗಳನ್ನು ಕೊಂಡು ತಂಗಿಗೆ ಬಸಿರೂಟ ಒಯ್ಯಲು ಇಚ್ಛಿಸುವುದು ಖಂಡಿತ.

ಹಾಳಾದ ಜೀವವು ಏನೇನ ಬಯಸೀತೊ
ಈಶಾನ ಗರೆಯಾಚೆ ಮೈಸೂರ । ಬೀದೀಲಿ
ಬದನೆ ಮಾರೋ ಹುಡುಗಿಯ ॥

ಜನಪದ ಕವಿ ಅಡೆತಡೆಯಿಲ್ಲದೆ ಎದುರೆದುರು ಖಂಡನೆಯಿಂದ ಹಿಡಿದು

ನವಿರಾದ ವ್ಯಂಗ್ಯದವರೆವಿಗೂ ಹಲವು ಪರಿಯಲ್ಲಿ ಹೇಳಬೇಕಾದುದನ್ನು ಹೇಳಿಯೇ ಬಿಡುತ್ತಾನೆ. ಹುಡುಗಿಯನ್ನು ಬಯಸಿರುವುದರ ಹಿಂದೆ ಜನಪದ ಗೀತೆಯಲ್ಲಿ ಮಾರಾಟಗಾರ್ತಿಯನ್ನು, ಅದರಲ್ಲೂ ಹುಡುಗಿಯು ಬದನೆ ಮಾರುವವಳಾಗಿರುವುದು ಲಿಂಗಾಧಾರಿತ ನೆಲೆಯಲ್ಲಿ ಮುಖ್ಯವಾಗುತ್ತವೆ. ಸಂತೆಗಳಲ್ಲಿ ಅಷ್ಟೇ ಅಲ್ಲದೆ ಬೀದಿಯಲ್ಲಿ ವಸ್ತುಗಳನ್ನು ಅಥವಾ ಪದಾರ್ಥಗಳನ್ನು ಮಾರುವ ಅಂಶಗಳು ಇಲ್ಲಿ ಬೆಳಕಿಗೆ ಬರುತ್ತದೆ. ಒಂದೊಂದು ಪದಾರ್ಥಗಳನ್ನು ಒಂದೊಂದು ಬೀದಿಯಲ್ಲಿ ಮಾರುವುದನ್ನು ಈ ಕೆಳಗಿನ ಜನಪದ ತ್ರಿಪದಿ ತಿಳಿಸುತ್ತದೆ.

ಹಾಲು ಮಾರುವ ಬೀದಿ
ನೂಲು ಮಾರುವ ಬೀದಿ
ಸಾಲು ಸಕಲಾತಿಗಳ ಮಾರುವ ಬೀದಿ

ಎಂದು ಕರಪಾಲ ಮೇಳದವರು ರಾಜನ ಕಾಲದ ನಗರದ ವೈಭವವನ್ನು ಈ ಮೇಲಿನಂತೆ ವರ್ಣಿಸಿದ್ದಾರೆ. ಹಾಲು, ನೂಲು ಮಾರುವ ಬೀದಿಗಳು ಇದ್ದ ಹಾಗೆ ಎಲ್ಲ ಪದಾರ್ಥಗಳನ್ನು ಮಾರುವ ಬೀದಿಗಳು ರಾಜನ ಕಾಲದ ವಾಣಿಜ್ಯ ವ್ಯವಸ್ಥೆಯನ್ನು ಬಿಂಬಿಸುತ್ತದೆ. ಅಂತೆಯೇ ವಿಜಯನಗರದ ಸುವರ್ಣಯುಗದಲ್ಲಿ ಮುತ್ತು-ರತ್ನಗಳನ್ನು ಬೀದಿಬೀದಿಯಲ್ಲಿ ಮಾರುತ್ತಿದ್ದುದು ಜನಪದರ ವಾಘ್‌ರೂಢಿಯಲ್ಲಿ ಈಗಲೂ ಬಳಕೆಯಲ್ಲಿದೆ. ಇದು ಇತಿಹಾಸ ಪ್ರಸಿದ್ಧವೂ ಕೂಡ ಆಗಿದೆ.

ಅಪ್ಪನಾ ಗಿರಿಮ್ಯಾಲೆ ಏನೇನು ಮಾರ್‍ಯಾವೆ?
ಬಾಯಾರಿ ಬಂದೋರಿಗೆ ಎಳನೀರು । ಇಂಬೀ ಹಣ್ಣು
ಸಾರಿ ಮಾರ್‍ಯಾರೆ ಗಿರಿಮ್ಯಾಲೆ॥

ಆದಿಚುಂಚನಗಿರಿಯ ಜನಪದ ಗೀತೆಗಳು ಜಾನಪದದಲ್ಲಿ ಹಾಸುಹೊಕ್ಕಾಗಿದೆ. ಆದಿಚುಂಚನಗಿರಿಗೆ ದೇವರನ್ನು ನೋಡಲು ಹೋಗುವವರು ಬೆಟ್ಟ ಏರುವುದರಿಂದ ಆಯಾಸವಾಗುತ್ತದೆ. ಇದನ್ನರಿತ ವ್ಯಾಪಾರಿಗಳು ಎಳನೀರನ್ನು ಮಾರುತ್ತಾರೆ. ಇಲ್ಲಿಗೆ ಬಂದ ಭಕ್ತರು ದೇವರ ಪೂಜೆಗೆ ನಿಂಬೆಹಣ್ಣನ್ನು ಕೊಳ್ಳುವುದು ನಡೆಯುತ್ತವೆ. ಇಂತಹ ವಸ್ತುಗಳನ್ನು ಭಕ್ತರು ಕೊಂಡುಕೊಳ್ಳುವಂತೆ ವ್ಯಾಪಾರಿಗಳು ಕೂಗಿ ಕೂಗಿ ಮಾರುತ್ತಾರೆ. ಮಾರಾಟ ಮಾಡುವ ವ್ಯಾಪಾರಿಗಳು ಗ್ರಾಹಕರನ್ನು ತಮ್ಮತ್ತ ಸೆಳೆಯಲು ಕೂಗುವುದು ವಿಶೇಷವಾಗಿರುತ್ತದೆ. ಚಾಮುಂಡಿ ಬೆಟ್ಟ, ಮಹದೇಶ್ವರ ಬೆಟ್ಟ, ಬಿಳಿಗಿರಿರಂಗನಬೆಟ್ಟ, ಮುಂತಾದ ಗಿರಿಗಳಲ್ಲಿ ಎಳನೀರು, ನಿಂಬೆಹಣ್ಣು, ಮುಂತಾದ ವಸ್ತುಗಳು ಮಾರಾಟವಾಗುವುದನ್ನು ಗಮನಿಸಬಹುದು. ಜನಪದ ಆಚರಣೆಗಳಲ್ಲಿ ವಾಣಿಜ್ಯಕ ವ್ಯವಹಾರಗಳು ಹೇಗೆ ಜರುಗುತ್ತವೆ ಎಂಬುದು ಮೇಲಿನ ಜನಪದ ಗೀತೆಯಲ್ಲಿ ವ್ಯಕ್ತವಾಗುತ್ತದೆ.

'ತಾಯಿ ಬಾರವ್ವ ಸ್ವಪ್ನಕ್ಕೆ' ಎಂಬ ಜನಪದ ಗೀತೆಯಲ್ಲಿ ಹದಿನಾರರ ಹರೆಯದ ಮುಗ್ಧ ಭಕ್ತೆಯೊಬ್ಬಳು ದೇವತೆಯನ್ನು ಕನಸಿನಲ್ಲಿ ಕಾಣುತ್ತಾಳೆ. ದೇವತೆ ಕೆಂಪವ್ವ ಹೂ ಕುಯ್ಯಲು ಹೊರಟಳು. ಇತ್ತ ದೇವಾಲಯದ ಮುಂದೆ ಯಾರೋ ಬಂದು ಕಾದಿದ್ದಾರೆ.

ಅರಗಿನ ಹೊಲದಲಿ ಮರುಗುವ ಕೊಯ್ಯೋಳೆ
ಹರಳ್ಹಾಕಿದೋಲೆ ಕಿವಿಯೋಳೆ ॥ ಕೆಂಪವ್ವ
ಹರಳು ಬಂದಾವೆ ಬೆಲೆಮಾಡೆ ॥

ಉತ್ತರದ ಹೊಲದಲ್ಲಿ ಪತ್ತರೆಯ ಕುಯ್ಯೋಳೆ
ಮುತ್ತಾಕಿದೋಲೆ ಕಿವಿಯೋಳೆ ॥ ಕೆಂಪವ್ವ
ಮುತ್ತು ಬಂದಾವೆ ಬೆಲೆಮಾಡೆ ॥

ಎಂದು ಭಕ್ತೆ ತನ್ನ ದೇವತೆ ಕೆಂಪವ್ವನಿಗೆ ಹೇಳುತ್ತಾಳೆ. ಇಲ್ಲಿ ಮಾರ್ಮಿಕವಾಗಿ ಮುತ್ತು-ರತ್ನದ ವ್ಯಾಪಾರವನ್ನು ಕುರಿತು ಹೇಳುವಂತಹದು ಗೋಚರವಾಗುತ್ತದೆ. ಸ್ತ್ರೀ-ಸಾಮಾನ್ಯವಾಗಿ ಆಭರಣ ಪ್ರಿಯರು ಎಂಬುದನ್ನರಿತ ಮುತ್ತು-ರತ್ನದ ವ್ಯಾಪಾರಿಗಳು ಮನೆಯ ಬಾಗಿಲಿಗಾದರೂ ತಂದು ಮಾರಾಟ ಮಾಡುತ್ತಾರೆ. ಬಾಲ್ಯದಿಂದ ಯೌವ್ವನಕ್ಕೆ ಬರುವ ಯುವತಿಯರು ಸಹಜವಾಗಿ ಮತ್ತೊಬ್ಬರ ರೂಪದಲ್ಲಿ ಬಯಕೆಗಳನ್ನು ಕನಸಿನಲ್ಲಿ ಕಾಣುವುದು ಮನೋಸಹಜ ಕ್ರಿಯೆ. "ಆಯಾ ಸಮಾಜದ ಆಸೆ ಆಕಾಂಕ್ಷೆಗಳು, ನಿರೀಕ್ಷೆಗಳು ಆಯಾ ಸಂಸ್ಕೃತಿಯಲ್ಲಿ ಪ್ರಚಲಿತದಲ್ಲಿರುವ ಜನಪದ ಕಥೆ, ಗೀತೆ ಮತ್ತು ಪುರಾಣಗಳಲ್ಲಿ ತುಂಬಿಕೊಂಡಿರುತ್ತದೆ"[೪] ಎಂದು ಸಿಗ್ಮಂಡ್ ಫ್ರಾಯ್ಡ್ ತನ್ನ ಮನೋವಿಶ್ಲೇಷಣಾತ್ಮಕ ಸಿದ್ಧಾಂತದಲ್ಲಿ ತಿಳಿಸಿದ್ದಾನೆ.

ವ್ಯಾಪಾರಿಯೊಬ್ಬ ಭವಿಷ್ಯತ್ತಿನಲ್ಲಿ ಬಂದೊದಗುವ ಮಾರಾಟದ ಕಲ್ಪನೆಯನ್ನು ನೆನೆಯುತ್ತಿದ್ದಾನೆ.

ಮೂರು ದಿನದ ಸಂತಿ ಮುನ್ನೋಡಿ ಮಾಡಿಕೊ
ಗರದಿ ನಡೆಯುವುದು ಮಧ್ಯಾಹ್ನದ ಮ್ಯಾಲ
ಸಂಜಿಯಾದಂಗ ಒಂದು ಗಂಜಿ ಉಳಿಯಾಕಿಲ್ಲ
ಖಾಲೆ ಮಾರಿ ಆದಾವೊ ಚೀಲ

ಸಂತೆಯ ವ್ಯಾಪಾರಿಯೊಬ್ಬ ಭವಿಷ್ಯತ್ತಿನಲ್ಲಿ ನಡೆಯುವ ಮಾರಾಟದ ಭರಾಟೆಯನ್ನು ಜನಪದ ಕವಿ ಸಂದರ್ಭ ಸಹಿತ ಹೇಳಿದ್ದಾನೆ. ವ್ಯಾಪಾರಕ್ಕೆ ಹೋಗುವ ವ್ಯಾಪಾರಿಗೆ ಪೂರ್ವಯೋಜನೆ ಇರಬೇಕು ಎಂಬುದನ್ನು ಮೂರು ದಿನ ಸಂತೆ ನಡೆಯುವುದು ತಿಳಿಸುತ್ತದೆ. ತಾಳ್ಮೆ ಕಳೆದುಕೊಳ್ಳದೆ ವ್ಯಾಪಾರದ ಸಂದರ್ಭಕ್ಕೆ ಕಾಯಬೇಕು. ಗ್ರಾಹಕರು ಒಂದು ಗೊತ್ತಾದ ಸಂದರ್ಭದಲ್ಲಿ ನಿರ್ದಿಷ್ಟ ಸಮಯಕ್ಕೆ ಸಂತೆಗಳಿಗೆ ಬರುತ್ತಾರೆ. ಇದನ್ನು ತಿಳಿದಿದ್ದ ವ್ಯಾಪಾರಿಯು ಮಧ್ಯಾಹ್ನದ ಮೇಲೆ

ಮಾರಾಟದ ವೈಭವ ಪ್ರಾರಂಭವಾಗಿ ಸಂಜೆಯಾಗುತ್ತಲೆ ಒಂದು ಗಂಜಿಯಂತಹ ವಸ್ತು ಉಳಿಯುವುದಿಲ್ಲ ಎಂಬ ಸೂಕ್ಷ್ಮತೆಯನ್ನು ಚಿತ್ರಿಸಿರುವುದು ಕಾವ್ಯ ಪ್ರತಿಭೆಯ ದ್ಯೋತಕವಾಗಿದೆ. ಗಂಜಿಯ ಹನಿ ಅತ್ಯಂತ ಚಿಕ್ಕ ಪ್ರಮಾಣದೆನ್ನುವುದು ಈ ಜನಪದ ಗೀತೆಯ ತಾತ್ಪರ್ಯ. ಭವಿಷ್ಯತ್ತಿನಲ್ಲಿ ಮಾರಾಟವಾಗುವುದನ್ನು 'ಖಾಲೆ ಮಾಡಿ ಆದಾವೊ ಚೀಲ' ಎಂದು ಸೋದಾಹರಣವಾಗಿ ಹೇಳಿರುವುದು ಜನಪದರ ವಾಣಿಜ್ಯದ ಪರಿಕಲ್ಪನೆಯ ವಿಶೇಷತೆಯನ್ನು ಹೇಳುತ್ತದೆ.

ಜನಪದ ಗೀತೆಗಳಲ್ಲಿ 'ಮದುಮಕ್ಕಳ ಮೇಲಿನ ಪದಗಳು' ವಿನೋದವನ್ನು ಕುರಿತದ್ದು.

ಅಂಗಡಿಯ ಮುಂದೆ ಅಂಗಿ ತೊಡವಲು ನಿಂದ
ಅಂಗ್ಳಿಯ ತೋಳೆ ನೆಲ ಮೇಲೆ – ಎಂದೇಳಿ
ನಿಂತು ಬಾಂದರ ಕಣ್ಣೇ ನಿಮಮೇಲೆ
ಪೇಟೆ ಮುಂದೆ ಪೇಟ ತೊಡವಲು ನಿಂದ
ಪೇಟಾದ ಸೆರಗೇ ನೆಲ ಮೇಲೆ – ಎಂದೇಳಿ
ಹೋಗಿ ಬಾಂದರ ಕಣ್ಣೆ ನಿಮಮೇಲೆ

ಎಂದು ವಿನೋದವನ್ನು ವ್ಯಕ್ತಪಡಿಸುವುದರ ಹಿಂದೆ ಮದುವೆ ಸಂದರ್ಭದಲ್ಲಿ ಅಂಗಡಿ, ಪೇಟೆಗಳಲ್ಲಿ ಕೊಳ್ಳಬೇಕಾದ ಮದುವೆಯ ಅಂಗಿ, ಪೇಟವನ್ನು ಕುರಿತು ಹೇಳುವುದನ್ನು ಮರೆಯುವಂತಿಲ್ಲ. ಸಂತೆಯ ಮುಂದುವರಿದ ಹಂತ 'ಪೇಟೆ'ಗಳು ಎಂಬುದನ್ನು ಇಲ್ಲಿ ಗಮನಿಸಬೇಕಾಗಿದೆ. "ವ್ಯಾಪಾರದ ಹೆಚ್ಚಿನ ಅಭಿವೃದ್ಧಿ ಸುಗಮವಾಗಿ ಸಾಗಲು ಅದಕ್ಕೆ ಪೋಷಕವಾದ ಸಾರಿಗೆ ವ್ಯವಸ್ಥೆ ಹಣಕಾಸಿನ ವ್ಯವಸ್ಥೆ ಸಂಗ್ರಹಣೆಯ ವ್ಯವಸ್ಥೆ ಮುಂತಾದವು ದಿನೇ ದಿನೇ ಅಭಿವೃದ್ಧಿ ಹೊಂದಿದಂತೆ ಪೇಟೆಗಳು ಬೆಳೆದವು."[೫] ಇಂತಹ ಆಧುನಿಕ ಬೆಳವಣಿಗೆಯ ಪೇಟೆಗಳಲ್ಲಿ ವಾಣಿಜ್ಯ ಜನಪದ ಸಾಹಿತ್ಯ ಗೋಚರಿಸುವುದು ಚಾರ್ಲ್ಸ್ ಫ್ರಾನ್ಸಿಸ್ ಪಾಟರ್ ಅವರ 'Folklore is a lively fossil, which refuse to die' ಎಂಬ ಮಾತನ್ನ ನೆನಪಿಸುತ್ತವೆ.

ಜಾನಪದ ಮಾನವನ ಜೀವನದ ಪ್ರತಿಯೊಂದು ಮಗ್ಗಲುಗಳನ್ನು ಕಟ್ಟಿಕೊಡುತ್ತವೆ ಎಂಬುದಕ್ಕೆ ವಾಣಿಜ್ಯಕ್ಕೆ ಸಂಬಂಧಿಸಿದ ಜನಪದ ಗೀತೆಗಳೇ ಸಾಕ್ಷಿಯಾಗಿದೆ. ಜಾನಪದ ಮಾನವನ ಜೀವನವನ್ನೇ ಕುರಿತಾದುದರಿಂದ ಮಾನವನ ಸುತ್ತ ನಡೆಯುವ ವಾಣಿಜ್ಯ ಚಟುವಟಿಕೆಗಳು ಪರಂಪರಾಗತವಾಗಿ ಬಂದ ಜನಪದ ಗೀತೆಗಳಲ್ಲಿ ಅನಾವರಣಗೊಳ್ಳುತ್ತದೆ. ಜಾನಪದ ಕೇವಲ ಸಂಪ್ರದಾಯ, ಆಚರಣೆಗಳಿಗೆ ಸೀಮಿತವಾಗದೆ ವಾಣಿಜ್ಯ ವಿಚಾರಗಳಿಗೂ ತನ್ನ ಕೊಡುಗೆಯನ್ನು ನೀಡಿರುವುದನ್ನು ಅಂತರ್‌ಶಿಸ್ತೀಯ ನೆಲೆಯಲ್ಲಿ ಅಭ್ಯಸಿಸುತ್ತಾ ಹೋದಾಗ ಹೊಸ ಒಳನೋಟಗಳು

ತೆರೆದುಕೊಂಡು ಜಾನಪದವನ್ನು ಮತ್ತಷ್ಟು ಶ್ರೀಮಂತಗೊಳಿಸುತ್ತದೆ. ಜನಪದ ಗೀತೆಗಳಲ್ಲಿ ಮಾನವನ ವಾಣಿಜ್ಯ ಜೀವನದ ಅತ್ಯಂತ ಸೂಕ್ಷ್ಮ ಸ್ತರದ ಪದರಗಳನ್ನು ಕಾಣಬಹುದು.

ಕೊನೆಟಿಪ್ಪಣಿಗಳು

೧. ರಾಮಣ್ಣ ಕ್ಯಾತನಹಳ್ಳಿ (ಸಂ.) ಜೀಶಂಪ ಜಾನಪದ, ಎಂ.ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ, ಕರ್ನಾಟಕ ಸಂಘ (ರಿ.) ಮಂಡ್ಯ, ಮುದ್ರಣ, ೨೦೦೭, ಪು. ೧೭೪.

೨. ರಾಗೌ : ಜನಪದ ಸಾಹಿತ್ಯ ರೂಪಗಳು, ತನುಮನ ಪ್ರಕಾಶನ, ಕಾವ್ಯಲೋಕ, ಶ್ರೀರಾಂಪುರ ಬಡಾವಣೆ, ಮೈಸೂರು, ಮುದ್ರಣ–೨೦೧೫, ಪು.ಸಂ. ೫.

೩. ಅರವಿಂದ ಮಾಲಗತ್ತಿ (ಪ್ರ.ಸಂ). : ಕನ್ನಡ ವಿಷಯ ವಿಶ್ವಕೋಶ, ಜಾನಪದ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮುದ್ರಣ–೨೦೦೬, ಪು.ಸಂ. ೧೧೨೫.

೪. ಅದೇ; ಪುಟ ಸಂಖ್ಯೆ ೯೩೮.

೫. ಚಿನ್ನಸ್ವಾಮಿ ಸೋಸಲೆ.ಎನ್. ನಮ್ಮ ಗ್ರಾಮಗಳು ಅಂದು ಇಂದು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಮುದ್ರಣ–೨೦೦೪, ಪುಟ ಸಂಖ್ಯೆ–೧೧೫.

ಪರಾಮರ್ಶನ ಗ್ರಂಥಗಳು

೧. ಅರವಿಂದ ಮಾಲಗತ್ತಿ (ಪ್ರ.ಸಂ.): ಕನ್ನಡ ವಿಷಯ ವಿಶ್ವಕೋಶ, ಜಾನಪದ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಮುದ್ರಣ–೨೦೦೬.

೨. ಪರಮಶಿವಯ್ಯ ಜೀ.ಶಂ.: ಜನಪದ ಸಾಹಿತ್ಯ ಸಮೀಕ್ಷೆ, ಮೋಹನ ಪ್ರಕಾಶನ, ಕೃಷ್ಣಮೂರ್ತಿಪುರಂ, ಮೈಸೂರು, ಮುದ್ರಣ–೧೯೬೭.

೩. ಪ್ರಭಾ.ಎನ್. (ಸಂ.): ಜನಪದ ಗೀತೆಗಳು, ಅಂಕಿತ ಪುಸ್ತಕ ಪ್ರಕಾಶನ, ಬಸವನಗುಡಿ, ಬೆಂಗಳೂರು, ಮುದ್ರಣ–೨೦೧೧.

೪. ವೀರಣ್ಣದಂಡೆ (ಸಂ.); ಸುವರ್ಣ ಜಾನಪದ ಲೇಖನಗಳು, ಸುವರ್ಣ ಸಾಹಿತ್ಯ ಗ್ರಂಥಮಾಲೆ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು, ಮುದ್ರಣ–೨೦೦೬.

೫. ಶಂಕರನಾರಾಯಣ ತೀ.ನಂ: ಜನಪದ ಸಾಹಿತ್ಯ ಪ್ರಕಾರಗಳು, ಕರ್ನಾಟಕ ಕಾವ್ಯಮಾಲೆ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಬೆಂಗಳೂರು.

೬. ಶಿವರಾಮ ಐತಾಳಕೆ : ದಕ್ಷಿಣ ಕನ್ನಡ ಜನಪದ ಸಾಹಿತ್ಯ, ಕವಿ ಕನ್ನಡ ಕಾವ್ಯಮಾಲೆ, ಪ್ರಕಾಶಕರು– ಎಚ್.ಎಂ. ಶಂಕರನಾರಾಯಣರಾವ್, ಮುದ್ರಣ–೧೯೭೧.

೭. ಶ್ರೀಕಂಠ ಕೂಡಿಗೆ ಕೆ. : ಅಂಟಿಗೆ–ಪಂಟಿಗೆ ಪದಗಳು, ಪ್ರಸಾರಾಂಗ, ಮೈಸೂರು, ವಿಶ್ವವಿದ್ಯಾನಿಲಯ, ಮೈಸೂರು, ಮುದ್ರಣ–೨೦೧೧.

□□□

೬. ಹೊಯ್ಸಳ ಒಂದನೇ ನರಸಿಂಹನ ಕಾಲದ ಶಾಸನೋಕ್ತ ಕೆರೆಗಳು

– *ಮುನಿಕೆಂಪೇಗೌಡ ಎಂ.*

ಕನ್ನಡಿಗರ ಔದಾರ್ಯ ಮುಖ್ಯವಾಗಿ ಪ್ರಕಟವಾಗಿರುವುದು ಎರಡು ಕಡೆ – ಒಂದು ದೇವಸ್ಥಾನ ನಿರ್ಮಾಣದಲ್ಲಿ; ಮತ್ತೊಂದು ಕೆರೆಗಳ ನಿರ್ಮಾಣದಲ್ಲಿ. ಈ ರೀತಿ ಕೆರೆಗಳ ನಿರ್ಮಾಣದ ಹಿಂದಿರುವ ನಂಬಿಕೆಗಳು ಕರ್ನಾಟಕದಲ್ಲಿ ಪುರಾತನ ಕಾಲದಿಂದಲೂ ಸಾವಿರಾರು ಕೆರೆಗಳ ನಿರ್ಮಾಣಕ್ಕೆ ಕಾರಣವಾಗಿರುವುದಕ್ಕೆ ಇಂದಿಗೂ ಸಹ ಕರ್ನಾಟಕದಲ್ಲಿ ವಿವಿಧ ಪ್ರದೇಶಗಳಲ್ಲಿರುವ ಕೆರೆಗಳೇ ಸಾಕ್ಷಿಯಾಗಿವೆ. ಈ ರೀತಿಯ ಕೆರೆಗಳನ್ನು ಕಟ್ಟಿಸಿದರೆ ತಮಗೆ ಮಾತ್ರವಲ್ಲ ತಮ್ಮ ತಂದೆತಾಯಿಗಳಿಗೂ ಪುಣ್ಯವು ಲಭಿಸುತ್ತದೆ ಎಂಬ ನಂಬಿಕೆ ಇತ್ತು. ಪ್ರಸ್ತುತ ಪ್ರಬಂಧದಲ್ಲಿ ಹೊಯ್ಸಳ ಒಂದನೇ ನರಸಿಂಹನ ಆಳ್ವಿಕೆಯ ಕಾಲದಲ್ಲಿ ಈತನ ಸಾಮಂತರು, ದಂಡನಾಯಕರು ಮುಂತಾದವರು ನಿರ್ಮಿಸಿದ ಕೆರೆಗಳನ್ನು ಕುರಿತು ವಿಶ್ಲೇಷಿಸಲಾಗಿದೆ. ಕೆರೆಗಳ ರಕ್ಷಣೆ, ಜೀರ್ಣೋದ್ಧಾರ ಹಾಗೂ ನಿರ್ವಹಣೆಗೆ ಸಂಬಂಧಿಸಿದಂತಹ ಶಾಸನೋಕ್ತ ಮಾಹಿತಿಯನ್ನು ಸಹ ಈ ಸಂಪ್ರಬಂಧದಲ್ಲಿ ವಿಶ್ಲೇಷಿಸಲಾಗಿದೆ.

ಹೊಯ್ಸಳ ದೊರೆ ನರಸಿಂಹನ ಸುಮಾರು ೩೦ ವರ್ಷಗಳ ಆಳ್ವಿಕೆಯ ಕಾಲಾವಧಿಯಲ್ಲಿ ಈತನ ಸಾಮ್ರಾಜ್ಯದಲ್ಲಿ ಹಲವಾರು ಕೆರೆಗಳು ನಿರ್ಮಾಣವಾಗಿದ್ದು ಸುಮಾರು ೮೫೦ ವರ್ಷಗಳ ಕಾಲದಿಂದಲೂ ಸಹ ಉಳಿದುಕೊಂಡು ಪ್ರಸ್ತುತದಲ್ಲೂ ಅಸ್ತಿತ್ವದಲ್ಲಿವೆ. ನರಸಿಂಹನ ಆಸ್ಥಾನದ ಪದ್ಮರಸ ಬೇಲೂರಿನಲ್ಲಿ ಕೆರೆಯನ್ನು ಕಟ್ಟಿಸುವುದರ ಮೂಲಕ 'ಕೆರೆಯ ಪದ್ಮರಸ' ಎಂದು ಪ್ರಖ್ಯಾತಿಯನ್ನು ಪಡೆದು ಸಾಹಿತ್ಯಕ ವಲಯದಲ್ಲೂ ಸಹ ಪ್ರಮುಖ ಪಾತ್ರವಹಿಸಿದ್ದನ್ನು ಗಮನಿಸಬಹುದು. ಯಾವ ವ್ಯಕ್ತಿಯು ಕೆರೆಯನ್ನು ನಿರ್ಮಿಸಿದ್ದಾನೆಯೋ ಆತನ ಹೆಸರನ್ನೇ ಕೆರೆಗಳಿಗೂ ಇಡುತ್ತಿದ್ದರೆಂಬುದಕ್ಕೆ ಪೂರಕವಾಗಿ ಹಲವು ಉದಾಹರಣೆಗಳು ದೊರೆಯುತ್ತವೆ. ನೀಗರಿಲಿಶೋಳಮಂಡಲದ ಕೈವರನಾಡಿನ ಕರುಣಾಕರ ಗಾಮುಂಡ ಎಂಬುವನು ಒಂದು ಕೆರೆಯನ್ನು ಕಟ್ಟಿಸಿ ಆ ಕೆರೆಗೆ ಕರುಣಾಕರ ಸಮುದ್ರ ಎಂದು ಹೆಸರಿಟ್ಟನು.

ನಂತರ ಈ ಕೆರೆಯನ್ನು ಕಾಮರ್ಯೆಚೆರುವಿನ ಕರುಮಾಣಿಕಾಳ್ವಾರ್ ಮತ್ತು ದೇವೇಶಭಟ್ಟರಿಗೆ ದಾನ ನೀಡಿದ ಉಲ್ಲೇಖ ಶಾಸನದಲ್ಲಿ ದೊರೆಯುತ್ತದೆ.[೧] ಮತ್ತೊಂದು ಶಾಸನವು ॥ಶ್ರೀಮತ್ಪ್ರತಾಪ ವಿಷ್ಣುವರ್ಧನ ಹೊಯಿಸಣ ಪ್ರತಾಪ ವೀರನಾರಸಿಂಗದೇವರ ರಾಜ್ಯದಂದು ಗಂಗಸೆಟ್ಟಿಯರ ಮಗ ಪಾಪಿಸೆಟ್ಟಿ ಎಂಬುವನು ನಾರಸಿಂಹ ಸ್ವಾಮಿಗಳಿಗೆ ದಾರಾಪೂರ್ವಕವಾಗಿ ಕೊಟ್ಟ ಕೆರೆ॥[೨] ಎಂಬಂತಹ ಮಾಹಿತಿಯನ್ನೊಳಗೊಂಡಿದ್ದು ಇದು ಒಬ್ಬ ವ್ಯಕ್ತಿ ಕೆರೆಯನ್ನು ಕಟ್ಟಿಸಿ ದೇವರಿಗೆ ದಾನವಾಗಿ ನೀಡಿದಂತಹ ವಿಶೇಷವಾದ ಮಾಹಿತಿಯನ್ನು ಈ ಶಾಸನವು ಒಳಗೊಂಡಿದೆ.

ಕೇವಲ ಕೆರೆಗಳ ನಿರ್ಮಾಣ ಹಾಗೂ ದಾನದ ವಿಷಯಗಳನ್ನಷ್ಟೇ ಅಲ್ಲದೆ, ಕೆರೆ ನಿರ್ಮಾಣದ ನಂತರ ಆ ಕೆರೆಯಲ್ಲಿ ಸಂಗ್ರಹವಾದ ನೀರಿನ ಸದುಪಯೋಗ ಯಾವ ರೀತಿಯಲ್ಲಿ ಬಳಕೆಯಾಗಬೇಕು ಹಾಗೂ ಈ ಬಳಕೆಗೆ ಸಂಬಂಧಿಸಿದಂತೆ ವಿಶೇಷವಾದಂತಹ ಮಾಹಿತಿಯನ್ನು ಒಂದು ತಮಿಳು ಶಾಸನದಲ್ಲಿ ಸತ್ಯಾನಂದ ಸ್ವಾಮಿಗಳ ಮಗ ನೀಲಕಂಠದೇವ ಎಂಬುವನು ಆ ಗ್ರಾಮದ ಮಹಾಜನರಿಗೆ ಇಂತಿಷ್ಟು ಗದ್ಯಾಣ, ಎಂದರೆ ಹಣವನ್ನು ಆ ಕೆರೆಯನ್ನು ದುರಸ್ಥಿಗೊಳಿಸಲು ಕೊಟ್ಟನು ಹಾಗೂ ಯಾರಾದರೂ ಆ ಕೆರೆಯ ನೀರನ್ನು ನೀರಾವರಿ ಉದ್ದೇಶಕ್ಕೆ ಬಳಸಿಕೊಳ್ಳಲು ಸರ್ವಮಾನ್ಯವಾಗಿ ನೀಡುವಂತಹ ಮಾಹಿತಿಯನ್ನು ಈ ಶಾಸನವು ದಾಖಲಿಸಿದೆ.[೩]

ಹುಣಸೂರು ತಾಲ್ಲೂಕಿನ ತೊಂಡಾಳು ಎಂಬ ಪ್ರದೇಶದ ಶಾಸನದಲ್ಲಿ ತೊಂಡೆಯಹಾಳು ಎಂಬ ಪ್ರದೇಶದ ತೆನದಂಕರ ಬೋಗೆಯ ಸಾಮಂತನ ಮಗ ಹರದಗಾವುಂಡ ಕಾಳೆಯಸಾವಂತನ ಗವುಡ, ಈತನ ಒಡಹುಟ್ಟಿದ ಸಹೋದರರು ಸೇರಿಕೊಂಡು ತಮ್ಮ ಮುತ್ತಾತನ ಮಕ್ಕಳು ಕಟ್ಟಿಸಿದ ಕೆರೆ ನಿರ್ಮಿಸಿದ ದೇವಾಲಯಕ್ಕೆ ಗದ್ದೆ ಮತ್ತು ಭೂಮಿಯನ್ನು ದಾನವಾಗಿ ಬಿಟ್ಟಂತಹ ಮಾಹಿತಿಯನ್ನು ತಿಳಿಸುತ್ತದೆ.[೪] ಹಿಂದಿನ ಕಾಲದಲ್ಲಿ ಕೆರೆಯ ಯೋಗಕ್ಷೇಮಕ್ಕಾಗಿ ಅಂದರೆ ಕೆರೆಯ ಕಟ್ಟೆ ಒಡೆಯಬಹುದು, ತೂಬುಹಾಳಾಗಬಹುದು ಮರಳಿನಿಂದ, ಹೂಳಿನಿಂದ ಹಾಳಾಗಬಹುದು, ಇಂತಹ ಸಂದರ್ಭದಲ್ಲಿ ಕೆರೆಯ ನಿರ್ವಹಣೆಗಾಗಿ ಹಣದ ಅವಶ್ಯಕತೆ ಇರುವುದರಿಂದ ಅದಕ್ಕಾಗಿ ಜಮೀನನ್ನು ದಾನವಾಗಿ ಬಿಡುತ್ತಿದ್ದರು. ಹಾಗೆ ದಾನವಾಗಿ ಕೊಟ್ಟ ಭೂಮಿಯ ಉತ್ಪನ್ನದಿಂದ ಕೆರೆಯನ್ನು ನಿರ್ವಹಣೆ ಮಾಡುತ್ತಿದ್ದರು. ಈ ರೀತಿಯಾಗಿ ಬಿಡುತ್ತಿದ್ದ ಭೂಮಿಯನ್ನು 'ಬಿತ್ತುವಾಟ' ಅಥವಾ 'ಬಿತ್ತುವಟ್ಟ' ಎಂದು ಶಾಸನಗಳಲ್ಲಿ ಕರೆದಿರುವುದು ಎಂದು ಡಾ. ಚಿದಾನಂದಮೂರ್ತಿಯವರು ಅಭಿಪ್ರಾಯಪಟ್ಟಿದ್ದಾರೆ.[೫]

ಕ್ರಿ.ಶ. ೧೧೫೪ರ ಕಾಲದಲ್ಲಿ ನರಸಿಂಹನ ಪ್ರಧಾನಿಯಾಗಿದ್ದಂತಹ ಬೋಕಿಮಯ್ಯ ಇವನು ಹಿಂದಿನ ವಿಜಯಾದಿತ್ಯಮಂಗಲ ಅಥವಾ ಪ್ರಸ್ತುತ ಕೋಲಾರ ಜಿಲ್ಲೆಯ ಬೇತಮಂಗಲ ಎಂಬ ಪ್ರದೇಶದಲ್ಲಿ ಒಂದು ಕೆರೆಯನ್ನು ಕಟ್ಟಿಸಿದ ಮಾಹಿತಿಯನ್ನು ಈ ಶಾಸನ ಉಲ್ಲೇಖಿಸುತ್ತದೆ. ಇಂದಿಗೂ ಇದನ್ನು ಬೇತಮಂಗಲ ಕೆರೆ ಎಂದು ಕರೆಯಲಾಗುತ್ತದೆ. ಈ ಕೆರೆಯಿಂದ ಕೋಲಾರ ಚಿನ್ನದ ಗಣಿಗೆ ನೀರನ್ನು ಪೂರೈಸುವ ಸಲುವಾಗಿ ಬಳಸಲಾಗುತ್ತಿತ್ತು ಎಂದು ವಿಲಿಯಂ ಕೊಯಿಲೋರವರು ಉಲ್ಲೇಖಿಸಿದ್ದಾರೆ.[೬]

ನರಸಿಂಹನ ಮತ್ತೊಬ್ಬ ಪ್ರಮುಖ ಮಂತ್ರಿಯಾದಂತಹ ಕೆರೆಯಪದ್ಮರಸ, ಈತ ತನ್ನ ಹೆಸರನ್ನು ಕೆರೆಯ ಎಂಬ ವಿಶೇಷಣದಿಂದ ಜನಪ್ರಿಯಗೊಳ್ಳಲು ಕಾರಣ ಈತ ನಿರ್ಮಿಸಿದ ಕೆರೆಯ ಮೂಲಕವಾಗಿದೆ. ಈತ ಬೇಲೂರಿನಲ್ಲಿ ಬಿಟ್ಟಿಸಮುದ್ರ ಎಂಬ ಕೆರೆಯನ್ನು ಸುಮಾರು ೧೨,೦೦೦ ಹೊನ್ನು ರಾಜ ಬೊಕ್ಕಸದಿಂದ ಪಡೆದುಕೊಂಡು ನಿರ್ಮಿಸಿದ ವಿವರ ಶಾಸನ ಮತ್ತು ಸಾಹಿತ್ಯ ಕೃತಿಗಳಲ್ಲಿ ದೊರೆಯುತ್ತದೆ.[೭]

ತುರುವೇಕೆರೆಯ ವಿಠಲದೇವನಹಳ್ಳಿ ಶಾಸನದಲ್ಲಿ ನರಸಿಂಹನ ಮಹಾಪಸಾಯಿತ ಕರ್ಣಾಟ ಕುಳ ತಿಲಕ ಶ್ರೀವೈಷ್ಣವ ಚೂಡಾಮಣಿ ವಿಶ್ವಾಮಿತ್ರ ಗೋತ್ರ ಪವಿತ್ರ ಶ್ರೀಮಹಾಪಸಾಯ್ತ ಸುರಿಗೆಯ ವಿಷ್ಣುಸ್ವಾಮಿ ಎಂಬ ವ್ಯಕ್ತಿಯು ತನ್ನ ಹೆಸರಿನಲ್ಲಿ ಕಟ್ಟಿಸಿದ ವಿಷ್ಣುಸಮುದ್ರ ಎಂಬ ಕೆರೆಯ ಮಾಹಿತಿ ದೊರೆಯುತ್ತದೆ. ಈತ ನರಸಿಂಹನ ಆಸ್ಥಾನದಲ್ಲಿ ಮಹಾಪಸಾಯ್ತನಾಗಿದ್ದು ಶಾಸನದಲ್ಲಿ ॥ಶ್ರೀನರಸಿಂಹ ನೃಪನ ನಚ್ಚಿನ ಸುರಿಗೆಯಯೀ ವಿಷ್ಣುಸ್ವಾಮಿ ದ್ರೋಹರಗಂಡ॥ ಎಂಬ ಮಾಹಿತಿ ಇದೆ. ಇದೇ ಶಾಸನದಲ್ಲಿ ಈ ಕೆರೆಯನ್ನು ಕಟ್ಟಿಸಿದ ನಂತರ ಗೋವಿಂದದೇವ ಮತ್ತು ವಿಷ್ಣುದೇವನಿಗೆ ಕೊಡಿಸಿದ ಭೂಮಿಯ ದಾನದ ಮಾಹಿತಿ ಇದೆ.[೮]

ಕ್ರಿ.ಶ. ೧೨ನೇ ಶತಮಾನದ ಶಾಸನವೊಂದರಲ್ಲಿ ನರಸಿಂಹನ ಮಹಾಪ್ರಧಾನ ಸರ್ವಾಧಿಕಾರಿ ಬಿಟ್ಟಿಮಯ್ಯನ ಕಟ್ಟೆಯಲು ಎಂದರೆ ಅಣೆಕಟ್ಟೆ ಎಂಬ ಅರ್ಥವಿದ್ದು, ಈ ಪ್ರದೇಶದ ಸಮೀಪದಲ್ಲಿರುವ ಮದ್ದೂರ ಎಂಬ ಪ್ರದೇಶದಲ್ಲಿ ವ್ಯಕ್ತಿಯೊಬ್ಬನು ಕೆರೆಯನ್ನು ಕಟ್ಟಿಸಿದ ಎಂಬ ಉಲ್ಲೇಖ ದಾಖಲಾಗಿದೆ.[೯]

ಹೊಯ್ಸಳ ನರಸಿಂಹನ ಕಾಲದಲ್ಲಿ ಪುರುಷರಷ್ಟೇ ಸಮಾನವಾಗಿ ಮಹಿಳೆಯರೂ ಸಹ ಕೆರೆಕಟ್ಟೆಗಳ ನಿರ್ಮಾಣದ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರೆಂಬುದಕ್ಕೆ ನಿದರ್ಶನವಾಗಿ ಹಾಸನ ತಾಲ್ಲೂಕಿನ ಕೋರಮಂಗಲದ ಒಂದು ಶಾಸನದಲ್ಲಿ ॥ಶ್ರೀಮತ್ ಕ್ಷೇತ್ರಪಾಲ ಗೋವಿಂದಯ್ಯ,

ಶ್ರೀಮತ್ ಸರ್ವಾಧಿಕಾರಿ ನಾಗರುದ್ರಮಯ್ಯ, ಸಿತಗರಗಂಡ ಹೆಗ್ಗಡೆಕಾಳಮಯ್ಯ, ಶ್ರೀಮನ್ಮಹಾಪ್ರಧಾನ ಸರ್ವಾಧಿಕಾರಿ ಬೂಚಿರಾಜ ಇಂತೀ ನಾಲ್ವರ ಜನನಿ ಹೆಗ್ಗಡತಿ ಮಾಕಣವ್ವೆ ತಮ್ಮ ಪುತ್ರರ ಧರ್ಮಂಗಳ ಪ್ರತಿಪಾಳಿಸಲು ಮಾಕಸಮುದ್ರವನ್ನು ಕಟ್ಟಿಸಿದಳು॥ ಎಂಬ ಮಾಹಿತಿ ದೊರೆಯುತ್ತದೆ.[೧೦] ಹೆಗ್ಗಡತಿ ಮಾಕಣವ್ವೆ ಎಂಬುವಳು ಕೋರಮಂಗಲ ಎಂಬ ಗ್ರಾಮದಲ್ಲಿ ಕೆರೆಯೊಂದನ್ನು ನಿರ್ಮಿಸಿದ ಅಪರೂಪದ ಮಾಹಿತಿಯನ್ನು ಈ ಶಾಸನವು ನೀಡುತ್ತದೆ.

ಇಲ್ಲಿ ಒಬ್ಬ ಮಹಿಳೆಯು ತಮ್ಮ ಮಕ್ಕಳ ಧಾರ್ಮಿಕ ಕಾರ್ಯಚಟುವಟಿಕೆಗಳನ್ನು ಪೋಷಿಸುವ ಸಲುವಾಗಿ ತನ್ನ ಹೆಸರಿನಲ್ಲಿ ಕೆರೆ ನಿರ್ಮಾಣದಂತಹ ಸಾಮಾಜಿಕ ಕಾರ್ಯವನ್ನು ಆಯ್ದುಕೊಂಡಿರುವುದು ವಿಶೇಷವಾಗಿ ಗಮನಿಸಬಹುದಾದ ಅಂಶವಾಗಿದೆ.

ತುಮಕೂರು ಜಿಲ್ಲೆಯ ಪಂಡಿತರಹಳ್ಳಿಯ ಶಾಸನದಲ್ಲಿ ಶ್ರೀಮತ್ ಪೆರ್ಗ್ಗಡತಿ ಮಾಚಿಯಕ್ಕ ಎಂಬುವಳು ಪದ್ಮಾವತಿಕೆರೆಯೆಂಬ ಕೆರೆಯನ್ನು ಕಟ್ಟಿಸಿಕೊಟ್ಟಳು ಎಂಬ ಮಾಹಿತಿ ಇದ್ದು ಈಕೆ ಪಂಡಿತರಹಳ್ಳಿಯ ಪ್ರದೇಶದ ಹೆಗ್ಗಡೆಯ ಪತ್ನಿಯಾಗಿದ್ದಳು ಎಂಬುದಕ್ಕೆ ಈಕೆಯನ್ನು ಶಾಸನದಲ್ಲಿ ಪೆರ್ಗ್ಗಡತಿ ಎಂದು ಉಲ್ಲೇಖಿಸಲಾಗಿದೆ. ಜೊತೆಗೆ ಈ ಕೆರೆಯನ್ನು ಜೈನ ಬಸದಿಯ ಉಪಯೋಗಕ್ಕಾಗಿ ದಾನವಾಗಿ ಕೊಟ್ಟಳು ಎಂಬ ಮಾಹಿತಿಯೂ ಸಹ ದೊರೆಯುತ್ತದೆ.[೧೧] ಹೀಗೆ ನರಸಿಂಹನ ಆಳ್ವಿಕೆಯ ಅವಧಿಯಲ್ಲಿ ಇಬ್ಬರು ಮಹಿಳೆಯರು ವಿವಿಧ ಸಂದರ್ಭಗಳಲ್ಲಿ ಕೆರೆ ನಿರ್ಮಿಸಿದ ಮಾಹಿತಿ ದೊರೆಯುತ್ತದೆ.

ನರಸಿಂಹನ ತತ್ಪಾದಪದ್ಮೋಪಜೀವಿಯಾದಂತಹ ಸಾಮಂತ ಬಿಟ್ಟಿಬೋವ ಎಂಬುವನು 'ಬೇಲೂರಿನಲ್ಲಿ ಬಿಟ್ಟೇಶ್ವರ ಎಂಬ ದೇವಾಲಯವನ್ನು ಮಾಡಿಸಿ ॥ನಾರಸಿಂಹ ದೇವರಿಗೆ ಪಾದಪೂಜೆಯಂ ಕೊಟ್ಟು, ಈತ ಹೊಯ್ಸಳ ಸಮುದ್ರ ಎಂಬ ಕೆರೆಯ ಬಡಗಣ ಕೋಡಿಯಲು ಬಿಟ್ಟಿಬೋವಂ ಕಲ್ಲತುಂಬಂ ಲೇಸಾಗಿ ಗೆಯ್ಸಿ ಕೆಱೆಯ ಹಳೆವೊಡವುಗಳಂ ಹೂಳಿಸಲು ಸಾವಿರ ಹೊನ್ನಂ ಕೊಟ್ಟು ಗೊರಿಸಿದ ಮೊದಲೇರಿ ಮರ್ಯಾದೆ॥[೧೨]ಎಂದು ಉಲ್ಲೇಖಿತವಾಗಿರುವುದರಿಂದ ನರಸಿಂಹನ ಸಾಮಂತನಾದ ಬಿಟ್ಟಿಬೋವನು, ಹೊಯ್ಸಳ ಸಮುದ್ರ ಎಂಬ ಕೆರೆಯ ತೂಬನ್ನು ಕಲ್ಲಿನಿಂದ ಮಾಡಿಸಿ ಹಾಗೂ ಈ ಕೆರೆಗೆ ಸಾವಿರ ಹೊನ್ನುಗಳನ್ನು ಕೊಟ್ಟು ಕೆರೆಗೆ ಏರಿ (ಕಟ್ಟೆಯನ್ನು) ನಿರ್ಮಿಸಿರುವಂತಹ ಮಾಹಿತಿಯು ಲಭ್ಯವಾಗುತ್ತದೆ.

ಕ್ರಿ.ಶ. ೧೧೪೨ರ ಒಂದು ಶಾಸನದಲ್ಲಿ ಅಳ್ಳಿಭಟ್ಟ ಎಂಬುವವನು ದೇವಾಲಯದ ಪೂರ್ವ ದಿಕ್ಕಿನಲ್ಲಿ ಕೆರೆಗ ತೂಬನ್ನು ನಿರ್ಮಿಸಿದನೆಂದು ಪ್ರಸ್ತಾಪವಿದೆ. ಹಾಸನ ತಾಲ್ಲೂಕಿನ ಹೆರಗು ಎಂಬ ಪ್ರದೇಶದ ಊರೊಡೆಯ ಹಿಟ್ಟಮಯ್ಯ ಕೆರೆಗೆ ತೂಬನ್ನು ಇರಿಸಿದನೆಂದು ಶಾಸನದಲ್ಲಿ ಉಲ್ಲೇಖ ದೊರೆಯುತ್ತದೆ.[೧೩]

ಹಾಸನ ತಾಲ್ಲೂಕಿನ ಮುಗಳೂರಿನ ಶಾಸನದಲ್ಲಿ ಈ ಮುಗಳಿಯ ಅಗ್ರಹಾರದ ಜಿನಾಲಯಕ್ಕೆ ಹೊಯ್ಸಳ ನರಸಿಂಹದೇವ ಭೂದಾನಗಳನ್ನು, ವ್ಯಕ್ತಿಯೊಬ್ಬ ಕೆರೆ ಕಟ್ಟಿಸಿದನೆಂಬ ಮಾಹಿತಿಯ ಜೊತೆಗೆ ಈ ಒಂದೇ ಶಾಸನದಲ್ಲಿ ಹಲವಾರು ಕೆರೆಗಳ ನಿರ್ಮಾಣದ ಮಾಹಿತಿಯು ಸಿಗುತ್ತದೆ. ಅವುಗಳಲ್ಲಿ ಮಸೆಟ್ಟಿಯಕೆರೆ. ಇದು ಇದೇ ಶಾಸನದಲ್ಲಿ ಉಕ್ತನಾಗಿರುವ ಮಸೆಟ್ಟಿಯ ಹೆಗ್ಗಡೆ ಎಂಬ ವ್ಯಕ್ತಿಯಿಂದ ನಿರ್ಮಿತವಾಗಿರಬಹುದಾದ ಕೆರೆಯೆಂದು ಊಹಿಸಬಹುದು. ಅದೇ ರೀತಿ ದೇವಿಗೆರೆ, ನಾಚಿಭಟ್ಟರಕೆರೆ ಎಂಬ ಕೆರೆಗಳ ಉಲ್ಲೇಖವಿದೆ.[೧೪]

ಶಾಸನಗಳಲ್ಲಿ ಸಮಗ್ರವಾದ ಪ್ರಾದೇಶಿಕ ನೀರಾವರಿಯ ಚೌಕಟ್ಟಿನ ವಿಸ್ತೀರ್ಣದ ಮಾಹಿತಿಯಲ್ಲಿ ಸವಣೇರು ಎಂಬ ಪ್ರದೇಶದ ಹಿನ್ನೆಲೆಯಲ್ಲಿ ಕರಡಿಯಕೆರೆ, ಇದರ ದಕ್ಷಿಣಕ್ಕೆ ಬಿಂಬಿಸೆಟ್ಟಿಯ ಕೆರೆಯ ಕೋಡಿಯ ಕೀಳ್ಬಯಲು, ಇದರ ದಕ್ಷಿಣಕ್ಕೆ ಬಳಹಾರ ಕೆರೆಯ ಅಚ್ಚುಗಟ್ಟು, ಸವಣೇರೆಡೆಯ ಎರೆಯದಿಣೆಯ ಹುಣಿಸೆಯ ಕೊಳ, ಬಳ್ಳೆಯ ಕೆರೆಯ ತೆಂಕಣ ಕೋಡಿಯ ಬಳರಿಯ ಬನ, ಸವಣೇರಿಂಗೆ ಸಾಗರಮರ್ಯ್ಯಾದೆ ಜನ್ನವೂರ ಸವಣೇರ ಕೆರೆಯೇರಿಯ ನಡುವಣ ಹಿರಿಯ ಹುಣಿಸೆಸೀಮೆ, ಈ ಪ್ರದೇಶದ ಉತ್ತರದ ಕಡೆಗೆ ಬೀರಜ್ಜನ ಕೆರೆ ಆ ಕೆರೆಯೊಳಗೆ ಸವಣೇರ ಬೆಡುಗನ ಹಳ್ಳಿಯ ನಡುವೆ ಬಸುರಿಯದೊಣೆ, ಅಲ್ಲಿಂದ ಪೂರ್ವಕ್ಕೆ ಮೂಡಲಾಲಜ್ಜನ ಕುಮ್ಮರಿ॥[೧೫] ಈ ರೀತಿಯ ಹಲವಾರು ಕೆರೆಗಳ ಹೆಸರುಗಳ ಉಲ್ಲೇಖವು ಈ ಶಾಸನದಲ್ಲಿ ದೊರೆಯುತ್ತದೆ. ಈ ಶಾಸನದಲ್ಲಿ ಉಲ್ಲೇಖವಾಗಿರುವಂತಹ ಸವಣೇರು ಎಂಬ ಪ್ರದೇಶ ಶ್ರವಣಬೆಳಗೊಳದ ಸಮೀಪದ ಪ್ರದೇಶವಾಗಿದ್ದು ಅರಸ ನರಸಿಂಹನು ತನ್ನ ದಂಡಾಧಿಕಾರಿಯಾದ ಹುಳ್ಳಮಯ್ಯನಿಗೆ ಈ ಪ್ರದೇಶವನ್ನು ದಾನವಾಗಿ ನೀಡಿದ ವಿವರಗಳು ದೊರೆಯುತ್ತವೆ. ಪ್ರಮುಖವಾಗಿ ಸವಣೇರು ಎಂಬ ಪ್ರದೇಶವು ಯಥೇಚ್ಛವಾದ ಕೆರೆಗಳು, ಹಳ್ಳ ಕೊಳ್ಳಗಳಿಂದ ನೀರಾವರಿಯಲ್ಲಿ ಸಂಪದ್ಭರಿತವಾದಂತಹ ಪ್ರದೇಶವಾಗಿತ್ತೆಂದು ಈ ಶಾಸನದಿಂದ ಸ್ಪಷ್ಟವಾಗುತ್ತದೆ.

ಹಾಗೆಯೇ ಬೇಲೂರಿನ ಈ ಶಾಸನದಲ್ಲಿ ನರಸಿಂಹನ ಸಾಮಂತನಾದ ಚಟ್ಟಯ್ಯ ಎಂಬುವವನು ಈತ ನಾರಸಿಂಹನ ಅರಮನೆಯಲ್ಲಿ ಪಲರಂ ರಕ್ಷಿಸಿ ಮತ್ತು ಹಲವು ನಡೆದೇಗುಲಗಳನ್ನು ಮಾಡಿಸಿ ಪ್ರಖ್ಯಾತಿಯನ್ನು ಪಡೆದಿದ್ದನು. ಈತನು ॥ತೊಱೆಯಾಗಿ ಹೋಗೆ ಕೃಪೆಯಿಂ ಕೆರೆಯಾಗಿರ್ಪಂತು ಪಲರುಮಂ ಕಟ್ಟಿದ ಕೆಱೆಗಳೊಳಿದೊಂದು ಕೆರೆಯನೆ ಕೆಱೆಯಂ ಕಿಱುಗೂಸು ಚಟ್ಟೆಯಂ ಕಟ್ಟಿಸಿದಂ॥ ಕಂನೆಗೆಱೆಯಂ ಚಟ್ಟಂ ಧನಂಗೊಟ್ಟುಕಟ್ಟಿಸಿದ॥[೧೬] ಎಂಬುದರ ಮೂಲಕ ಈತ ನಿರ್ಮಿಸಿದ ಕಂನೆರಗೆಱೆ ಎಂದರೆ ಹೊಸದಾದ ಕೆರೆಯೆಂಬ ಮಾಹಿತಿಯು ಶಾಸನದಲ್ಲಿ

ಲಭ್ಯವಾಗುತ್ತದೆ. ಈಗೆ ನರಸಿಂಹನ ಆಸ್ಥಾನದ ಪ್ರತಿಷ್ಠಿತ ವ್ಯಕ್ತಿಗಳೂ ಸಹ ಜನಪರ ಕೆಲಸ ಕಾರ್ಯಗಳಲ್ಲಿ ತೊಡಗಿರುವಂತಹ ಅಂಶ ಈ ಶಾಸನದಿಂದ ತಿಳಿದುಬರುತ್ತದೆ. ಹಾಸನ ತಾಲ್ಲೂಕಿನ ಗೌಡಗೆರೆ ಗ್ರಾಮದ ಶಾಸನದಲ್ಲಿ ಕ್ರಿ.ಶ. ೧೧೭೦ರಲ್ಲಿ ಸಾವಾಸಿ ಸೋಮಯ್ಯಂ ಎಂಬ ವ್ಯಕ್ತಿಯು ಹಾಲುತೊರೆ ಎಂಬ ಪ್ರದೇಶದ ಮುದುಕಗೌಡ, ಬಮ್ಮಗೌಡ, ಮಲ್ಲಗೌಡ, ಮುದ್ದಗೌಡ, ರಾಜಗೌಡ, ಮಸಣಗೌಡ ಮುಂತಾದ ಸ್ಥಳೀಯ ಮುಖ್ಯಸ್ಥರುಗಳ ಕೈಯಲ್ಲಿ ಭೂಮಿಯನ್ನು ಕ್ರಯವಾಗಿ ಅಂದರೆ ಕೆರೆಯ ನಿರ್ಮಾಣಕ್ಕಾಗಿ ಹಣಕೊಟ್ಟು ಖರೀದಿಸಿದರು. ನಂತರ 'ಪಿಂನವನೆ' ಎಂಬ ಕೆರೆಯನ್ನು ಕಟ್ಟಿಸಿದರು ಎಂಬಂತಹ ಮಾಹಿತಿ ಇದ್ದು ಈ ಕೆರೆಯನ್ನು ಹಾಗೂ ಕೆರೆಯ ಕೆಳಗಿನ ಗದ್ದೆಯನ್ನು ಹಾಗೂ ಕಾಲುವೆಯನ್ನು ಕಟ್ಟಿಸಿ ಕೊಡುತ್ತಾರೆ. ಹೀಗೆ ಸ್ಥಳೀಯ ಮುಖ್ಯಸ್ಥರುಗಳೂ ಸಹ ಕೆರೆ ನಿರ್ಮಾಣದಂತಹ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದರೆಂಬ ಮಾಹಿತಿಯು ಲಭ್ಯವಾಗುತ್ತದೆ.[೧೨]

ತಮ್ಮ ಕುಟುಂಬದ ಸದಸ್ಯರು ಮೃತಪಟ್ಟಂತಹ ಸಂದರ್ಭದಲ್ಲಿ ಅವರ ಹೆಸರು ಬಹುಕಾಲ ಉಳಿಯಲಿ ಎಂಬ ಉದ್ದೇಶದಿಂದ ಅವರ ಹೆಸರಿನಲ್ಲಿ ದೇವಾಲಯವನ್ನೂ ಕೆರೆಯನ್ನೂ ಕಟ್ಟಿಸುವಂತಹ ಒಂದು ಸಂಪ್ರದಾಯ ಪ್ರಾಚೀನ ಕರ್ನಾಟಕದಲ್ಲಿ ಅಸ್ತಿತ್ವದಲ್ಲಿತ್ತು ಎಂಬುದಕ್ಕೆ ನಿದರ್ಶನವಾಗಿ ಕಡೂರು ತಾಲ್ಲೂಕಿನ ಮುಗಳಿಕಟ್ಟಿಯ ಕ್ರಿ.ಶ. ೧೧೫೩ ಡಿಸೆಂಬರ್ ೨೫ ರ ನರಸಿಂಹನಕಾಲದ ಶಾಸನದಲ್ಲಿ ಮುಗುಣಿಯಕಟ್ಟದ ದಾಸಗೌಡ ಎಂಬ ಸ್ಥಳೀಯ ಅಧಿಕಾರಿಯ ಸುಪುತ್ರಕುಲದೀಪಕರುಗಳಾದ ಚಂದಗಾವುಡ, ದೇಮಗವುಂಡ, ಮಲ್ಲಗವುಂಡನು ಇವರುಗಳು ತಮ್ಮ ತಂದೆ ದಾಸಗಾವುಂಡನಿಗೆ ಪರೋಕ್ಷವಿನಯವಾಗಿ ಕೆರೆಯನ್ನು ಕಟ್ಟಿಸಿದರು[೧೮] ಎಂಬ ಮಾಹಿತಿ ಇದ್ದು, ಇಲ್ಲಿ ಪರೋಕ್ಷವಿನಯ ಎಂಬುದರಿಂದ ಈ ದಾಸಗೌಡನ ಮರಣಾನಂತರ ಆತನ ಹೆಸರು ಅಜರಾಮರವಾಗಿ ಉಳಿಯಲು ಕೆರೆ ನಿರ್ಮಾಣದಂತಹ ಸಾಮಾಜಿಕ ಕಾರ್ಯವನ್ನು ಕೈಗೊಂಡರೆಂದು ಉಲ್ಲೇಖಿಸಲಾಗಿದೆ. ಇದೇ ಹಿನ್ನೆಲೆಯಲ್ಲಿ ಪರೋಕ್ಷ ವಿನಯವಾಗಿ ಕೆರೆಯನ್ನು ಕಟ್ಟಿಸಿದಂತಹ ಮಾಹಿತಿಗೆ ಪೂರಕವಾಗಿ ತುಮಕೂರಿನ ಕೈದಾಳದಲ್ಲಿ ದೊರೆತಿರುವ ಕ್ರಿ.ಶ. ೧೧೫೧ ಮಾರ್ಚ್ ೨೦ ರ ಶಾಸನದಲ್ಲಿ ನರಸಿಂಹನ ಸಾಮಂತ ಗೂಳಿಯ ಬಾಚಿದೇವನು ತನ್ನ ಹೆಂಡತಿ ಭೀಮಲೆ ಎಂಬುವಳ ಹೆಸರಿನಲ್ಲಿ ಪರೋಕ್ಷವಿನಯವಾಗಿ ಭೀಮಸಮುದ್ರ ಎಂಬ ಕೆರೆಯನ್ನು ನಿರ್ಮಿಸುತ್ತಾನೆ. ಇದೇ ಶಾಸನದಲ್ಲಿ ಸಮ್ಯಕ್ತ ಚೂಡಾಮಣಿ ಎನಿಸಿದ ಸೇನಬೋವ ಮಾರಮಯ್ಯ, ಸಾಮಂತ ಗೂಳಿ ಬಾಚಿಮಯ್ಯನ ಕೈಯಿಂದ ಭೂಮಿಯನ್ನು ಪಡೆದು ಮುದುಗೆರೆಯ ಬಾಗಿನಲ್ಲಿ ಮಾರಸಮುದ್ರವೆಂಬ ಕನ್ನೆಗೆರೆಯನ್ನು ಕಟ್ಟಿಸಿದ ಈ ಕೆರೆಯನ್ನು ಭೀಮ ಜಿನಾಲಯದ

ಚನ್ನಪಾರ್ಶ್ವದೇವರಿಗೆ ದಾನವಾಗಿ ಕೊಟ್ಟನು ಎಂಬ ಮಾಹಿತಿ ಇದ್ದು ಗೂಳಿಬಾಚಿಯ ಕೈಕೆಳಗಿನ ಅಧಿಕಾರಿಯೂ ಸಹ ಕೆರೆಯನ್ನು ನಿರ್ಮಿಸಿದ ಮಾಹಿತಿ ಗಮನಾರ್ಹ.[೧೯]

ಒಟ್ಟಾರೆ ಹೊಯ್ಸಳ ಚಕ್ರವರ್ತಿ ನರಸಿಂಹನ ಆಡಳಿತದ ಕಾಲಾವಧಿಯಲ್ಲಿ ಈತನ ದಂಡನಾಯಕರು, ಸಾಮಂತರು, ಸ್ಥಳೀಯ ಗಾವುಂಡರು, ವ್ಯಾಪಾರಿಗಳು, ಜನಸಾಮಾನ್ಯರು ಸಕ್ರಿಯವಾಗಿ ಕೆರೆ ಕಟ್ಟೆ ನಿರ್ಮಾಣದಂತಹ ಜನೋಪಯೋಗಿ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಬಂದಿರುವುದು ಈ ಕೆರೆಗಳ ನಿರ್ಮಾಣದ ಜೊತೆಗೆ ತೂಬುಗಳನ್ನಿಕ್ಕಿಸುವುದು, ಕೆರೆಕೋಡಿಗಳ ನಿರ್ಮಾಣ ಈ ರೀತಿಯ ತೂಬುಗಳ ನಿರ್ಮಾಣ ಹಾಗೂ ನಿರ್ವಹಣೆಯಲ್ಲಿ ಪ್ರಮುಖ ಪಾತ್ರವಹಿಸುವುದರ ಮೂಲಕ ನರಸಿಂಹನ ಆಡಳಿತಾವಧಿಯಲ್ಲಿ ಕೆರೆಗಳ ನಿರ್ಮಾಣಕಾರ್ಯವು ಹೆಚ್ಚು ಪ್ರೋತ್ಸಾಹದಾಯಕವಾಗಿತ್ತೆಂದು ಗುರುತಿಸಬಹುದು.

ಕೊನೆಟಿಪ್ಪಣಿಗಳು

೧. ಸಂ. ಬಿ.ಎಲ್. ರೈಸ್ ಎ.ಕ IX, ಹೊಸಕೋಟೆ ೪೦, ಪುಟ. ೯೨.
೨. ಸಂ. ಬಿ.ಎಲ್. ರೈಸ್ ಎ.ಕ IX, ಮಾಗಡಿ, ಸಿರಗನಹಳ್ಳಿ ೭೬, ಪು. ೩೦.
೩. ಸಂ. ಬಿ.ಎಲ್. ರೈಸ್ ಎ.ಕ IX, ಶಾ.ಸಂ. ೯೭, ಪು. ೨೦೪.
೪. ಸಂ. ಬಾ.ರಾ. ಗೋಪಾಲ, ಎ.ಕ IV, ಹುಣಸೂರು, ತೊಂಡಾಳು-೯, ಪು. ೪೮೭.
೫. ಡಾ. ಎಂ. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ ೫೦೪.
೬. William Coelho: The Hoysala Vamsha, p.125.
೭. ಅದೇ.
೮. ಸಂ. ಹೆಚ್.ಎಸ್. ಗೋಪಾಲರಾವ್, ಎ.ಕ. ೨೫, ತುರುವೇಕೆರೆ, ವಿಠಲದೇವನಹಳ್ಳಿ ೬೫.
೯. ಸಂ. ಬಾ.ರಾ. ಗೋಪಾಲ, ಎ.ಕ. ೪, ಮದ್ದೂರು, ಯಳಂದೂರು ೬೦, ಪು. ೩೦೪.
೧೦. ಸಂ. ಬಾ.ರಾ. ಗೊಪಾಲ ಎ.ಕ. ೮, ಹಾಸನ, ಕೋರಮಂಗಲ, ೧೩೨, ಪು. ೩೫೨.
೧೧. ಸಂ. ಶ್ರೀನಿವಾಸ ರಿತ್ತಿ, ಎ.ಕ. ೨೪, ತುಮಕೂರು, ಪಂಡಿತರಹಳ್ಳಿ ೬೧, ಪು. ೧೨೫.
೧೨. ಸಂ. ಬಾ.ರಾ. ಗೋಪಾಲ, ಸೀತಾರಾಮು ಜಾಗೀರದಾರ್, ಎ.ಕ. ೯, ಬೇಲೂರು ೧೩೬, ಪು. ೯೦.
೧೩. ಸಂ. ಬಾ.ರಾ. ಗೋಪಾಲ, ಎ.ಕ. ೮, ಹಾಸನ ಹೆರಗು ೧೫೨, ಪು. ೩೮೨.
೧೪. ಸಂ. ಬಾ.ರಾ. ಗೋಪಾಲ, ಎ.ಕ. ೮, ಹಾಸನ, ಮುಗಳೂರು ೧೪, ಪು. ೨೪೮.
೧೫. ಸಂ. ಆರ್. ನರಸಿಂಹಾಚಾರ್ ಎ.ಕ. ೨, ಶ್ರವಣಬೆಳಗೊಳ ೪೭೬, ಪು. ೨೮೯.
೧೬. ಸಂ. ಬಾ.ರಾ. ಗೋಪಾಲ, ಸೀತಾರಾಮ ಜಾಗೀರ್‌ದಾರ್, ಎ.ಕ.೯, ಬೇಲೂರು, ಹುಲಿಕೆರೆ ೪೧೦, ಪು. ೩೭೭.
೧೭. ಸಂ. ಬಾ.ರಾ. ಗೋಪಾಲ, ಎ.ಕ. ೮, ಹಾಸನ, ಗೌಡಗೆರೆ ೨೧, ಪು. ೨೫೫.
೧೮. ಸಂ. ಎ.ವಿ. ನರಸಿಂಹಮೂರ್ತಿ, ಹೆಚ್.ಎಂ. ನಾಗರಾಜರಾವ್, ಎ.ಕ. ೧೨, ಕಡೂರು, ಮುಗಳಿ ಕಟ್ಟೆ ೧೮೬, ಪು. ೨೦೮.
೧೯. ಸಂ. ಶ್ರೀನಿವಾಸ ರಿತ್ತಿ, ಎ.ಕ. ೨೪, ತುಮಕೂರು ಕೈದಾಳ ೧೧, ಪು. ೭.

೭. ಪ್ರಸಾರಾಂಗದ ಪ್ರಚಾರೋಪನ್ಯಾಸಮಾಲೆ ಮತ್ತು ಪ್ರಸ್ತುತತೆ

– ಲೋಕೇಶ ಆರ್.

ಕನ್ನಡ ನಾಡಿನ ಪ್ರಥಮ ವಿಶ್ವವಿದ್ಯಾನಿಲಯವಾಗಿ ಅಡಿಯಿಟ್ಟು ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡು ಅನೇಕ ಪ್ರಥಮಗಳಿಗೆ ಮುನ್ನುಡಿ ಬರೆದ ಹಿರಿಮೆ ಮೈಸೂರು ವಿಶ್ವವಿದ್ಯಾನಿಲಯದ್ದು. ಅಂತಹ ಪ್ರಥಮಗಳಲ್ಲಿ ಪ್ರಸಾರಾಂಗದ ಪ್ರಚಾರೋಪನ್ಯಾಸಗಳು ಸಮಕಾಲೀನ ಚಿಂತನೆಯೊಂದಿಗೆ ಮೂಡಿಬಂದದ್ದು ಹೆಮ್ಮೆಯ ಸಂಗತಿ. ಯಾವುದೇ ಒಂದು ವಿಶ್ವವಿದ್ಯಾನಿಲಯದ ಕಾರ್ಯ ಸಮಾಜಮುಖಿಯಾಗಿ ಸಮಕಾಲೀನ ಸಮಾಜದೊಂದಿಗೆ ಬೆರೆತಾಗ ಅದು ನೀಡುವ ಜ್ಞಾನದಾಸೋಹಕ್ಕೆ ಮೌಲ್ಯ ಹೆಚ್ಚುತ್ತದೆ. ನಾಲ್ಕು ಗೋಡೆಗಳ ಮಧ್ಯೆ ವಿದ್ಯೆ ಕಲಿಸುವ ಸಂಸ್ಥೆಯಾದಲ್ಲಿ ಕೆಲವೇ ಮಂದಿಗೆ ಶಿಕ್ಷಣ ನೀಡುವ ಸಂಸ್ಥೆಯಾಗುತ್ತದೆ. ಜೊತೆಯಲ್ಲಿ ಉನ್ನತ ಶಿಕ್ಷಣವಿಯ್ಯುವ ಶಕ್ತಿಯಾಗಿ ತನ್ನ ಸುತ್ತಮುತ್ತಲಿನ ಸಮಾಜದ ಜನತೆಯನ್ನು ಜ್ಞಾನದ ತೆಕ್ಕೆಗೆ ಕರೆದು ಜ್ಞಾನಪ್ರಸಾರ ಮಾಡಿದಾಗ ಅದಕ್ಕೆ ಸಾರ್ಥಕತೆ ಬರುತ್ತದೆ. ಅದನ್ನು ಪ್ರಸಾರಾಂಗದ ಪ್ರಚಾರೋಪನ್ಯಾಸಮಾಲೆ ಸಾದರಪಡಿಸುತ್ತವೆ.

ಮೈಸೂರು ವಿಶ್ವವಿದ್ಯಾನಿಲಯ ಮತ್ತು ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ನಾಡು ನುಡಿಯ ಬೆಳವಣಿಗೆಯೊಂದಿಗೆ ಜ್ಞಾನ ಪ್ರಸಾರಮಾಡಲು ಹಿಂದೆಂದೂ ಕಾಣದ ಕಾರ್ಯಕ್ರಮಗಳನ್ನು ಹಾಕಿಕೊಂಡು ಶ್ರಮಿಸತೊಡಗಿ, ಅದರಿಂದಾಗಿ ನಿತ್ಯಪರಿವರ್ತನಾ ಶೀಲ ಜಗತ್ತಿನಲ್ಲಿ ಮಾನವನ ಜ್ಞಾನವನ್ನು ವಿಕಾಸಗೊಳಿಸುತ್ತಾ ಉತ್ತಮ ಜ್ಞಾನ ಸಂಪತ್ತನ್ನು ಉಪನ್ಯಾಸ ಮತ್ತು ಅರ್ಥಪೂರ್ಣ ಗ್ರಂಥ ಪ್ರಕಟಣೆಗಳ ಮೂಲಕ ಒದಗಿಸುವ ಗುರುತರವಾದ ಜವಾಬ್ದಾರಿ ಪ್ರಸಾರಾಂಗದ್ದಾಗಿದೆ. ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ವಿಶ್ವವಿದ್ಯಾನಿಲಯದ ಮೊದಲ ಸೆನೆಟ್ ಸಭೆಯನ್ನು ಉದ್ಘಾಟಿಸಿ ಮಾತನಾಡುತ್ತಾ "ಕಾರಣಾಂತರಗಳಿಂದ ವಿಶ್ವವಿದ್ಯಾನಿಲಯವನ್ನು ಪ್ರವೇಶಿಸಲು ಅಶಕ್ತರಾದ ಜನಸಾಮಾನ್ಯರಿಗೆ ವಿಶ್ವವಿದ್ಯೆಯ ಪರಿಚಯ ಮಾಡಿಕೊಡಲು ನಮ್ಮ ವಿಶ್ವವಿದ್ಯಾನಿಲಯ ಶ್ರಮಿಸಬೇಕು. ಈ ಕಾರ್ಯವು

ಪ್ರಚಾರೋಪನ್ಯಾಸ ಮತ್ತು ಪ್ರಕಟಣೆಗಳ ಮೂಲಕ ನಡೆಯಬೇಕಾಗಿದೆ. ಅತ್ಯಂತ ಪ್ರಯೋಜನಕಾರಿಯಾದ ಈ ಮಹತ್ಕಾರ್ಯವನ್ನು ವಿಶ್ವವಿದ್ಯಾನಿಲಯವು ಬೇಗನೆ ಕಾರ್ಯರೂಪಕ್ಕೆ ತರುವುದೆಂದು ನಂಬಿದ್ದೇನೆ"[೧] ಎಂದು ಹೇಳಿದ ಸೂಚನೆಗಳನ್ನು ಮೆಲುಕು ಹಾಕುತ್ತಾ ವಿಶ್ವವಿದ್ಯಾನಿಲಯದ ಅಧ್ಯಾಪಕ ವರ್ಗವು ಹೀಗೆ ಆಲೋಚಿಸಿತು. "ನಿಜವಾದ ವಿಶ್ವವಿದ್ಯಾನಿಲಯವು ದೇಶದಲ್ಲಿ ಸಂಸ್ಕೃತಿಯ ಕೇಂದ್ರವಾಗಬೇಕು. ಜನರ ಮನೆಬಾಗಿಲಿಗೆ ಅದನ್ನು ಮುಟ್ಟಿಸುವ ವಾಹಿನಿಯು ಆಗಬೇಕು. ತಾನೂ ಅಲ್ಲಿಂದ ಜೀವನ ರಸವನ್ನು ಹೀರಿ ಪುಷ್ಟಿಗೊಳ್ಳಬೇಕು. ಇಲ್ಲದಿದ್ದರೆ ಅದು ಮಡಿಯುಟ್ಟವರಂತೆ ಎಲ್ಲೋ ದೂರದಲ್ಲಿ ನಿಂತು ಜನಜೀವನದಿಂದ ಚೈತನ್ಯವನ್ನು ಉಕ್ಕಿಸಿಕೊಳ್ಳದೆ ಶುಷ್ಕವಾಗುತ್ತದೆ. ಅದನ್ನು ಬಿಟ್ಟು ಜನತೆಯ ಬಳಿಗೆ ನಡೆದರೆ ಮಾತ್ರ ನಮ್ಮ ದೇಶದಲ್ಲಿ ವಿದ್ವಾಂಸರಿಗೂ ಜನತೆಗೂ ಇರತಕ್ಕ ದೃಷ್ಟಿ ವ್ಯತ್ಯಾಸವು ಕಡಿಮೆಯಾಗಿ ಅವರಿಬ್ಬರಿಗೆ ಹೆಚ್ಚು ಕಡಿಮೆ ಎಲ್ಲ ಅಂಶಗಳಲ್ಲಿಯೂ ಇರತಕ್ಕ ಅಂತರವು ತಗ್ಗಬಹುದು. ಈ ರೀತಿಯ ಜ್ಞಾನ ಸಮನ್ವಯತೆಯನ್ನು ವಿಶ್ವವಿದ್ಯಾನಿಲಯವು ಕೈಗೊಂಡು ದೇಶಕ್ಕೆ ತಾನೊಂದು ಹೊರೆಯಲ್ಲ. ಜನಜೀವನದಲ್ಲಿ ತನಗೂ ಒಂದು ಸ್ಥಾನವೂ, ಕರ್ತವ್ಯವೂ ಉಂಟು ಎಂಬುದನ್ನು ವ್ಯಕ್ತಪಡಿಸಬೇಕಾಗಿದೆ."[೨]

ಇಂತಹ ಆಲೋಚನೆಗಳು ಒಮ್ಮಿಂದೊಮ್ಮೆಲೆ ಮೂಡಿದವುಗಳಲ್ಲ. ಕನ್ನಡ ನಾಡಿನ ರಾಜಋಷಿಯಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಸಾಧ್ಯವಾಯಿತು ಎನ್ನಬಹುದು. ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ನಾಡಿಗೆ ವಿದ್ವತ್ ಸಂಸ್ಥೆಯೊಂದು ಏನು ಮಾಡಬಹುದು ಎಂಬುದನ್ನು ನಿರ್ವಂಚನೆಯಿಂದ ಮಾಡಿತು. ಆ ವೇಳೆಗೆ ಅದು ಮಾಡಿದ ಮಹೋಪಕಾರವೆಂದರೆ ಕನ್ನಡ ನಾಡಿನ ಪರಿಜ್ಞಾನವನ್ನು ಕನ್ನಡಿಗರಿಗೆ ಮಾಡಿಕೊಟ್ಟಿದೆ. ಅದು ಜನರಲ್ಲಿ ಪರಸ್ಪರ ಸ್ನೇಹವನ್ನುಂಟು ಮಾಡಿ ಅವರನ್ನು ಒಟ್ಟುಗೂಡಿಸಿ ಕನ್ನಡ ನಾಡು ನುಡಿಯ ಜನಗಳು ಒಂದಾಗಲು ಸಾಧ್ಯವಾಯಿತು.

ಇದೇ ಸಮಯದಲ್ಲಿ ಡಿ.ವಿ. ಗುಂಡಪ್ಪ ಅವರು ಕನ್ನಡ ಸಾಹಿತ್ಯ ಪರಿಷತ್ತಿಗೆ ಉಪಾಧ್ಯಕ್ಷರಾಗಿ ಅದಕ್ಕೊಂದು ಹೊಸ ತೇಜಸ್ಸು ತುಂಬಿದರು. ಅವರು ಮಿಕ್ಕೆಲ್ಲ ಕೆಲಸಗಳನ್ನು ಬಿಟ್ಟು ಅಕ್ಷರಶಃ ತನುಮನಗಳನ್ನಿತ್ತು ಕಾಲು ಕಾರು ಎರಡನ್ನೂ ಸಮೆಸಿ ಅಹೋರಾತ್ರಿ ಅದಕ್ಕೆ ದುಡಿದರು. ಅವರು ತಮ್ಮ ಅಧಿಕಾರಾವಧಿಯಲ್ಲಿ ನೆಟ್ಟು ಬೆಳಸಿದ ಕಲ್ಪವೃಕ್ಷದ ಫಲಗಳಲ್ಲಿ ಒಂದು ಪ್ರತಿವರ್ಷವೂ ಬೆಂಗಳೂರಿನಲ್ಲಿ ನಡೆಯುವ ವಿಶೇಷ ಸಾಹಿತ್ಯೋತ್ಸವ, ಮತ್ತೊಂದು ಗಮಕ ಕಲಾ ವ್ಯಾಸಂಗ. ಪರಿಷತ್ತು ೧೯೩೩ರ ಪತ್ರಿಕೆಯಲ್ಲಿ ಇವುಗಳ ಉದ್ದೇಶವನ್ನು ತಿಳಿಸುತ್ತಾ ಉಪನ್ಯಾಸದ ವಿಷಯಗಳನ್ನು ಸೂಚಿಸಿತು. ಅವುಗಳೆಂದರೆ

೧. ಕಾವ್ಯದ ಸ್ವರೂಪ (ಕರ್ಣಾಟಕ ಮತ್ತು ಆಂಗ್ಲೇಯ) ೨. ಕನ್ನಡದಲ್ಲಿ ಹೊಸ ಸಾಹಿತ್ಯದ ರೀತಿ ೩. ಜೀವಶಾಸ್ತ್ರ ೪. ಭೌತ ಮತ್ತು ಆಧ್ಯಾತ್ಮ ವಿಚಾರಗಳು ೫. ಪರಿಣಾಮವಾದ ೬. ಅಂತರರಾಷ್ಟ್ರೀಯ ಸೌಹಾರ್ದ ೭. ಇಂಡಿಯಾ ದೇಶದ ಸಂಯುಕ್ತ ರಾಜ್ಯ ರಚನೆ ೮. ಪ್ರಪಂಚ ಈಗಿನ ಬಡತನ ೯. ಭಾಷಾಶಾಸ್ತ್ರ ೧೦. ಮನಃಶಾಸ್ತ್ರ ೧೧. ಹಿಂದೂ ದರ್ಶನಗಳು ೧೨, ಹೊಯ್ಸಳ ವಾಸ್ತುಶಿಲ್ಪ ೧೩. ಕಾಳಿದಾಸನ ಕವಿತ್ವ ೧೪. ಹೊಸ ಪ್ರಪಂಚದಲ್ಲಿ ಸ್ತ್ರೀಯರ ಕರ್ತವ್ಯ.

ಈ ಉಪನ್ಯಾಸಗಳು ಆಧುನಿಕ ವಿಚಾರಗಳನ್ನು ಕುರಿತವುಗಳಾಗಿದ್ದವು. ಮುಖ್ಯವಾಗಿ ಕನ್ನಡನಾಡಿನ ಮಾಧ್ಯಮಿಕ ಮತ್ತು ನಾರ್ಮಲ್ ಪಾಠಶಾಲೆಗಳ ಉಪಧ್ಯಾಯರನ್ನು ದೃಷ್ಟಿ ಇಟ್ಟುಕೊಂಡಿದ್ದವು. ವಿದ್ಯಾಭ್ಯಾಸದ ಇಲಾಖೆಯ ಅಧಿಕಾರಿಗಳು ತಮ್ಮ ಉಪಧ್ಯಾಯರಿಗೆ ಇವು ಒಂದು ವಿಧವಾದ ನವೀನ ಉಪನ್ಯಾಸಗಳಾದುವೆಂದು ಕಂಡುಕೊಂಡು ಪರಿಷತ್ತಿನೊಂದಿಗೆ ಸಹಕರಿಸಿದರು. ಮೇಲೆ ಕಾಣಿಸಿದ ಉಪನ್ಯಾಸಗಳನ್ನು ಅಂದು 'ಆಧುನಿಕ ವಿಚಾರೋಪನ್ಯಾಸ'ಗಳೆಂದು ಕರೆಯಲಾಗಿತ್ತು. ಆಯಾ ವಿಷಯಗಳಲ್ಲಿ ಉಪಾಧ್ಯಾಯರು ಬಂದು ಮಾತನಾಡಿದರು. ಅನಂತರ ಕೆಲವು ಕಾಲೇಜಿನ ವಿದ್ಯಾರ್ಥಿ ಸಂಘಗಳಲ್ಲಿ ವರ್ಷಾರಂಭದ ಭಾಷಣ ಉಪನ್ಯಾಸಗಳು ನಡೆಯುವಂತಾದವು. ಈ ದೃಷ್ಟಿಯಿಂದ ಸಾಹಿತ್ಯೋತ್ಸವದ ಕಾರ್ಯಕ್ರಮಗಳು ಪ್ರಸಿದ್ಧಿಪಡೆದವು. ಇದಕ್ಕೆ ರಾಜಕಾರ್ಯ ಪ್ರವೀಣ ಎನ್.ಎಸ್. ಸುಬ್ಬರಾವ್ ಮತ್ತು ರಾಜಸೇವಾಸಕ್ತ ಬಿ.ಎಂ. ಶ್ರೀಕಂಠಯ್ಯನವರು ಜೀವ ತುಂಬಿದರು. ಇದೇ ಸಮಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಚಾರೋಪನ್ಯಾಸಗಳು ಆರಂಭವಾದವು.

ಇದೆಲ್ಲದರ ಪೂರ್ವಪೀಠಿಕೆಯಿಂದಾಗಿ ೧೯೧೬ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮೊದಲ ಸೆನೆಟ್ ಸಭೆಯನ್ನುದ್ದೇಶಿಸಿ ಮಾಡಿದ ಭಾಷಣ ಸಾಕ್ಷಾರವಾಗಲು ಹದಿನೇಳು ವರ್ಷಗಳೇ ಬೇಕಾದವು. ಅದು ಮೊದಲು ಮೊಳೆತದ್ದು ಜಿ. ಹನುಮಂತರಾಯರಲ್ಲಿ. ವಿಶ್ವವಿದ್ಯಾನಿಲಯದ ಪ್ರಯೋಜನ ಕೆಲವರಿಗೆ ಮಾತ್ರವೇ ಸೀಮಿತವಾಗಬಾರದು, ಜ್ಞಾನಜ್ಯೋತಿ ಮೈಸೂರು, ಬೆಂಗಳೂರುಗಳಲ್ಲಿ ಮಾತ್ರ ಬೆಳಗಿದರೆ ಸಾಲದು, ಸಾಮಾನ್ಯ ಜನರಿಗೂ ಅದು ತಲುಪಬೇಕೆಂದು ಮೊದಲು ಆಲೋಚಿಸಿದವರು ಅವರೆ, ಅವರು ವಿಶ್ವವಿದ್ಯಾನಿಲಯದ ತೀರ್ಮಾನಕ್ಕೆ ಕಾಯದೆ ಯಾವ ಪ್ರಾಧ್ಯಾಪಕರ ಸಲಹೆಯನ್ನು ಕೇಳದೆ ನೇರವಾಗಿ ಕಾರ್ಯೋನ್ಮುಖರಾದರು. ೧೯೩೩ರಲ್ಲಿ ತೀ.ನಂ. ಶ್ರೀಕಂಠಯ್ಯ, ಎ.ಎನ್. ಮೂರ್ತಿರಾಯರನ್ನು ಒಳಗೊಂಡಂತೆ ವಿಶ್ವವಿದ್ಯಾನಿಲಯದ ಅಧ್ಯಾಪಕ

5

ಸಂಘವನ್ನು ಸ್ಥಾಪಿಸಿದರು. ಅಂದು ಮಹಾರಾಜ ಕಾಲೇಜಿನ ಪ್ರಾಂಶುಪಾಲರಾದ ಜೆ.ಸಿ. ರಾಲೋ ಇದರ ಅಧ್ಯಕ್ಷರಾಗಿ, ಜಿ. ಹನುಮಂತರಾಯರು ಕಾರ್ಯದರ್ಶಿಯಾಗಿ ಚುನಾವಣೆಗೊಂಡು ಸಂಸ್ಥೆ ಅಸ್ತಿತ್ವಕ್ಕೆ ಬಂತು. ಇದಾದ ಬಳಿಕ ತನ್ನ ಸಲಹೆಗಳನ್ನು ಅಂಗೀಕರಿಸಿ ಸಂಘವು ಈ ರೀತಿ ಅಭಿಪ್ರಾಯ ಪಟ್ಟಿತು. "ಈ ಕಾರ್ಯವನ್ನು ನಡೆಸುವುದಕ್ಕೆ ವಿಶ್ವವಿದ್ಯಾನಿಲಯದ ಅಧ್ಯಾಪಕರೇ ಟೊಂಕಕಟ್ಟಿ ನಿಲ್ಲಬೇಕು. ನಗರಗಳನ್ನು ಬಿಟ್ಟು ದೇಶದ ಒಳಭಾಗಗಳಲ್ಲಿ ಸಂಚರಿಸಬೇಕು. ಕೆಲವರಿಗೆ ಮಾತ್ರ ಅರ್ಥವಾಗುವ ಇಂಗ್ಲಿಷನ್ನು ಬಿಟ್ಟು, ವಿದ್ಯಾವಂತರು, ಅಲ್ಪಜ್ಞರು, ಹೆಂಗಸರು, ಮಕ್ಕಳು ಎಲ್ಲರಿಗೂ ಅರ್ಥವಾಗುವ ಕನ್ನಡದಲ್ಲೇ ಉಪನ್ಯಾಸಗಳನ್ನು ಕೊಡಬೇಕು. ಉಪನ್ಯಾಸದ ವಿಷಯವು ಪ್ರೌಢವಾದರೂ ಅದರ ನಿರೂಪಣೆ ಜನ-ಸಾಮಾನ್ಯರಿಗೆ ರುಚಿಸುವಂತಿರಬೇಕು. ಎಲ್ಲೋ ಒಬ್ಬಿಬ್ಬರು ಹೋಗಿ ಒಂದೆರೆಡು ಉಪನ್ಯಾಸಗಳನ್ನು ಕೊಟ್ಟು ಹಿಂದಿರುಗಿದರೆ ಅದರ ಪರಿಣಾಮವು ಜನಗಳ ಮನಸ್ಸಿನಲಿ ಒತ್ತಿ ನಿಲ್ಲುವುದಿಲ್ಲ. ಅದರ ಬದಲು ಹಲವು ಮಂದಿ ಅಧ್ಯಾಪಕರು ಒಂದು ಗುಂಪಾಗಿ ಹೋಗಿ ಏಳೆಂಟು ದಿನ ಒಂದು ಕಡೆಯಲ್ಲಿ ನಿಂತು ವಿಶ್ವವಿದ್ಯಾನಿಲಯದಲ್ಲಿ ಬೋಧಿಸುವ ವಿಷಯಗಳ ಮೇಲೆ ಅರ್ಥಗರ್ಭಿತವೂ, ಮನೋರಂಜಕವೂ ಆದ ಉಪನ್ಯಾಸಗಳನ್ನು ಕೊಡಬೇಕು"[೩] ಎಂದಿತು. ಈ ಸೂಚನೆಗಳನ್ನು ಅನುಮೋದಿಸಿದ ಸಂಘವು ವಿಶ್ವವಿದ್ಯಾನಿಲಯವು ಅಧಿಕಾರ ಪೀಠದಲ್ಲಿ ಕುಳಿತು ತನ್ನೆಡೆಗೆ ಬಂದವರ ಮೇಲೆ 'ಪದವೀಧರ' ಮುದ್ರೆಯನ್ನೊತ್ತಿ ಕಳುಹಿಸಿದರೆ ಸಾಲದು, ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿಕೊಂಡು ಬಂದರೂ ಸಾಲದು, ಅದರ ಮುಖ್ಯ ಕಾರ್ಯ ಜನಸಾಮಾನ್ಯರನ್ನು ತನ್ನೆಡೆಗೆ ಸೆಳೆಯಬೇಕು, ಇಲ್ಲದಿದ್ದರೆ ಅದು ಜನಸಾಮಾನ್ಯರಿಂಧ ದೂರ ಉಳಿಯಬೇಕಾಗುತ್ತದೆ, ಅದನ್ನು ಮಾಡಿ ತೋರಿಸಲು ಮುಂದಾದ ಕಾರ್ಯಸಾಧನವೇ ಉಪನ್ಯಾಸ ಸಪ್ತಾಹಗಳು.

ಸಾಮಾನ್ಯ ಜನತೆಯ ಹಿತದೃಷ್ಟಿಯಿಂದ ಜ್ಞಾನ ಪ್ರಸಾರ ಮಾಡಲು ಮುಂದಾದ ಅಧ್ಯಾಪಕ ಸಂಘದ ಈ ವಿಧಾನಗಳು ಜನತೆಯ ಬೆಳಕಿನ ದೀಪಗಳಾದವು. ಪರಿಣಾಮವಾಗಿ ಮೊದಲ ಉಪನ್ಯಾಸ ಸಪ್ತಾಹವು ೧೯೩೩ರ ಮೇ ೨೨ ರಂದು ಹಾಸನದಲ್ಲಿ ಪ್ರಾರಂಭವಾಯಿತು. ಪ್ರಾರಂಭಿಕ ಭಾಷಣವನ್ನು ಅಂದು ಸಂಜೆ ಶ್ರೀ ಬಿ.ಎಂ. ಶ್ರೀಕಂಠಯ್ಯ ನೇರವೇರಿಸಿದರು. ಅಂದು ಘನ ವಿದ್ವಾಂಸರು ನೀಡಿದ ಉಪನ್ಯಾಸಗಳು ಜನತೆಯಲ್ಲಿ ಹೊಸ ಅಲೆಯನ್ನು ಹುಟ್ಟು ಹಾಕಿದವು. ಅದುವರೆಗೂ ಸಾಹಿತ್ಯಾಸಕ್ತರಿಗೆ ಮತ್ತು ಪಂಡಿತ-ಪಾಮರರಿಗೆ ಮಾತ್ರವೇ ದೊರಕುತ್ತಿದ್ದ ಜ್ಞಾನ ಸಂಪತ್ತು ಜನಸಾಮಾನ್ಯರ ಕಿವಿ ಮುಟ್ಟಿ ನವೀನ ಆಯಾಮಕ್ಕೆ ಎಡೆಮಾಡಿಕೊಟ್ಟಿತು.

ಇದೇ ಸಮಯದಲ್ಲಿ ಹನುಮಂತರಾಯರು ಹಾಸನದಲ್ಲಿ ಜ್ಞಾನ ಸಪ್ತಾಹವನ್ನು ಏರ್ಪಡಿಸಿದರು. ಮೊದಲನೆಯ ದಿನ ಬೆಳಿಗ್ಗೆ ಗುಂಡಪ್ಪಗೌಡರು (ಹಾಸನದ ಶಾಸಕರು) ಅಧ್ಯಕ್ಷರಾಗುತ್ತಾರೆ. ಎ.ಎನ್. ಮೂರ್ತಿರಾವ್, ನಾ. ಕಸ್ತೂರಿ ಮೊದಲಾದವರು ಉಪನ್ಯಾಸ ನೀಡಿದರು. ಇಡೀ ವಾರ ನಡೆದ ಆ ಜ್ಞಾನದ ಹಬ್ಬವನ್ನು ಗುಂಡಪ್ಪಗೌಡರು ಮಾತ್ರವಲ್ಲ, ಇಡೀ ಸಭೆ ಮೆಚ್ಚಿಕೊಳ್ಳುತ್ತದೆ. ಮುಂದಿನ ಶಾಸನ ಸಭೆಯಲ್ಲಿ ಅವರು ವಿಶ್ವವಿದ್ಯಾನಿಲಯದ ಪ್ರಯತ್ನವನ್ನು ಶ್ಲಾಘಿಸಿದರು. ಅಧ್ಯಾಪಕ ಸಂಘವು ಖಾಸಗಿಯಾಗಿ ನಡೆಸಿದ ಈ ಉಪನ್ಯಾಸಗಳು ಸಾರ್ವತ್ರಿಕ ಮೆಚ್ಚಿಗೆ ಪಡೆಯಲಾಗಿ, ಕುಲಪತಿ ಮೆಟ್‌ಕಾಫ್ ಸಂತೃಪ್ತಗೊಂಡು ವಾರ್ಷಿಕ ಅನುದಾನವನ್ನು ಮಂಜೂರು ಮಾಡಿದರು. ಮುಂದಿನ ದಿನಗಳಲ್ಲಿ ಮೈಸೂರು ಪ್ರಾಂತ್ಯದಲ್ಲೂ ಪ್ರಚಾರೋಪನ್ಯಾಸ ಮಾಲೆ ಜನಪ್ರಿಯವಾಯಿತು. ಮುಂದೆ ದೊಡ್ಡಬಳ್ಳಾಪುರ, ಶಿವಮೊಗ್ಗ, ಚಿತ್ರದುರ್ಗ, ಕೋಲಾರ, ಮಂಡ್ಯ, ಚಿಕ್ಕಮಂಗಳೂರು, ಅರಸಿಕೆರೆ ಹೀಗೆ ಹಲವು ಕಡೆಗಳಲ್ಲಿ ಉಪನ್ಯಾಸಗಳು ನಡೆಯಲಾರಂಭಿಸಿದವು. ಉಪನ್ಯಾಸಗಳು ಏರ್ಪಡುತ್ತಿದ್ದ ಪ್ರತಿ ಸಭಾಮಂದಿರವೂ ಸುಮಾರು ಇನ್ನೂರು ಮುನ್ನೂರು ಜನಗಳಿಂದ ತುಂಬಿರುತ್ತಿದ್ದವು. ಅಲ್ಲಿ ಮಹಿಳೆಯರು ಮೂವತ್ತು-ನಲವತ್ತು ಮಂದಿಗೆ ಕಡಿಮೆ ಇಲ್ಲದಂತೆ ಬರುತ್ತಿದ್ದುದು ಗಮನಾರ್ಹ ಸಂಗತಿ. ಇದು ಜ್ಞಾನ ದಾಹದ ಸೂಚಕತೆಯ ಕಿರಣವೂ ಆಗಿತ್ತೆಂದು ಗುರುತಿಸಬಹುದು.

ಉಪನ್ಯಾಸಗಳಲ್ಲಿ ಶ್ರಾವ್ಯವಾದ ಕಾವ್ಯವಾಚನದ ಬಳಿಕ ಉಪನ್ಯಾಸಗಳು ನಡೆಯುತ್ತಿದ್ದವು. ಅವು ಒಂದಕ್ಕೊಂದು ಪೂರಕವಾದ ವಿಷಯಗಳನ್ನು ಅರ್ಧಗಂಟೆಯವರೆಗೆ ಪ್ರಸ್ತುತಪಡಿಸುತ್ತಿದ್ದವು. ಇಂತಹ ಉಪನ್ಯಾಸಗಳು ಶಾಸ್ತ್ರೀಯ ವಿಷಯಗಳನ್ನು ಸರಳವಾಗಿ, ನಿರರ್ಗಳವಾಗಿ ಪ್ರತಿಪಾದಿಸುತ್ತಿದ್ದುದು ಕನ್ನಡ ಭಾಷೆಗೆ ಯಾವ ಭಯವೂ ಇಲ್ಲವೆಂಬುದನ್ನು ತೋರಿಸಿತು. ಈ ಪ್ರಚಾರೋಪನ್ಯಾಸಗಳನ್ನು ದೇಶದಲ್ಲಿ ಎಲ್ಲೆಲ್ಲಿ ಅಪೇಕ್ಷಿಸುತ್ತಾರೋ ಅಲ್ಲಿ ನೀಡಲಾಗುತ್ತಿತ್ತು. ಆಯಾ ಭಾಷೆಗಳಲ್ಲಿ ತಜ್ಞರಾದವರು ಆಯಾ ವಿಷಯಗಳನ್ನು ಕುರಿತು ಉಪನ್ಯಾಸ ಮಾಡುತ್ತಿದ್ದುದು ವಿಶೇಷ. ಇದು ಒಂದು ಭಾಷೆಯೊಂದಿಗೆ ಮತ್ತೊಂದು ಭಾಷೆ ಮತ್ತು ಸಾಹಿತ್ಯ ಹಾಗೂ ಜ್ಞಾನ ಸಂಪತ್ತನ್ನು ಬೆಸೆಯುವ ಕೊಂಡಿಯೂ ಆಯಿತು. ಇವುಗಳ ಜೊತೆಗೆ ಹಿಂದೆ ಕನ್ನಡದಲ್ಲಿ ಬಂದಿರುವ ಕಾವ್ಯಗಳನ್ನು ಕುರಿತು ಮಾತ್ರವೇ ಅಲ್ಲದೆ, ಬೇರೆ ಬೇರೆ ಭಾಷೆಗಳಲ್ಲಿ ಅದು ಪರ್ಷಿಯನ್ ಭಾಷೆಯಾಗಿರಬಹುದು, ಇಂಗ್ಲಿಷ್ ಭಾಷೆಯಾಗಿರಬಹುದು, ಗ್ರೀಕ್ ಭಾಷೆಯಾಗಿರಬಹುದು, ಆಯಾ ಭಾಷೆಗಳಲ್ಲಿ ತಜ್ಞರಾದವರು ಆಯಾ ಭಾಷೆಯಲ್ಲಿ ಉಪನ್ಯಾಸ ನೀಡುತ್ತಿದ್ದುದು ವಿಶೇಷ.

ಇದರಿಂದಾಗಿ ಎಲ್ಲಾ ವಿಷಯಗಳು ಒಳಗೊಂಡಂತೆ ರೇಡಾರ್ ಮೊದಲಾದ ಆಧುನಿಕ ವಿಜ್ಞಾನದ ವಿಷಯಗಳು, ಹೆರಿಗೆ, ಶಿಶುಸಂರಕ್ಷಣೆ, ಕಣ್ಣು ಮತ್ತು ಅದರ ರಕ್ಷಣೆ ಇತ್ಯಾದಿ ಸಮಕಾಲೀನ ವಿಷಯಗಳು ಕೂಡ ಎಲ್ಲರಿಗೂ ತಿಳಿಯುವಂತೆ ಮಾಡಿದುದು ಜನತೆಯ ಸೌಭಾಗ್ಯವಾಯಿತು. ಎಷ್ಟೋ ಜನ ಕಾರಣಾಂತರಗಳಿಂದ ತಮ್ಮ ವಿದ್ಯಾಭ್ಯಾಸವನ್ನು ಮೊಟಕುಗೊಳಿಸುವರು, ಅಂತವರಿಗೆ ಪ್ರಚಾರೋಪನ್ಯಾಸಗಳು ಬೆಳಕಾಗಿ ಕಂಡುಬಂದವು. ಇದನ್ನೇ ಕುವೆಂಪು ಅವರ ಮಾತುಗಳಲ್ಲಿ ಹೇಳುವುದಾದರೆ, "ದೇಶದ ಬಹುಜನ ವಿಶ್ವವಿದ್ಯಾನಿಲಯವನ್ನು ಪ್ರವೇಶ ಮಾಡಿ, ಸಂಸ್ಕೃತಿ ವಿಜ್ಞಾನಗಳಲ್ಲಿ ಪರಿಣತರಾಗಲು ಸಾಧ್ಯವಿಲ್ಲ, ಅಂತವರಿಗೆ ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸಗಳು ಜ್ಞಾನದೀವಿಗೆಗಳಾಗಬಲ್ಲವು" ಎಂಬುದನ್ನು ಇಲ್ಲಿ ನೆನೆಯಬಹುದು.

ಹೀಗೆ ನಾಲ್ಕೈದು ಉಪನ್ಯಾಸಗಳು ನಡೆಯುವ ಹೊತ್ತಿಗಾಗಲೇ ಇವುಗಳ ಖ್ಯಾತಿ ಇಂಗ್ಲೆಂಡಿನವರೆಗೂ ಹಬ್ಬಿತು. ೧೯೩೪ನೆಯ ಜೂನ್ ೨೯ ರಿಂದ ಜುಲೈ ೦೨ರ ವರೆಗೆ 'ಅಂತರರಾಷ್ಟ್ರೀಯ ವಿಶ್ವವಿದ್ಯಾನಿಲಯಗಳ ಸಮ್ಮೇಳನ' (International University Conference) ಇಂಗ್ಲೆಂಡಿನ ಆಕ್ಸ್‌ಫರ್ಡ್ ಪಟ್ಟಣದಲ್ಲಿ ನಡೆಯಿತು. ಆ ಅವಧಿಯಲ್ಲಿ ಮಹಾರಾಜ ಕಾಲೇಜಿನ ಪ್ರಾಂಶುಪಾಲರಾಗಿದ್ದ ಜೆ.ಸಿ. ರಾಲೋ ಮೈಸೂರು ವಿಶ್ವವಿದ್ಯಾನಿಲಯದ ಪ್ರತಿನಿಧಿಯಾಗಿ ಹೋಗಿ ಉಪನ್ಯಾಸಗಳ ಹೊಸ ಪ್ರಯೋಗದ ಸ್ವರೂಪವನ್ನು, ಅದು ಇದುವರೆಗೆ ಮಾಡಿರುವ ಕಾರ್ಯವನ್ನು ಸಮ್ಮೇಳನದ ಮುಂದೆ ವಿವರಿಸಿದರು. ಸಮ್ಮೇಳನಕ್ಕೆ ಬಂದಿದ್ದ ದೇಶವಿದೇಶಗಳ ಪ್ರತಿನಿಧಿಗಳೆಲ್ಲರೂ ಅದನ್ನು ಕೇಳಿ ತುಂಬ ಮೆಚ್ಚಿದರು. ಪ್ರಪಂಚದ ಬೇರೆ ಯಾವ ದೇಶದಲ್ಲೂ ಈ ಬಗೆಯ, ಇದೇ ಮಾದರಿಯ ಶಿಕ್ಷಣ ಪ್ರಯೋಗವು ನಡೆಯುತ್ತಿರಲಿಲ್ಲ ಎಂಬುದು ಅದರಿಂದ ಗೊತ್ತಾಯಿತು. ಸಮ್ಮೇಳನದಲ್ಲಿ ಈ ಸಪ್ತಾಹಕ್ಕೆ "ಮೈಸೂರು ಪ್ರಯೋಗ" (The Mysore Experiment) ಎಂಬ ಹೆಸರು ಬಂದಿತು. ಇದರ ಕಾರ್ಯ ವ್ಯವಸ್ಥೆಯ ವಿಷಯದಲ್ಲಿ ಬೇರೆ ವಿಶ್ವವಿದ್ಯಾನಿಲಯದವರು ಕುತೂಹಲಪಟ್ಟು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಕಾಗದವನ್ನು ಬರೆದು ವಿಷಯ ತಿಳಿದುಕೊಳ್ಳ ತೊಡಗಿದರು. ಇದರಿಂದ ಗೊತ್ತಾಗುತ್ತದೆ ಇದರ ಮೌಲ್ಯ ಎಂತಹದ್ದು ಎಂದು.

ಪ್ರಸಾರಾಂಗ ಪ್ರಾರಂಭವಾಗಿ ಕಾಲು ಶತಮಾನದಲ್ಲಿ ಕೈಗೊಂಡಿರುವ ಈ ಬಗೆಯ ಕಾರ್ಯ ಭರತಖಂಡದಲ್ಲಿ ಮತ್ತೆಲ್ಲಿಯೂ ಕಂಡುಬರದು. ನಮ್ಮ ಅಧ್ಯಾಪಕ ಸಂಘದ ಪರಿಶ್ರಮ ಪ್ರಚಾರೋಪನ್ಯಾಸಗಳು ಯಶಸ್ವಿಯಾಗಲು ಮಹತ್ವದ್ದಾಗಿತ್ತು.

ಈ ಪ್ರಚಾರೋಪನ್ಯಾಸಗಳು ಕೇವಲ ಜ್ಞಾನ ಪ್ರಸಾರದ ಮಾಧ್ಯಮವಾಗಿ ಮಾತ್ರ ಉಳಿಯದ ಅವು ಸಮಾಜ ಪರಿವರ್ತನೆಗೆ ಸಮುದಾಯವನ್ನು ಕರೆದೊಯ್ಯುವ ದಿಕ್ಸೂಚಿಗಳಾದವು. ಅದಕ್ಕೊಂದು ಉತ್ತಮ ನಿದರ್ಶನವೆಂದರೆ ಕಾಲೇಜಿನ ವಿದ್ಯಾರ್ಥಿಗಳು ಕೈಗೊಂಡ 'ಗ್ರಾಮಸೇವೆ' ಎಲ್ಲೆಡೆ ಅಂದು ಪ್ರಬಲವಾಗುತ್ತಿದ್ದ ಗ್ರಾಮಸೇವೆ, ಹರಿಜನೋದ್ಧಾರ ಮತ್ತು ಉಪನ್ಯಾಸ ಸಪ್ತಾಹ ಮುಂತಾದ ಕಾರ್ಯಕ್ರಮಗಳಲ್ಲಿ ಹಿರಿಯರ ಮೇಲ್ಪಂಕ್ತಿಯನ್ನು ಅನುಸರಿಸಿ ತಾವೂ ಅದರಲ್ಲಿ ಭಾಗವಹಿಸಬೇಕೆಂದು ವಿದ್ಯಾರ್ಥಿಗಳು ಉತ್ಸಾಹದಿಂದ ಮುಂದೆ ಬಂದು ಗ್ರಾಮಸೇವೆಗೆ ನಿರತರಾದರು. ಇಂತಹ ಪರಿವರ್ತನೆಗೆ ಕಾರಣವಾದವು ಪ್ರಚಾರೋಪನ್ಯಾಸಗಳು. ಇಂತಹ ಬದಲಾವಣೆ ತಾನೆ ಸಮಾಜಕ್ಕೆ ಬೇಕಾಗಿರುವುದು.

ಮೇಲಿನಂತೆ ಸಾಮಾಜಿಕ ಪರಿವರ್ತನೆಯಲ್ಲಿ ಬಹು ಮನ್ನಣೆಗೆ ಪಾತ್ರವಾಗಿದ್ದ ಪ್ರಚಾರೋಪನ್ಯಾಸಗಳು ಕಾರಣಾಂತರಗಳಿಂದ ನಿಂತು ಹೋದುದು ವಿಷಾದನೀಯ ಸಂಗತಿ. ಅಪಾರ ಜನಮನ್ನಣೆಗೆ ಪಾತ್ರವಾಗಿದ್ದ ಅವು ಇಂದಿನ ಆಧುನಿಕತೆ ಮತ್ತು ತಂತ್ರಜ್ಞಾನದ ಭರಾಟೆಯಲ್ಲಿ ಕೇಳುವವರು ಯಾರು ಎಂಬುದು ಕೆಲವರ ಅಭಿಪ್ರಾಯ. ಆದರೆ ಅದು ಸಾರ್ವತ್ರಿಕವಾದುದಲ್ಲ. ಕೇವಲ ಆಧುನಿಕತೆ ಮತ್ತು ತಂತ್ರಜ್ಞಾನ ಎಲ್ಲವನ್ನು ಒದಗಿಸುವುದಾದರೆ ನಮ್ಮ ಹಳ್ಳಿಗಳು ಇಂದಿಗೂ ಅನಕ್ಷರತೆಯ ಸೋಗಿನಲ್ಲಿ ನಡೆಯುತ್ತಿವೆ ಎಂಬುದನ್ನು ನೆನಪಿನಲ್ಲಿಡಬೇಕು. ನಾವು ನಮ್ಮ ಸಂಸ್ಕೃತಿಯನ್ನು ಮರೆಯುತ್ತಿದ್ದೇವೆ. ನಮ್ಮ ಪೂರ್ವಿಕರ ಪ್ರಕಾಂಡ ವಿದ್ವತ್ತು, ಪಾಂಡಿತ್ಯ ಮತ್ತು ಅವರ ಸಾಹಿತ್ಯ, ಚರಿತ್ರೆ ಎಲ್ಲವು ಅವಸಾನದತ್ತ ಸಾಗುತ್ತಿವೆ. ಈ ಹಿನ್ನೆಲೆಯಲ್ಲಿ ಪ್ರಚಾರೋಪನ್ಯಾಸಗಳ ಅಗತ್ಯತೆ ಇಂದಿಗೂ ಇದೆ.

ನಮ್ಮ ನಗರ ಜೀವನವು ಇದಕ್ಕೆ ಹೊರತಲ್ಲ. ಆಧುನಿಕತೆ ಎಲ್ಲವನ್ನು ಮರೆಸುತ್ತಿದೆ. ಓದುವ ಹವ್ಯಾಸಿಗರು ಇಂದು ಕಡಿಮೆಯಾಗುತ್ತಿದ್ದಾರೆ. ಹಳಗನ್ನಡ ಸಾಹಿತ್ಯದ ಬಗ್ಗೆ ಆಸಕ್ತಿ ಇಲ್ಲವಾಗಿದೆ. ಇದೆಲ್ಲವನ್ನು ನೋಡಿದಾಗ ಉಪನ್ಯಾಸ ಸಪ್ತಾಹಗಳು ಎಂದೆಂದಿಗೂ ಪ್ರಸ್ತುತವೇ ಎಂದೆನಿಸುತ್ತದೆ. ಈ ನಿಟ್ಟಿನಲ್ಲಿ ಪ್ರಸ್ತುತ ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಎಂ.ಜಿ. ಮಂಜುನಾಥ ಅವರು ದಿಟ್ಟ ಹೆಜ್ಜೆಯನಿಟ್ಟು ಹಲವು ವರ್ಷಗಳು ನಿಂತು ಹೋಗಿದ್ದ ಉಪನ್ಯಾಸ ಮಾಲೆಗೆ ಹೊಸ ರೂಪುಕೊಟ್ಟು ನವೀನ ಚೈತನ್ಯದೊಂದಿಗೆ ಪ್ರಸ್ತುತಕ್ಕೆ ಅಗತ್ಯವಾದ ವಿಚಾರಗಳನ್ನು ಜನತೆಯ ಮುಂದಿಡಲು ಮುಂದಾಗಿರುವುದು ಉತ್ತಮ ಬೆಳವಣಿಗೆ ಮಾತ್ರವಲ್ಲ ಪ್ರಶಂಸನೀಯವೂ ಹೌದು.

ಹೀಗೆ ಪ್ರಚಾರೋಪನ್ಯಾಸಗಳು ಸಮಕಾಲೀನ ಸಮಾಜದ ನಾಡಿಮಿಡಿತಗಳಾಗಿ ಜ್ಞಾನಸಂಪತ್ತನ್ನು ಸಾಮಾನ್ಯರ ಮನೆಬಾಗಿಲಿಗೆ ಒಯ್ಯುವ ಕಾರ್ಯಸಾಧನಗಳಾಗಿ

ಪ್ರಜ್ವಲಿಸಿ ಪ್ರಸ್ತುತ ಸಮಾಜದೊಂದಿಗೆ ಮಿಳಿತವಾಗಿದ್ದವು. ಇಂತಹ ಜ್ಞಾನ ದಾಹ ತಾನೆ ಇಂದಿಗೂ ಬೇಕಾಗಿರುವುದು ಎಂಬುದನ್ನು ಮೇಲಿನ ವಿಷಯಗಳು ನಿರೂಪಿಸುತ್ತವೆ ಎಂದು ಮನಪೂರ್ವಕವಾಗಿ ಒಪ್ಪಬಹುದು. ಹಾಗೆಯೇ ಪ್ರಸ್ತುತಕ್ಕೆ ಇವುಗಳ ಅಗತ್ಯತೆ ಬಹುವಾಗಿದೆ ಎನ್ನಬಹುದು.

ಕೊನೆಟಿಪ್ಪಣಿಗಳು

೧. ವಿಶ್ವವಿದ್ಯಾನಿಲಯದ ಪ್ರಸಾರಾಂಗ, ಡಾ. ಕೆ.ವಿ. ಪುಟ್ಟಪ್ಪ, ಪುಟ – III.
೨. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಎಂಬ ಲೇಖನದಿಂದ – ಪುಟ – ೦೨.
೩. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಎಂಬ ಲೇಖನದಿಂದ – ಪುಟ – ೦೨.

ಪರಾಮರ್ಶನ ಕೃತಿಗಳು

೧. ಡಾ. ಪುಟ್ಟಪ್ಪ, ಕೆ.ವಿ. – ವಿಶ್ವವಿದ್ಯಾನಿಲಯದ ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು – ತೃತೀಯ ಮುದ್ರಣ – ೧೯೯೧

೨. ದೇಜಗೌ – ಗಂಡೂರಿನ ಗರಿಮೆ – ಜಿ. ಹನುಮಂತರಾವ್ ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು – ೨೦೦೫

೩. (ಸಂ) ನಾಗಯ್ಯ, ಹಿ.ಮ. – ಪುಸ್ತಕ ಭಾಗ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ೧೯೭೨

೪. Dr. Gopal B.R. - PRASARANGA A HISTORY Prasaranga, Mysore University Mysore - 1983

೫. (ಸಂ) ಡಾ. ಬಿಲ್ಲೇಹಳ್ಳಿ ಪ್ರಭು ಚಿಕ್ಕಮಂಗಳೂರು ಗಣೇಶ್ – ಸುವರ್ಣ ಕರ್ನಾಟಕ ಲೇಖಕರ ಸಮಾವೇಶ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – ೨೦೦೬

೬. ಪ್ರಬುದ್ಧ ಕರ್ಣಾಟಕ – Vol-17, 1936, ಪ್ರಸಾರಾಂಗ, ಮೈಸೂರು

೭. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – ಲೇಖನ

೮. ತರಂಗ ಮಾಸಪತ್ರಿಕೆ – ಜುಲೈ – ೨೦೧೫

□□□

೮. ಕ್ರಾಂತಿಕಾಳಿ : ಕಾವ್ಯತತ್ವ ಚಿಂತನೆಯ ಹಿನ್ನೆಲೆಯಲ್ಲಿ ಮರು ಓದು

– ಡಾ. ವಿಜಯಕುಮಾರಿ. ಎಸ್. ಕರಿಕಲ್

ಕುವೆಂಪು ಅವರ ಈ ಕವಿತೆ ೧೯೩೫ರಲ್ಲಿ ರಚನೆಯಾದದ್ದು ಸಾನೆಟ್ ಪ್ರಕಾರದಲ್ಲಿದೆ. ಕೃತ್ತಿಕೆ ಕವನ ಸಂಕಲನದಲ್ಲಿ ಇರುವ ಎಲ್ಲ ಪದ್ಯಗಳು ಸಾನೆಟ್‌ಗಳೇ. ಶೃಂಗಾರ, ಭಕ್ತಿ, ಮಲೆನಾಡಿನ ವನರಾಜಿ ಹಾಗೂ ಪ್ರಕೃತಿ ಚಿತ್ರಣವೇ ಈ ಸಂಕಲನದ ಹಲವು ಪದ್ಯಗಳಲ್ಲಿರುವುದಾಗಿ ಈ ಕೃತಿಯ ಪ್ರಕಾಶಕರಾದ ಕೂಡಲಿ ಚಿಂದಂಬರಂ ಅವರ ಮಾತು. ಅದು ನಿಜವೂ ಹೌದು. ಆದರೆ ಅದರ ಒಳಗಡೆಯೇ ಇರುವ ಕ್ರಾಂತಿಕಾಳಿ ಎಂಬ ಕವಿತೆಯ ಗುಣ ಸ್ಫೋಟಕವಾದುದು. ಪ್ರಕೃತಿ ಸೌಂದರ್ಯದ ಬಗ್ಗೆ ಬರೆಯುತ್ತಲೇ ಕವಿ ಒಮ್ಮೆಲೇ ತನ್ನ ಪಥವನ್ನು ಬದಲಾಯಿಸಿ ಕ್ರಾಂತಿಕಾರಕವಾದ ಕವಿತೆ ಬರೆಯುವುದನ್ನು ಕಂಡಾಗ ಅಚ್ಚರಿಯೆನಿಸುತ್ತದೆ. ಪ್ರಕೃತಿ ಸೌಂದರ್ಯ, ಶೃಂಗಾರ, ಸುಕುಮಾರತೆ ಮಾತ್ರ ಕವಿತೆಯಲ್ಲಿ ಬರಬೇಕು ಎನಿಸಿದ ಹಿಂದೆಯೇ ಅದಷ್ಟು ಮಾತ್ರ ಕವಿತೆಯೇ ಎನ್ನುವ ಪ್ರಶ್ನೆಯೂ ಮೂಡುತ್ತದೆ.

ನವೋದಯ ಎನ್ನುವ ಕಾಲಘಟ್ಟವೊಂದನ್ನು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಗುರುತಿಸುತ್ತಾ ಅದಕ್ಕೆ ಕೆಲವು ಸಾಮಾನ್ಯ ಲಕ್ಷಣಗಳನ್ನು ಸೂಚಿಸುವುದು ರೂಢಿಯಲ್ಲಿದೆ. ನವೋದಯದ ಮುಖ್ಯ ಲಕ್ಷಣಗಳೆಂದರೆ, ಪ್ರಕೃತಿಪ್ರೇಮ, ದೇಶಪ್ರೇಮ, ಭಾಷಾಪ್ರೇಮ, ಗಂಡು ಹೆಣ್ಣಿನ ನಡುವಿನ ಶೃಂಗಾರ, ಭಕ್ತಿ ಅಧ್ಯಾತ್ಮ, ವೈಚಾರಿಕತೆ, ಭಾವನಾತ್ಮಕತೆ ಹೀಗೆ ಹಲವು ಅಂಶಗಳನ್ನು ಗುರತಿಸುವುದು ರೂಢಿ. ಆದರೆ ಅದೇ ಕಾಲದಲ್ಲಿ ರಚನೆಯಾಗಿರುವ ಕ್ರಾಂತಿಕಾರಕ ಗುಣವುಳ್ಳ ಇಂತಹ ಕವಿತೆಗಳನ್ನು ಎಲ್ಲಿ ನಿಲ್ಲಿಸುವುದು? ಅಂದರೆ ನವೋದಯದ ಲಕ್ಷಣಕ್ಕೆ ಹೊರತಾದ ಈ ಕವಿತೆ ಮತ್ತು ಇಂತಹುದೇ ಆಶಯವುಳ್ಳ ಗೊಬ್ಬರ ಕವಿತೆಯನ್ನು ನವೋದಯದ ಲಕ್ಷಣಕ್ಕೆ ಹೊಂದಿಸುವುದು ಹೇಗೆ? ಅಂದಾಗ ಯಾಂತ್ರಿಕವಾದ ವಿಭಾಗೀಕರಣದಲ್ಲಿ ಎಲ್ಲರನ್ನೂ ವರ್ಗೀಕರಿಸುವುದು ಸಾಧ್ಯವಿಲ್ಲ ಎಂಬುದು ಮನದಟ್ಟಾಗುತ್ತದೆ.

ಕುವೆಂಪು ಅವರು ಕೇವಲ ರಾಜಕೀಯ ಸ್ವಾತಂತ್ರ್ಯವನ್ನು ಸ್ವಾತಂತ್ರ್ಯವೆಂದು ಭಾವಿಸಿಲ್ಲ, ಸಾಮಾಜಿಕ ಅನಿಷ್ಟಗಳ ಸಂಕೋಲೆಯಿಂದ ಬಿಡುಗಡೆಯಾಗುವುದು ಮುಖ್ಯವೆಂದು ಭಾವಿಸಿದ್ದರೆನ್ನುವುದನ್ನು ಅವರ ಅನೇಕ ಕವಿತೆಗಳಿಂದ ತಿಳಿಯಬಹುದು. ಅಂತಹ ಆಶಯವುಳ್ಳ ಒಂದು ಕವಿತೆಯಿದು. ಕ್ರಾಂತಿಕಾಳಿ ಕವಿತೆಯ ವಿಶ್ಲೇಷಣೆ ಮಾಡುತ್ತಲೇ ಈ ಕವಿತೆಯನ್ನು ಯಾವ ಯಾವ ಆಯಾಮಗಳಲ್ಲಿ ತೆರೆದುಕೊಳ್ಳುತ್ತದೆ ಎನ್ನುವುದನ್ನು ನೋಡಬಹುದು. ಕವಿಯ ಜವಾಬ್ದಾರಿಯೇನು? ಸಮಾಜದ ಪರವಾಗಿ ಪ್ರಗತಿಪರ ಮನೋಧರ್ಮದಿಂದ ಏನು ಮಾಡಬಹುದು ಎಂಬುದನ್ನು ಈ ಕವಿತೆ ಸೂಚಿಸುತ್ತದೆ. ಒಂದು ರೀತಿಯಲ್ಲಿ ಕಾವ್ಯ ರಚನೆಯ ಉದ್ದೇಶವನ್ನು ನಿರೂಪಿಸುತ್ತದೆಯೆಂದು ಹೇಳಬಹುದು.

ಈ ಕವಿತೆಯ ಹೆಸರಿನಲ್ಲಿಯೇ **'ಕ್ರಾಂತಿ'** ಪದವಿದೆ. ಶೀರ್ಷಿಕೆ ಬಲು ಅರ್ಥಪೂರ್ಣವಾದುದು. ಭಾರತೀಯ ಪರಂಪರೆಯಲ್ಲಿ ಕಾಳಿ ಒಬ್ಬ ಉಗ್ರದೇವತೆ. ಕಾಳಿ ಕ್ರಾಂತಿ ಎಂಬ ವಿಶೇಷಣದೊಂದಿಗೆ ಕಾಣಿಸಿಕೊಂಡಾಗ ಅವಳ ಉಗ್ರಸ್ವರೂಪ ಇನ್ನೂ ಹೆಚ್ಚುತ್ತದೆ. ಕ್ರಾಂತಿಕಾಳಿ ತನ್ನ ಕೈಯ್ಯ ಕತ್ತಿಯನ್ನು ಎತ್ತಿ ಕವಿಯ ಎದೆಗೆ ಗುರಿಮಾಡಿ ಹಿಡಿದಿದ್ದಾಳೆ, ಈ ಚಿತ್ರಣ ಕವಿತೆಯಲ್ಲಿ ಸೊಗಸಾಗಿ ಮೂಡಿಬಂದಿದೆ ಎಂದರೆ ಅಪಚಾರವಾದೀತು. ಆ ಸಂದರ್ಭಕ್ಕೆ ಉಚಿತವಾಗಿದೆ ಎನ್ನುವುದು ಸರಿಯಾದೀತೇನೋ ಆ ಸಾಲುಗಳನ್ನೇ ಇಲ್ಲಿ ಉದ್ಧರಿಸಬಹುದು ಕವಿತೆಯ ಆರಂಭ ಹೀಗಿದೆ :

ಕ್ರಾಂತಿಕಾಳಿ ಕಠಾರಿಯಂ ನನ್ನೆದೆಗೆ ಕುರಿತು
ಝಳಪಿಸುತೆ, ಬದ್ಧಭ್ರುಕುಟಿ ಕೋಪದಲಿ ನಿಂತು
ದಂಷ್ಟ್ರ ಘರ್ಷಣರವಂ ಪೊಣ್ಮೆ ಗಜರಿದಳಿಂತು

ಚಿತ್ರ ಕಣ್ಮುಂದೆ ಕಟ್ಟುತ್ತದೆ ಕಾಳಿಯ ವರ್ಣನೆ. ಆಕೆಗೆ ಕೋಪ ಬಂದಿದೆ ಎಂಬುದನ್ನು ಅಲ್ಲಿಯ ಒಂದೊಂದು ಪದವೂ ಅಭಿನಯಿಸಿ ತೋರುತ್ತದೆ. ಪುಬ್ಬುಗಂಟಿಕ್ಕೆ ಹಲ್ಲುಕಡಿಯುತ್ತಾ ಗರ್ಜಿಸುತ್ತಿರುವ ಆಕೆ ತನ್ನ ಕೈಯ ಕತ್ತಿಯನ್ನು ಕವಿಯ ಎದೆಗೆ ಗುರಿಮಾಡಿ ಹಿಡಿದಿದ್ದಾಳೆ. ಕುವೆಂಪು ಸಂಸ್ಕೃತ ಭೂಯಿಷ್ಠ ಭಾಷೆಯಲ್ಲಿ ಬರೆಯುತ್ತಾರೆ ಎಂಬುದೊಂದು ಮಾತಿದೆ. ಹೌದು ಈ ಕವಿತೆಯಲ್ಲಿ ಹಲವು ಸಂಸ್ಕೃತ ಪದಗಳು ಬಂದಿವೆ. ಆದರೆ ಅವು ಕೇವಲ ಪಾಂಡಿತ್ಯ ಪ್ರದರ್ಶನಕ್ಕಾಗಿ ಇಲ್ಲಿ ತಂದು ಹಾಕಿದವುಗಳಲ್ಲ, ಬಹುಶಃ ಆ ಪದಗಳಿಗೆ ಬದಲಾಗಿ ಕನ್ನಡ ಪದಗಳನ್ನು ಬಳಸಿದ್ದರೆ ಕವಿತೆಗೆ ಈಗಿರುವ Force ಸಾಧ್ಯವಾಗುತ್ತಿರಲಿಲ್ಲ. ಆ ಪದಗಳು ಉಂಟುಮಾಡುವ ಪರಿಣಾಮ ತೀವ್ರತರವಾದದ್ದು. ಅಂದರೆ ಆ ಕೋಪದ ತೀವ್ರತೆ ಅನುಭವಕ್ಕೆ ಬರುವಲ್ಲಿ ಈ ಪದಗಳು ತುಂಬ ಪರಿಣಾಮಕಾರಿಯಾಗಿ ದುಡಿದಿವೆ.

'ದಂಷ್ಟ್ರ ಘರ್ಷಣ ರವಂ' ಎನ್ನುವುದಕ್ಕೆ ಬದಲಾಗಿ ಹಲ್ಲುಕಡಿಯುವ ಸದ್ದು ಎಂದು ಬಳಸಿದ್ದರೆ ಸಪ್ಪೆಯಾಗುತ್ತಿತ್ತು.

ಕವಿಯನ್ನು ಆಕೆ ತರಾಟೆಗೆ ತೆಗೆದುಕೊಳ್ಳಲು ಕಾರಣವಿದೆ. ಕವಿ ತನಗೆ ಕೊಟ್ಟ ಕಾರ್ಯದ ಮಹತ್ವವನ್ನು ಜವಾಬ್ದಾರಿಯನ್ನೂ ಲೆಕ್ಕಿಸದೆ ಕವಿತೆಯನ್ನು ಹಾಳುಗೆಡವಿದ್ದು ಕೋಪಕ್ಕೆ ಕಾರಣ.

'ಓ ದ್ರೋಹಿ ಕವಿಯೆ ನಿನಗಿತ್ತಾಣತಿಯ ಮರೆತು
ಕ್ಲೀಬತನದಲಿ ಹೆಣ್ಣು ಸೋಬಾನೆಗಳ ಹಾಡಿ
ಪಾಳ್ಗೆಯ್ದೆ ಕಜ್ಜಮಂ'

ಕವಿಯನ್ನು ದ್ರೋಹಿ ಎಂದು ಸಂಬೋಧಿಸುತ್ತಾ, ಕೊಟ್ಟ ಆಜ್ಞೆಯನ್ನು ಮರೆತು ಕಾರ್ಯವನ್ನು ಹದಗೆಡಿಸಿದವನು. ಹೆಣ್ಣು ಸೋಬಾನೆ ಹಾಡುತ್ತ ಎಲ್ಲವನ್ನು ವ್ಯರ್ಥಾಲಾಪದಲ್ಲಿ ಕಳೆದು ಹೋದವನು ಕ್ಲೀಬ ಎಂಬ ಸಂಸ್ಕೃತ ಪದಕ್ಕೆ ನಪುಂಸಕ, ಹೇಡಿ, ಸೋಮಾರಿ, ಜಿಪುಣ ಹೀಗೆ ಹಲವು ಅರ್ಥಗಳಿವೆ. ಅದಕ್ಕೆ ತನವೆಂಬ ಭಾವವಾಚಕ ಸೇರಿಸಿದ್ದರಿಂದ ವ್ಯಕ್ತಿತ್ವದ ಅಧಃಪತನವನ್ನು ಚೆನ್ನಾಗಿ ಸೂಚಿಸುತ್ತದೆ. ಮುಂದುವರಿದಂತೆ ಶುಕ ಪಿಕ ಬೆಳದಿಂಗಳು ತಂಗಾಳಿ ಮುಂಗುರುಳು ಹೀಗೆ ಹತ್ತು ಹಲವು ಸೌಂದರ್ಯಾತ್ಮಕ ಸಂಗತಿಗಳನ್ನು ಮನಸ್ಸನ್ನು ಉದ್ರೇಕಿಸುವ ವಿಷಯಗಳನ್ನೇ ಕುರಿತು ಬರೆದಿರುವುದು ಹಾಗೂ ದೊರೆಗಿರೆಗಳಜ್ಜಿ ಕತೆಯನ್ನು ಹೇಳಿ ನಿನಗೆ ಕೊಟ್ಟ ಕೆಲಸವನ್ನು ಹಾಳು ಮಾಡಿದ್ದೀ ಎಂದು ಗರ್ಜಿಸುತ್ತಾಳೆ. ದೊರೆಗಿರೆ ಎಂಬುದನ್ನು ಗಮನಿಸಬೇಕು, ಕಾವ್ಯದ ನಾಯಕ ರಾಜನೂ, ಸತ್ಕುಲ ಪ್ರಸೂತನೂ, ಮಹಾಋಷಿ ಅಥವಾ ಸುಂದರನೂ ಆಗಿರಬೇಕು ಎನ್ನುತ್ತಾರಲ್ಲ ಆದರೆ ಕುವೆಂಪುವಿಗೆ ದೊರೆ ಗಿರೆಯೆನಿಸುತ್ತಾನೆ.

ಸಾಮ್ರಾಜ್ಯಶಾಹಿ ಹಾಗೂ ರಾಜಶಾಹಿಯ ಬಗೆಗೆ ವಿರೋಧವಿದ್ದು ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಟ್ಟವರು ಕುವೆಂಪು. ರಾಜನ ಕತೆ ಅಡಗೂಲಜ್ಜಿ ಹೇಳುವ fantasyಯಿಂದ ಕೂಡಿದ ರೋಮಾಂಚನಕಾರಿ ಕತೆ ಇವುಗಳನ್ನು ಹೇಳುವುದಕ್ಕೆ ನಿನ್ನ ಶಕ್ತಿಯನ್ನು ಬಳಸಿ ಹಾಳುಮಾಡಿದೆಯಾ ? ಎಂಬ ಸಂಕಟ ಕಾಳಿದಾಗಿದೆ. ಅವಾಸ್ತವವಾದ ಸತ್ಯಕ್ಕೆ ದೂರವಾದ ಕನಸಿನಲೋಕದಲ್ಲಿ ತೇಲಿಸುವ ಇಂತಹ ಕತೆಗಳನ್ನು ಹೇಳುವುದು ಕವಿಯ ಕೆಲಸವಲ್ಲ. ಸಾಂಪ್ರದಾಯಿಕವಾಗಿ ಬಂದ ಕಾವ್ಯ ಚಿಂತನೆಗಳ ಸೌಂದರ್ಯತತ್ವವನ್ನು ಇಲ್ಲಿ ಭಗ್ನಗೊಳಿಸಿದ್ದಾರೆ ಕುವೆಂಪು. ಹಾಗಾದರೆ ಕವಿ ಯಾವುದರ ಕುರಿತು ಹಾಡಬೇಕು ಎಂಬ ಪ್ರಶ್ನೆಗೆ ಕಾಳಿ ಹೇಳುವ ಉತ್ತರ :

'ಬಡತನಂ ಗೊಬ್ಬರಂ ಕತ್ತಿ ಗುದ್ದಲಿ ಹಾರೆ
ಬೆವರು ನೆತ್ತರ್ಗಳಂ ಗಾನಗೈವುದು ನಿನ್ನ
ಕರ್ತವ್ಯವಿಂದು'

ಯಾವ ವಿಷಯಗಳನ್ನು ಕಾವ್ಯಮೀಮಾಂಸೆ ಕಾವ್ಯಯೋಗ್ಯ ವಸ್ತುವಲ್ಲ ಎಂದು ವರ್ಜಿಸಿದೆಯೊ ಅವುಗಳನ್ನು ಕುರಿತೇ ಹಾಡಬೇಕಾದ್ದು ಕವಿಯ ಕರ್ತವ್ಯವೆಂಬುದು ಇಲ್ಲಿಯ ಅನಿಸಿಕೆ. ಅಂದರೆ ಈ ಕಾಲಕ್ಕೆ ಅಗತ್ಯವಾದ, ಜನಪರವಾದ ಮತ್ತು ಶ್ರಮಜೀವಿಗಳ ಕಷ್ಟಸುಖಗಳ ದುಃಖ ದುಮ್ಮಾನಗಳ ಕುರಿತು ಹಾಡುವುದು ಕವಿಯ ಇಂದಿನ ತುರ್ತು ಎಂದು ಪರ್ಯಾಯ ಕಾವ್ಯಚಿಂತನೆಯನ್ನು ಕವಿ ಕಟ್ಟಿಕೊಡುತ್ತಾರೆ. ಇಲ್ಲಿ ಗೊಬ್ಬರ ಕವಿತೆಯ ಸಾಲುಗಳನ್ನು ನೆನಪಿಸಿಕೊಳ್ಳಬಹುದು. ಇಂತಹ ಕ್ರಾಂತಿಕಾರಕ ವಿಚಾರಗಳು ಅಂದು ಹಲವರ ನಿದ್ದೆಗೆಡಿಸಿರಲೂ ಸಾಕು. ಮುಂದಿನ ಸಾಲುಗಳು ಕಾವ್ಯ ಆಸ್ವಾದನೆಯನ್ನು ಕುರಿತಂತಿವೆ.

.......ಹಾ! ಹೊಟ್ಟೆಗಿಲ್ಲದೆ ಅನ್ನ
ಬಡಜನರು ಸಾಯುತಿರೆ. ರಸಗಂಧವನು ತೋರೆ
ತಣಿವಹುದೆ?

ಹಸಿದವರ ಮುಂದೆ ರಸ ತುಂಬಿದ ಕಾವ್ಯವಾಚಿಸಿದರೆ ಹಾಡಿದರೆ ಅವರಿಗೆ ಸೊಗಸುತ್ತದೆಯೆ? ಹಸಿವು ನೀಗುತ್ತದೆಯೆ? ಎಂಬ ಪ್ರಶ್ನೆ ಬಹಳ ಮಾರ್ಮಿಕವಾದುದು. ಕುವೆಂಪು ತಾನೊಬ್ಬ ರಸಋಷಿ ಎಂದು ಕರೆಯಿಸಿಕೊಳ್ಳಲು ಇಷ್ಟಪಡುತ್ತಾರೆ. ಆದರೆ ಈ ಕವಿತೆಯಲ್ಲಿ ರಸ ಇತ್ಯಾದಿಗಳ ಬಗ್ಗೆ ತಾತ್ಸಾರವಿದೆ. ಯಾವ ಹೊತ್ತಿಗೆ ಏನು ಅಗತ್ಯವೊ ಅದು ದೊರೆಯುವಂತೆ ಮಾಡುವುದು ಪ್ರತಿಯೊಬ್ಬ ಜವಾಬ್ದಾರಿಯುತ ನಾಗರಿಕನ ಕರ್ತವ್ಯ. ಆ ಹೊಣೆಗಾರಿಕೆಯಲ್ಲಿ ಕವಿಯ ಪಾಲು ದೊಡ್ಡದು. ಜನ ಹಸಿದು ಬಳಲುತ್ತಿರುವಾಗ ಅವರ ನೋವಿಗೆ ಸ್ಪಂದಿಸುವ ಬದಲು ಸಂವೇದನಾ ಹೀನತೆಯಿಂದ ವರ್ತಿಸುವುದರ ಅನೌಚಿತ್ಯವನ್ನು ಖಂಡಿಸುತ್ತಾರೆ. (ಇಂದಿನ ದಿನಗಳಲ್ಲಿ ಅಪಾಯಕ್ಕೆ ತುತ್ತಾದವರನ್ನು ರಕ್ಷಿಸುವುದರ ಬದಲು ಅವರ ಫೋಟೋ ಸೆರೆ ಹಿಡಿದು ಯಾವ ಯಾವ ಕೋನದಲ್ಲಿ ಸೆರೆಹಿಡಿದರೆ ಪರಿಣಾಮಕಾರಿಯಾಗಬಹುದು ಎಂಬುದನ್ನು ಯೋಚಿಸುವ ಕಡು ಮೂರ್ಖರನ್ನು ಕುರಿತೂ ಈ ಮಾತು ಹೇಳಬಹುದು.) ಕಲೆಗಾಗಿ ಕಲೆಯಲ್ಲ ಜೀವನಕ್ಕಾಗಿ ಕಲೆ ಎಂಬ ತತ್ವವನ್ನು ನಂಬಿದ ಕುವೆಂಪು ಅವರ ನಂಬಿಕೆ ಈ ಕವಿತೆಯಲ್ಲಿ ರೂಪು ತಾಳಿ ನಿಂತಿದೆ.

ಈ ಕವಿತೆಗೆ ಕ್ರಾಂತಿಕಾಳಿ ಎಂಬ ಹೆಸರು ಯಾಕಿಟ್ಟರು? ನಮ್ಮಲ್ಲಿ ದುರ್ಗೆ, ಚಾಮುಂಡಿ, ಚಂಡಿ ಮುಂತಾಗಿ ಅನೇಕ ಉಗ್ರದೇವಿಯರಿರುವಾಗ ಕಾಳಿಯನ್ನೇ ಯಾಕೆ ಕುರಿತಿದ್ದಾರೆ ಎಂದು ಕುತೂಹಲವುಂಟಾಗುವುದು ಸಹಜ. ಕಾಳಿದಾಸನ

ಕತೆಯನ್ನು ನೆನಪಿಸಿಕೊಂಡರೆ ಈ ಪ್ರಶ್ನೆಗೆ ಉತ್ತರ ಹೊಳೆಯುತ್ತದೆ. ಅಜ್ಞಾನಿಯಾಗಿದ್ದ ಕುರುಬನಿಗೆ ಜ್ಞಾನವನ್ನು ಪ್ರತಿಭೆಯನ್ನು ಅನುಗ್ರಹಿಸಿದವಳು ಕಾಳಿಯೇ ಹೊರತು ಬೇರಾರೂ ಅಲ್ಲ. ಅಂದಿನಿಂದಲೇ ಅವನು ಕಾಳಿದಾಸನಾಗಿ ಲೋಕ ಪ್ರಸಿದ್ಧಿ ಪಡೆಯಲು ಕಾರಣಳಾದವಳು ಕಾಳಿಕಾದೇವಿಯೇ ಅಲ್ಲವೇ.

ಈ ಕವಿತೆ ಪುಟ್ಟದಾದರೂ ಅದರ ಆಶಯ ಬಲು ದೊಡ್ಡದು. ಈಗಾಗಲೇ ಶತಮಾನಗಳಿಂದ ಗೌರವಕ್ಕೆ ಪಾತ್ರವಾದ ಕಾವ್ಯಮೀಮಾಂಸೆಯ ವಿಷಯವನ್ನು ತಿರುವು ಮುರುವು ಮಾಡಿ ಹೊಸ ರೀತಿಯ ಕಾವ್ಯಚಿಂತನೆಯನ್ನು ಮಂಡಿಸಿದ ಧೀರೋದಾತ್ತರು ಕವಿ ಕುವೆಂಪು Romanticism ನ ಪ್ರಭಾವ ಹಾಗೂ ವರ್ಡ್ಸ್‌ವರ್ತ್ ಕವಿಯ ಪ್ರಭಾವಕ್ಕೆ ಒಳಗಾದವರು ಎಂಬ, ರಮ್ಯವಾದ ಧೋರಣೆಯದು. ನವೋದಯ ಕಾಲಘಟ್ಟ ಆದರ್ಶವಾದಿ ಭಾವಗೀತೆಗಳ ಕಾಲವೆಂಬ ಹೇಳಿಕೆಗಳನ್ನು ಸಾರಾಸಗಟಾಗಿ ಹೇಳುತ್ತ ಮುಂದುವರಿಯುವಾಗ ಕುವೆಂಪು ಅವರ ಬೆಂಕಿಯುಂಡೆಯಂತಹ ಇಂತಹ ಕವಿತೆಗಳು ಈ ಮೇಲಿನ ಅಭಿಪ್ರಾಯಗಳನ್ನು ಪುನರ್ ಪರಿಶೀಲಿಸುವಂತೆ ಪ್ರೇರಿಸುತ್ತವೆ.

ಈ ಕವಿತೆಯ ಇನ್ನೊಂದು ವಿಶೇಷವೆಂದರೆ, ಇಲ್ಲಿರುವ ಪ್ರತಿಯೊಂದು ಪದವೂ ಅಮೂಲ್ಯವಾದುದು. ಯಾವುದೇ ಒಂದು ಪದವೂ ಕೂಡ ಅನಗತ್ಯವೆನಿಸುವುದಿಲ್ಲ. ಒಂದು ಪದದ ಬದಲಾಗಿ ಇನ್ನೊಂದು ಅದೇ ಅರ್ಥಕೊಡುವ ಪದವನ್ನು ಸೇರಿಸುವುದೂ ಸಾಧ್ಯವಿಲ್ಲ. ಅಂತಹ ಔಚಿತ್ಯ ಪ್ರಜ್ಞೆಯಲ್ಲಿ ಈ ಕವಿತಾ ಹಾರವನ್ನು ಕುವೆಂಪು ಕೋದಿದ್ದಾರೆ. ಪ್ರತಿಯೊಂದು ಪದವೂ ಕೂಡ Best Words in a Best order ಎನ್ನುವಂತೆ ಸಂಯೋಜನೆಗೊಂಡಿರುವ ಪದಗಳು, ಕುವೆಂಪು ಸುಕುಮಾರ ಕವಿಯಲ್ಲ ರನ್ನನಂತೆ ಓಜಸ್ಸು ತುಂಬಿದ ಶಕ್ತಕವಿ ಎಂಬುದನ್ನು ಈ ಒಂದು ಪಟ್ಟ ಕವಿತೆ ನಿರೂಪಿಸುತ್ತದೆ.

□□□

೯. ಕನ್ನಡ ಪ್ರಬಂಧ ಸಾಹಿತ್ಯಕ್ಕೆ ಸುನಂದ ಬೆಳಗಾಂವಕರ ಅವರ ಕೊಡುಗೆ

– ಪದ್ಮಾವತಿ ಎನ್.

ಸುನಂದ ಬೆಳಗಾಂವಕರ ಹುಟ್ಟಿದ್ದು ಧಾರವಾಡದಲ್ಲಿ. ಇಂಗ್ಲಿಷ್ ಸಾಹಿತ್ಯದಲ್ಲಿ ಎಂ.ಎ ಪದವಿ. ಪತಿ ಬಿಂದುರಾವ್ ಬೆಳಗಾಂವಕರ. ಬಹುತೇಕ ಜೀವನ ಬೇರೆ ಬೇರೆ ದೇಶಗಳಲ್ಲಿ. ಕವಿ ರಾಮಚಂದ್ರ ಶರ್ಮಾ ಅವರ ಪ್ರೇರಣೆ ಒತ್ತಾಸೆಯೊಂದಿಗೆ ಲುಸಾಕಾ ಕನ್ನಡ ಸಂಘದ ಮುಖಾಂತರ ಸಾಹಿತ್ಯ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿದ್ದಾರೆ.

ಇಲ್ಲಿಯವರೆಗೂ ಸುನಂದ ಅವರು 'ನಾಸು', 'ಝುವಾದಿ' ಎಂಬ ಎರಡು ಕಾದಂಬರಿಗಳನ್ನು, 'ಶಾಲ್ಮಲಿ' ಎಂಬ ಕವನ ಸಂಕಲನವನ್ನು, 'ಮೃದ್ಗಂಧ' ಎಂಬ ಕಥಾ ಸಂಕಲನದ ಜೊತೆಗೆ 'ಕಜ್ಜಾಯ', 'ಕೈತುತ್ತು' ಮತ್ತು 'ಕೊಡುವುದೇನು? ಕೊಂಬುದೇನು?' ಎಂಬ ಮೂರು ಪ್ರಬಂಧ ಸಂಕಲನಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ಕೊಡುಗೆಯಾಗಿ ನೀಡಿದ್ದಾರೆ.

೧೯೭೨ರಲ್ಲಿ ಕಜ್ಜಾಯ ಎಂಬ ಮೊದಲ ಪ್ರಬಂಧ ಸಂಕಲನದೊಂದಿಗೆ ಸಾಹಿತ್ಯ ಕೃಷಿಯಲ್ಲಿ ತೊಡಗಿ ಸೊರಗಿಕೊಂಡಿದ್ದ ಪ್ರಬಂಧ ಪ್ರಕಾರಕ್ಕೆ ಚೈತನ್ಯವನ್ನು ನೀಡಿದವರಲ್ಲಿ ಸುನಂದ ಅವರು ಪ್ರಮುಖರಾಗುತ್ತಾರೆ. ಇವರ ಕಜ್ಜಾಯ ಪ್ರಬಂಧ ಸಂಕಲನ ಹತ್ತು ಪ್ರಬಂಧಗಳನ್ನೊಳಗೊಂಡಿದೆ. ತನ್ನ ಮೊದಲ ಬರವಣಿಗೆಯಲ್ಲಿಯೇ ಲೇಖಕಿ ಓದುಗರಿಗೆ ಅಪ್ಯಾಯಮಾನರಾಗುತ್ತಾರೆ. ಇವರ ಬರವಣಿಗೆಯಲ್ಲಿ ಅನಗತ್ಯ ಆಕ್ರೋಶವಾಗಲೀ, ಅಬ್ಬರವಾಗಲಿ ತೋರ್ಪಡಿಸದೇ, ಪುರುಷರೆಲ್ಲ ಶೋಷಕರು, ಸ್ತ್ರೀಯರೆಲ್ಲ ಶೋಷಿತರು ಎಂಬ ಕಪ್ಪು ಬಿಳುಪಿನ ಚಿತ್ರಣ ನೀಡದೆ ಬದುಕಿನ ಅನಂತ ಮುಖಗಳನ್ನು ತಮ್ಮ ಲೇಖನಿಯಲ್ಲಿ ಚಿತ್ರಿಸಿದ್ದಾರೆ.

'ಕಜ್ಜಾಯ' ಪ್ರಬಂಧಗಳನ್ನು ಸ್ಥೂಲವಾಗಿ ಎರಡು ರೀತಿಯಾಗಿ ವಿಗಂಡಿಸಬಹುದು. 'ಸ್ಮೃತಿ', 'ರುಚಿ', 'ಮೊಸಗವಲಕ್ಕಿ' ಪ್ರಬಂಧಗಳನ್ನು ಒಂದು ಗುಂಪಿಗಿಟ್ಟು ನೋಡಿದಾಗ, ಸಾಮಾನ್ಯವಾಗಿರುವಂತಹ ಒಂದಂಶ ಗೋಚರಿಸುತ್ತದೆ.

ಇವಿಷ್ಟು ಪ್ರಬಂಧಗಳು ಲೇಖಕಿ ಮತ್ತು ಆಕೆಯ ತಂದೆ ತಾಯಿ ಅಥವಾ ಅಜ್ಜಿ ಅವರಿವರ ಅನುಭವಗಳನ್ನು ಅಡಗಿಸಿಕೊಳ್ಳುವ ಮಾನವೀಯ ಪ್ರಜ್ಞೆಗಳಾಗಿ ಒಡಮೂಡಿವೆ. 'ಸ್ಮೃತಿ'ಯಲ್ಲಿ ಕಾಲೇಜು ದಿನಗಳ ನೆನವರಿಕೆ. ರುಚಿಯಲ್ಲಿ ಅವ್ವನು ಉಣಬಡಿಸಿದ್ದರ ಬಗೆಗೆ ತಂದೆಯ ಪ್ರತಿಕ್ರಿಯೆ. ಹಲವು ತಿನಿಸುಗಳ ಗುಣಾವಗುಣಗಳ ಮಥನದಿಂದ ತುಂಬಿದ ಪ್ರಬಂಧ. ತಂದೆಗೆ ಮಾವನಿಗೆ ಪ್ರಿಯವಾದ ಮೊಸರವಲಕ್ಕಿಗೆ ಲೇಖಕಿಯ ಬದುಕಿನಲ್ಲಿ ವಿಶೇಷ ಸ್ಥಾನ. ಗಣೇಶ ಚತುರ್ಥಿಯ ಹಿಂದಿನ ದಿನ ಮಾವನವರ ತಿಥಿ, ಮಾರನೆಯ ದಿನ ತಂದೆಯವರದ್ದು, ಗಣೇಶನ ಹಬ್ಬದ ದಿನ ಮೊಸರವಲಕ್ಕಿ ಪ್ರಸಾದ. ಹೀಗೆ ಈ ಪ್ರಬಂಧಗಳಲ್ಲಿ ಸುನಂದಾ ಅವರು ಸಾಂಸಾರಿಕ ಸಂದರ್ಭಗಳ ಮೌಲ್ಯಗಳನ್ನು ರೂಪಿಸುತ್ತಾರೆ.

ಎರಡನೆಯ ಜಾತಿಗೆ ಅಥವಾ ಗುಂಪಿಗೆ ಸೇರಿದ ಇನ್ನಿತರ ಪ್ರಬಂಧಗಳಾದ 'ಋಣ', 'ಗೋವಿನ ಕಥೆ', 'ಬೆಣ್ಣೆಯ ಗಡಿಗೆ', 'ಮಣ್ಣು', 'ಹೆಣ್ಣು– ಭೂಮಿ', ಹಾಗೂ 'ಹತ್ತು ಐದು' ಪ್ರಬಂಧಗಳಲ್ಲಿ ತನ್ನ ಕುಟುಂಬದ ಹೊರಗಿನವರ ಅನುಭವಗಳನ್ನು ಚಿತ್ರಿಸುವ ಮೂಲಕ ತನ್ನದಲ್ಲದ ಅನುಭವಗಳನ್ನು ತನ್ನದಾಗಿಸಿಕೊಳ್ಳುವುದರ ಜೊತೆಗೆ ಸಹೃದಯರ ಮನಸೂರೆಗೊಳ್ಳುತ್ತಾರೆ.

'ಋಣ' ದಲ್ಲಿ ತಾಯ್ತನದ ಉತ್ಕಟ ಬಯಕೆಯ ತೀವ್ರತೆಯನ್ನು ಅನಾವರಣಗೊಳಿಸಿದ್ದಾರೆ. ಇಲ್ಲಿಯ ಅಂಜನಾಳ ಮೂಲಕ ವಿಶಿಷ್ಟ ಜಗತ್ತಿನ ಅನಾವರಣ ಮಾಡುತ್ತಾರೆ. ಮಾತೃತ್ವದ ಕಲ್ಪನೆಗೆ ವಿಶಿಷ್ಟತೆಯನ್ನು ತಂದು ಕೊಡುವ ಮೂಲಕ ತಾಯಿ ಮಗುವಿನ ಚಿತ್ರಣವನ್ನು ಅನಾವರಣಗೊಳಿಸುತ್ತಾರೆ. ಲೇಖಕಿ ಇಲ್ಲಿ ತಾಯ್ತನದ ಬಗೆಗೆ ಪ್ರಶ್ನೆಗಳನ್ನ ಎತ್ತುತ್ತಾರೆ. ಲೋಕದ ರೂಢಿಗೆ ವಿರುದ್ಧವಾಗಿ ನಡೆಯುವ ಅಂಜನಾಳ ಬಗ್ಗೆ ನೆರೆಹೊರೆಯವರಲ್ಲಿ ಅಷ್ಟೇ ಅಲ್ಲ ತನ್ನ ನಾದಿನಿಯು ಪ್ರತಿರೋಧ ವ್ಯಕ್ತಪಡಿಸುತ್ತಾರೆ. ಆಗ ಅಂಜನಾ "ಯಾವಾಗ ನಾಯಿ ನನ್ನ ಮಗ ಆಗೋದಿಲ್ಲ. ಆಗ ನಿಮ್ಮ ಮಗ ನನ್ನ ಮಗಾ ಹ್ಯಾಂಗ ಆಗ್ತಾನ" ಎನ್ನುತ್ತ ಈ ಪ್ರಪಂಚವೇ ಸ್ವಾರ್ಥದ ಮೇಲೆ ನಿಂತಿದೆ. ನನ್ನ ಬದುಕನ್ನ ನಾನು ಬದುಕುತ್ತೇನೆ. ಇನ್ನೊಬ್ಬರಿಗಲ್ಲ ಎಂಬ ಚಾಟಿ ಏಟನ್ನು ನೀಡುತ್ತಾಳೆ.

"ಬೆಣ್ಣೆ ಗಡಿಗೆ" ಪ್ರಬಂಧದ್ದಲ್ಲಿ ಗಂಡ ಹೆಂಡತಿಯ ಜೀವನ ಚಿತ್ರದೊಂದಿಗೆ ಗಂಡ ಹೆಂಡತಿಯನ್ನು ಮೀರಿದ ಸಂಬಂಧಗಳ ಅನಾವರಣ ಮಾಡುತ್ತಾರೆ. ಪುರುಷ ಪ್ರಧಾನತೆಯಲ್ಲಿ ಹೆಣ್ಣಿಗೊಂದು ನ್ಯಾಯ, ಗಂಡಿಗೊಂದು ನ್ಯಾಯ. ಇಂತಹ ಸಂದರ್ಭದಲ್ಲಿ ಹೆಣ್ಣು ಸೋಲುವುದೇ ಹೆಚ್ಚಾಗಿರುವ ಸಂದರ್ಭದಲ್ಲಿ ಲೇಖಕಿ ಗೌರಿಯ ಮುಖಾಂತರ ಅಂಬರವಿಲ್ಲದ ಪ್ರತಿರೋಧವನ್ನು ವ್ಯಕ್ತಪಡಿಸುತ್ತಾರೆ.

ಪಾರಂಪರಿಕವಾಗಿ ಬಂದ ಮೌಲ್ಯಗಳಲ್ಲಿ ಕೊಟ್ಟ ಹೆಣ್ಣು ಕುಲಕ್ಕ ಹೊರತು ಎಂಬ ಅಂಶವನ್ನು ಇಲ್ಲಿ ಗೌರಿಯ ತವರಿನವರು ತಿಳಿಯುತ್ತಾರೆ. ಆದ್ದರಿಂದ ವಿಧಿ ಇಲ್ಲದೆ ಗಂಡನ ಮನೆಗೆ ಬಂದ ಗೌರಿಯನ್ನು ಗೌಡರು ಮುಟ್ಟಲಿಕ್ಕೆ ಹೋದಾಗ ಗೌರಿ ನಿರಾಕರಿಸುತ್ತಾಳೆ. ಭರಮಿಯನ್ನು ಬಿಟ್ಟರೆ ಮಾತ್ರ ಸಾಧ್ಯ ಎಂದಾಗ ಗೌಡರು ನೀನು ಮನಸ್ಸಿಗೊಪ್ಪಿದ ಹೆಣ್ಣು, ಭರಮಿ ದೇಹಕ್ಕೊಪ್ಪಿದ ಹೆಣ್ಣು ಎಂದಾಗ ಗೌರಿ ತನ್ನ ದೇಹವನ್ನು ಗಂಡನಿಗೆ ಅರ್ಪಿಸುವ ಬದಲು ಕೊನೆಯವರೆಗೂ ಪ್ರತಿರೋಧ ವ್ಯಕ್ತಪಡಿಸುತ್ತಾಳೆ.

ಹೆಣ್ಣು-ಭೂಮಿ ಪ್ರಬಂಧದಲ್ಲಿ ನಿಂಗಣ್ಣಿಯ ಐಡೆಂಟಿಟಿಯ ಪ್ರಶ್ನೆ ತಂದೆಯೊಂದಿಗೆ ಹೊರತು ತಾಯಿಯೊಂದಿಗೆ ಅಲ್ಲ ಎಂಬ ವಿಭಿನ್ನ ಸ್ತರದ ಮೌಲ್ಯಗಳು ಸಮಾಜದಲ್ಲಿ ಮನೆಮಾಡಿಕೊಂಡಿರುವುದರಿಂದಲೇ ನಿಂಗಣ್ಣಿ ತನ್ನ ತಾಯಿಯನ್ನ ಕೊಲ್ಲುವುದಕ್ಕೆ ಪ್ರೇರಣೆ ನೀಡುತ್ತವೆ. ತಾಯಿಯನ್ನು ಕಳೆದುಕೊಂಡು ಅನಾಥೆಯಾದ ಸರಸಿ, ತಾಯಿ ಇದ್ದು ಇಲ್ಲದ ಸ್ಥಿತಿಯಲ್ಲಿರುವ ಗೋಪಿ. ಬಡತನದ ಬೇಗೆ, ಕುಟುಂಬದಲ್ಲಾಗುವ ತಲ್ಲಣಗಳನ್ನು ಹೊರ ಜಗತ್ತಿಗೆ ತೋರ್ಪಡಿಸದೆ ಬದುಕುವ ಗೋಪಿಯಂತ ವಿಶಿಷ್ಟ ವ್ಯಕ್ತಿಯನ್ನು ಚಿತ್ರಿಸಿದಷ್ಟೆ ಪ್ರಖರತೆಯಲ್ಲಿ ಸಿದ್ಧಪ್ಪ ತನ್ನ ನೋವು ಕಷ್ಟಗಳನ್ನೆಲ್ಲ ಮುಖದಲ್ಲೇ ತೊರ್ಪಡಿಸುವುದನ್ನು ಚಿತ್ರಿಸುತ್ತಾರೆ. ಹೀಗೆ ಪ್ರಬಂಧಗಾರ್ತಿ ಬದುಕನ್ನು ಅನಾವರಣಗೊಳಿಸುತ್ತಾರೆ.

ಎರಡನೇ ಜಾತಿಗೆ ಅಥವಾ ಗುಂಪಿಗೆ ಸೇರಿದ ಪ್ರಬಂಧಗಳಲ್ಲಿ ಬದುಕನ್ನೇ ತಲೆಕೆಳಗು ಮಾಡುವ ಸಾವಿನ ಚಿತ್ರಣವನ್ನು ಕೊಡುತ್ತ ಬದುಕಿನ ದುರಂತ ಪ್ರಜ್ಞೆ ಸಾವಿನಲ್ಲಿ ಅಡಗಿರುವುದನ್ನು ವ್ಯಕ್ತಪಡಿಸುತ್ತಾರೆ.

ಕೈತುತ್ತು ಹನ್ನೆರಡು ಪ್ರಬಂಧಗಳನ್ನೊಳಗೊಂಡ ಸಂಕಲನವಾಗಿದೆ. ಇದರಲ್ಲಿ ಪ್ರಬಂಧಗಾರ್ತಿ ತನ್ನ ತಂದೆಯ ತಾಯಿಯನ್ನು ಬರಹದ ಚೌಕಟ್ಟಿಗೆ ತರಲು ಪ್ರಯತ್ನಿಸಿದ್ದಾರೆ. ಇದು ಆ ಕಾಲದ ಬದುಕಿನ ಚಿತ್ರಣವು ಆಗಿದೆ. 'ಅಂತಿಂಥವಳಲ್ಲ ಈ ಅಜ್ಜಿ' ಪ್ರಬಂಧ ಅಜ್ಜಿಯ ಬದುಕಿನ ಬವಣೆಯ ಜೊತೆಗೆ ಬದುಕನ್ನು ಗೆದ್ದ ಧೀರೆಯಾಗಿ ಕಾಣಸಿಗುತ್ತಾಳೆ. ಲೇಖಕಿಯೇ ಪ್ರಸ್ತಾಪಿಸಿರುವಂತೆ ಈಕೆ "ಅರಿಷಡ್ ವೈರಗಳನ್ನು ಗೆದ್ದವಳಲ್ಲ, ಶಾಪಗ್ರಸ್ತ ದೇವತೆಯಂತೆ ಭೂಮಿಗಿಳಿದವಳಲ್ಲ. ಅವಳು ಮನುಷ್ಯಳು, ಕೇವಲ ಮನುಷ್ಯಳು, ಹೆಣ್ಣಾಗಿ ಹುಟ್ಟಿದ ಮೇಲೆ ಯಾವುದನ್ನು ಮಾಡಬೇಕು ಮಾಡಬಾರದು ಎಂದು ತಿಳಿದ ವಿವೇಕಿ" ಹಾಲಿನವಳ, ಸೊಪ್ಪಿನವಳ ಜೊತೆಗೆ ದಿನವೂ ಜಗಳವಾಡುವ, ತುಪ್ಪದ ಗಸಿಯ ಮೇಲೆ ಕುದಿ ನೀರು ಹಾಕಿ ಬಂದ ತುಪ್ಪವನ್ನು ಸಂಗ್ರಹಿಸಿಟ್ಟುಕೊಳ್ಳುವ ಅಜ್ಜಿ ನಮಗೆ ಲಂಕೇಶರ ಅವ್ವನನ್ನು ನೆನಪಿಗೆ ತರಿಸುವಂತಹವಳು.

'ತಾಯಿ ಗಂಗವ್ವನ ಏನೆಂದು ನೆನೆಯಲೆ' ಎಂಬ ಪ್ರಬಂಧದಲ್ಲಿ ಪತಿ ಮಧ್ವಾಚಾರ್ಯರು ತನ್ನನ್ನು ಬಿಟ್ಟು ಕಾಶಿಗೆ ಹೊರಟುಹೋದ ನಂತರ ಐದು ಚಿಕ್ಕ ಮಕ್ಕಳ ಬೇಡಿಯನ್ನು ಕಾಲಿಗೆ ತೊಟ್ಟು ಸದಾ ಬದುಕಿಗೆ ಮೂಖ ಮಾಡಿ ಜೀವನದ ಮಹಾಯಜ್ಞವನ್ನು ನಡೆಸಿದ ಮುತ್ತಜ್ಜಿಯ ಕಥೆ ಇದೆ. ಅವರಿವರ ಮನೆಗಳಲ್ಲಿ ಅಡಿಗೆ ಮಾಡಿ ಹಪ್ಪಳ ಸಂಡಿಗೆ ಮಾಡಿ "ಯಾರ ಮನೆಯಲ್ಲಿ ಯಾವುದೇ ಉಳಿದ ಊಟದ ವಸ್ತು ಕೊಟ್ಟರೆ ಮನೆಗೆ ಬಂದೊಡನೆ ಅದರ ರೂಪ ಬದಲಿಸಿ ಮಕ್ಕಳ ಹೊಟ್ಟೆಗೆ ಸರಿಯಾಗಿ ಕುಟ್ಟಿ ಬೇಯಿಸಿ ಕುದಿಸಿ ಕಲಸಿ ಹಾಕುವ ಕೆಲಸ ಅವಳದು" ಎಂದು ಮುತ್ತಜ್ಜಿಯ ಕೈಯ ನೈಪುಣ್ಯವನ್ನು ಕೊಂಡಾಡುತ್ತಾ, ಕ್ಷಯಿಸಿದ ಹುಳಿಯನ್ನು ಅಕ್ಷಯ ಮಾಡಿದ ಪ್ರಸಂಗವನ್ನು ಲೇಖಕಿ ನಿರೂಪಿಸುತ್ತಾರೆ. ಬಿಸಿಲು ನೆರಳಿನ ಬಾಲ್ಯ ಪ್ರಬಂಧದಲ್ಲಿ ನಿರೂಪಿತವಾಗಿರುವ ಅಜ್ಜಿಯ ಅನಾಥಪ್ರಜ್ಞೆಯ ಜೊತೆಗೆ ಅವಳನ್ನು ಜೋಪಾನ ಮಾಡಿದ ಕಕ್ಕ ಕಕ್ಕಿಯರ ಮನೆಯಲ್ಲಿ ಕಟ್ಟುನಿಟ್ಟಾಗಿ ತನ್ನ ಬಾಲ್ಯ ಕಳೆದ ಪ್ರಸಂಗವನ್ನು ನಿರೂಪಿಸುತ್ತ ಬಡವರ ಮನೆಯಲ್ಲೇ ಅಲ್ಲ ಶ್ರೀಮಂತರ ಮನೆಯಲ್ಲೂ ಇಂತಹ ಬದುಕು ಇದೆ ಎಂಬ ಸೂಕ್ಷ್ಮವನ್ನು ಚಿತ್ರಿಸುತ್ತಾರೆ.

'ತುಂಗೆ ದಡದ ಮಹಿಷಿ', 'ಹೂವಾಯಿತು ಮನ' ಪ್ರಬಂಧಗಳಲ್ಲಿ ಎರಡು ಜಗತ್ತುಗಳ ಅನಾವರಣ ಮಾಡುತ್ತಾರೆ. ಚಿಕ್ಕಪ್ಪನ ಅಧಿಕಾರ, ಶಿಸ್ತು, ಸಿಟ್ಟುಗಳ ಪುರುಷ ಜಗತ್ತಿನ ಜೊತೆಜೊತೆಗೆ ರಾಧ ಕಕ್ಕಿಯ ಅಂತಃಕರಣ, ಚೆಲುವನೂ ವಿದ್ಯಾವಂತನೂ ಆದ ಹುಡುಗನಿಗೆ ಹುಡುಗಿಯನ್ನು ಕೊಡಬೇಕೆನ್ನುವ ವಿಚಾರ ಹೆಣ್ಣು ಜಗತ್ತಿನದು.

ಬಡತನದ ಬೇಗೆಯಲ್ಲಿ ಬೆಂದರೂ ಎಂದೂ ಜೀವನದಿಂದ ವಿಮುಖರಾಗದೇ ಅನ್ಯೋನ್ಯತೆಯಿಂದ ಬದುಕಿದ ಅತ್ತೆ ಸೊಸೆಯರ, ಅಣ್ಣತಮ್ಮಂದಿರ ಸಾಮರಸ್ಯದ ಜೀವನ ಯಶಸ್ಸುಗೊಂಡ ಬಗೆಯ ಜೊತೆಗೆ ಅಸೂಯೆಯಿಂದ ಶ್ರೀಮಂತಿಕೆಗೆ ಆಸೆಪಟ್ಟು ಕಮಲೆಯನ್ನು ಕೊಲೆಮಾಡಿದ ಹೆಂಗಸಿನ ಚಿತ್ರಣವನ್ನು ಕೊಡುತ್ತಾರೆ. ಲೋಕದಲ್ಲಿ ಎಲ್ಲವೂ ಇದೆ ಎಂಬ ಚಿತ್ರಣವನ್ನು ನೀಡುತ್ತಾರೆ.

ಸುನಂದಾ ಅವರ ಮೂರನೆಯ ಪ್ರಬಂಧ ಸಂಕಲನ 'ಕೊಡುವುದೇನು? ಕೊಂಬುದೇನು?' ವ್ಯಕ್ತಿಚಿತ್ರಗಳ ಪ್ರಬಂಧವಾಗಿದೆ. ಇಲ್ಲಿ ಐತಿಹಾಸಿಕ ವ್ಯಕ್ತಿಗಳ ಚಿತ್ರಗಳಿಗೆ ಬದಲಾಗಿ ಅವರ ಕುಟುಂಬದ ಬೋಗಿಯಲ್ಲಿ ಕೆಲಕಾಲ ಜೊತೆಯಾಗಿ ಪಯಣಿಸಿ ಸಾಗಿ ಹೋದ ಸಾಮಾನ್ಯತಿ ಸಾಮನ್ಯ ವ್ಯಕ್ತಿಗಳ ಚಿತ್ರಣಗಳನ್ನೆ ಅಸಾಮಾನ್ಯತೆಯ ವ್ಯಕ್ತಿಯನ್ನಾಗಿಸಿದ್ದಾರೆ.

ಇಲ್ಲಿ ಈ ವ್ಯಕ್ತಿಗಳು ಬೆಳೆದ ವಾತಾವರಣ, ಅನುಭವಿಸಿದ ಬಡತನ, ಕಂಡ ಕಷ್ಟ ಕೋಟಲೆಗಳ ಹಿನ್ನೆಲೆಯನ್ನು ಅಭ್ಯಸಿಸಿ ಅದರೊಂದಿಗೆ ಅವರ ಗುಣಾವಗುಣ, ಸ್ವಭಾವ, ಪ್ರಾಮಾಣಿಕತೆ, ಅವರುಗಳು ಈ ಕುಟುಂಬದ ಮೇಲಿಟ್ಟಿರುವ ಪ್ರೀತಿ, ವಿಶ್ವಾಸ ಇತ್ಯಾದಿಗಳನ್ನು ಬದುಕಿನ ಘಟನೆಯೊಂದಿಗೆ ವಿಶ್ಲೇಷಿಸುತ್ತ, ಆ ಮೂಲಕ ಆಯಾ ವ್ಯಕ್ತಿಯನ್ನು ಪರಿಚಯಿಸುತ್ತ ಹೋಗುತ್ತಾರೆ. ಇಲ್ಲಿನ ಪ್ರತಿಯೊಬ್ಬ ವ್ಯಕ್ತಿಯೂ ಇವರ ಕುಟುಂಬದಲ್ಲಿ ಕಾಣಿಸಿಕೊಂಡಾಗಿನಿಂದ ಆರಂಭಿಸಿ ಯಾವುದೋ ರೀತಿಯಲ್ಲಿ ಕಣ್ಮರೆಯಾಗುವವರೆಗಿನ ಜೀವನ ಸಾರಾಂಶವನ್ನು ಈ ಪ್ರಬಂಧಗಳಲ್ಲಿ ವಿವರಿಸಲಾಗಿದೆ.

'ಶಲಕ್ಕ' ಬಾಲವಿಧವೆಯಾಗಿ ಕಾಣಿಸಿಕೊಂಡು ಸಾವನ್ನಪ್ಪುವವರೆಗೆ, 'ಹೊನಗನ್ನಿ'– ಹೊನಗನ್ನಿ ಸೊಪ್ಪು ಮಾರುತ್ತ ಬಂದು, ಎಲ್ಲಮ್ಮನ ಗುಡ್ಡದ ಮೇಲೆ ನವಿಲಿನ ಬೆನ್ನು ಹತ್ತಿ ಹಿಂಬಾಲಿಸಿ ನವಿಲುತೀರ್ಥದಲ್ಲಿ ಮುಳುಗುವವರೆಗೆ, ಪ್ರತಿದಿನ ಒಂದು ಕಡ್ಡಿ ಕಾಳಿನಷ್ಟು ಬೆಲ್ಲಾ ಕೊಡ್ರಿ ಎಂದು ಬೇಡುತ್ತ ಪರಿಚಯವಾಗುವ 'ಬೆಲ್ಲದ ಬ್ರಾಹ್ಮಣ' ಎಲಗುರಕ್ಕೆ ಹೋಗುವುದಾಗಿ ಹೇಳಿ, ಇವರ ಊರಿನಿಂದ ದೂರವಾಗುವವರೆಗೆ, ವಿಧವೆ ಎಂಬ ಪದದ ಅರ್ಥವೂ ತಿಳಿಯದಂತಹ ಬಾಲ್ಯಾವಸ್ಥೆಯಲ್ಲೇ ವಿಧವೆಯರಾಗಿ ಬಿಟ್ಟ ಸುನಂದಾ ಅವರ ತಾಯಿಯ ಸೋದರತ್ತೆ ಮತ್ತು ಕಕ್ಕಿ 'ರಾಜಕ್ಕ ಕಮಲಕ್ಕ' ಇವರುಗಳು ತಮ್ಮ ಪರಾವಲಂಬಿ ದೀರ್ಘ ಬದುಕುಗಳನ್ನು ಸಾವಿನಲ್ಲಿ ಮುಕ್ತಾಯಗೊಳಿಸುವವರೆಗೆ; ಉತ್ತಮ ಬ್ರಾಹ್ಮಣ ಮನೆತನದಲ್ಲಿ ಹುಟ್ಟಿ ಗುಡಿ ಪೂಜೆಗೆ ಮತ್ತು ಮಠದ ಆಸ್ತಿಗೆ ಪಾಲು ಹೊಂದಿದ್ದರೂ ಕ್ರಮೇಣ ಅವನತಿಗೊಳ್ಳುತ್ತ ಭಿಕ್ಷೆ ಬೇಡುತ್ತ ತಿರುಗುವ 'ಏಗ್ಯಾ (ರಘೋತ್ತಮ)'– ಕೋರ್ಟಿನ ಹತ್ತಿರ ಸತ್ತು ಬಿದ್ದ ಸುದ್ದಿ ಕೇಳುವವರೆಗೆ; ಪೇರಲ ಹಣ್ಣು ಕಿತ್ತು ಕೊಡುವದರಿಂದ ಮನೆಯ ಮಕ್ಕಳ ಮನಗೆದ್ದ ಇಪ್ಪತ್ತೈದು ವರ್ಷಗಳ ಕಾಲ ದುಡಿದ ಮನೆಯಾಳು 'ಅಲ್ಲಾಬಕ್ಷ'–ಈ ಲೇಖಲಿಯ ತಂದೆಯವರ ಚಪ್ಪಲಿಗಳನ್ನು ಪಾದುಕೆಗಳೆಂಬಂತೆ ಕೇಳಿ ಪಡೆದು ಇದ್ದಕ್ಕಿದ್ದಂತೆ ಹೇಳದೆ ಕಣ್ಮರೆಯಾಗುವವರೆಗೆ; ಹೂ ಮಾರುವ ಮಾಲಿ–ಇವರ ತಾಯಿಯು ಆಶೀರ್ವಾದ ಪಡೆದು ಮರೆಯಾಗುವವರೆಗೆ; ಮಕ್ಕಳಾಗದ ಕಾರಣಕ್ಕೆ ನಿಂಗೇಗೌಡರು ಮದುವೆಯಾಗುವ ಎರಡನೇ ಹೆಂಡತಿಯೊಂದಿಗೆ ತಾನೂ ಒಂದು ಮಗುವಿನ ತಾಯಿಯಾಗುವ 'ನೀಡುವ ಕೈ'ಯ ಮೊದಲ ಹೆಂಡತಿ ರತ್ನಮ್ಮ, ತನ್ನ ಆ ಸವತಿಯೊಂದಿಗೇ ಇನ್ನಿಲ್ಲವಾಗುವವರೆಗೆ; ಮನೆಯ ಪುರೋಹಿತರಾದ 'ಗೋವಿಂದಾಚಾರ'–ಪ್ರೀತಿ ವಿಶ್ವಾಸಕ್ಕೆ ಪಾತ್ರರಾದವರು ಪ್ರೀತಿಯಿಂದ ಬದುಕುವದು ವರ, ದ್ವೇಷದಿಂದ ಬದುಕುವದು ಶಾಪ ಎಂದು ನಂಬಿ ಪ್ರೀತಿಯನ್ನೇ ಆರಾಧ್ಯದೈವವಾಗಿ ಬಾಳಿದವರ

ಅಂತ್ಯಕಾಲದವರೆಗೆ; ಹದಿಹರೆಯ ವಿಧವೆ ಎರಡು ಮಕ್ಕಳ ತಾಯಿ, ಮನೆಯ ಕೆಲಸದಾಳು 'ರಾಜವ್ವ' – ಮೈಮುರಿದು ದುಡಿಯುವ, ಸಭ್ಯ ಹೆಣ್ಣುಮಗಳು, ಮನಸುಖರಾಯಳು, ದುಃಖ ಮತ್ತು ಬಡತನದಿಂದ ಕುಡಿತದ ಚಟಕ್ಕೆ ಸಿಲುಕಿಕೊಂಡು, ಚೇಷ್ಟೆಗೆಂದು ಮುಚ್ಚಿಟ್ಟ ಉಂಗುರ ಕೇಳುವ ಮುನ್ನ ತಿರುಗಿ ಕೊಟ್ಟ ಪ್ರಾಮಾಣಿಕಳು. ತಾಯಿಯವರು ತೀರಿಕೊಂಡಾಗ ಅವರ ತಮ್ಮನಿಗೆ, "ಶಿವಾ ನಮ್ಮನ್ನ ಕೆಡವತಾನ್ರಿ ನಾವು ಎದ್ದನಿಲ್ಲಬೇಕ್ರಿ" ಎಂಬ ಸಾಂತ್ವನದ ನುಡಿಗಳು ತೂಕದ ಮಾತಾಗುವವರೆಗೆ; ಇವರೆಲ್ಲರ ಮುಖ್ಯವಾದ ಜೀವನದ ಸಂಗತಿಗಳನ್ನು ಅವರೊಂದಿಗೆ ಈ ಲೇಖಕಿಯ ವಿಶ್ವಾಸದ ಸಾಹಚರ್ಯವನ್ನು ಮತ್ತು ಕಳಕೊಂಡಾಗಿನ ದುಃಖವನ್ನು ವಿವರಿಸಿದ್ದು ಇವು ನಿಜವಾಗಿ ನಡೆದ ಘಟನೆಗಳೂ, ಜೊತೆಯಲ್ಲಿದ್ದು ನೋಡಿದ ವ್ಯಕ್ತಿಗಳೂ ಆಗಿವೆ. ಇದರಲ್ಲಿ ಬರುವ ಯಾರೂ ಮಹಾನ್ ವ್ಯಕ್ತಿಗಳಲ್ಲ. ತೀರ ಸಾಮಾನ್ಯರಾದ ಜನಗಳು. ಇದರಲ್ಲಿ ಹೆಣ್ಣು ಮಕ್ಕಳಿದ್ದಾರೆ. ವಿವಿಧ ಜಾತಿಯವರಿದ್ದಾರೆ. ಭಿನ್ನ ಮತದವರಿದ್ದಾರೆ. ಜಾತಿಯವರಿದ್ದಾರೆ. ಈ ವ್ಯಕ್ತಿಚಿತ್ರಗಳ ಸಂಕಲನ. ಒಂದು ರೀತಿಯಲ್ಲಿ ಹೊಸ ಪ್ರಯೋಗವೇ ಆಗಿವೆ.

ಅಜ್ಜಿ, ಅಮ್ಮ, ತಂದೆ, ಗಂಡ ಅಥವಾ ಸ್ವತಃ ಲೇಖಕಿ, ಯಾರೇ ಆಗಲಿ, ಇವರ ಇಡೀ ಕುಟುಂಬದವರ ಹೃದಯದ ಬಟ್ಟಲಲ್ಲಿ, ನೂರಾರು ಜನಕ್ಕೆ ಹಂಚುವಷ್ಟು ಮಾನವೀಯ ವಾತ್ಸಲ್ಯ ತುಂಬಿರುವ ಕಾರಣ ಅಥವಾ ಪ್ರತಿ ವ್ಯಕ್ತಿಯೊಳಗಿನ ಒಳಿತನಷ್ಟೇ ನೋಡುವ ಸ್ವಭಾವವಿರುವ ಕಾರಣ, ಇವರ ಪರಿಚಿತ ಜಗತ್ತಿನಲ್ಲಿ ಪ್ರವೇಶಿಸುವ ಎಲ್ಲರೂ ಇವರಿಗೆ ಒಳ್ಳೆಯವರೇ ಮತ್ತು ಈ ಎಲ್ಲ ವ್ಯಕ್ತಿಗಳೂ ಇವರನ್ನು ಇವರ ಇಡೀ ಕುಟುಂಬವನ್ನು ವಾತ್ಸಲ್ಯದಲ್ಲಿ ಮೀಯಿಸಿದಂತಹ ಅತ್ಯಂತ ವಿಶ್ವಾಸಿಕ ವ್ಯಕ್ತಿಗಳೇ ಆಗಿ ಕಾಣಿಸಿದ್ದಾರೆ. ನಿಜವೆಂದರೆ, ಇವರುಗಳು ಪ್ರಪಂಚದ ಪ್ರತಿ ವ್ಯಕ್ತಿಯನ್ನು ಅತ್ಯಂತ ವಿಶ್ವಾಸದಿಂದ ನೋಡುವಂತಹ ಜನರು. ಹಿಂದಿಯಲ್ಲಿ ಒಂದು ಮಾತಿದೆಯಲ್ಲಾ 'ಆಪ್ ಭಲಾ ತೋ ಜಗ್ ಭಲಾ', ಎಂದು? ಹಾಗೆಯೇ. ಪ್ರಪಂಚದ ಕಣ್ಣಿಗೆ ಕೆಟ್ಟದ್ದೆಂದು ಅನಿಸುವ ಅವರ ಕುಕೃತ್ಯಗಳನ್ನೂ, ಅದರ ಹಿಂದಿನ ಕಾರಣ, ಹಿನ್ನಲೆ, ಪರಿಸರ ಇತ್ಯಾದಿಗಳನ್ನು ಪರಿಕಿಸಿ ಅನುಕಂಪ ಪಡುವಂತಹ ಬಹು ದೊಡ್ಡ ಗುಣದವರು.

ಈ ಸಂಕಲನದಲ್ಲಿ ಸುನಂದಾರವರ ಕುಟುಂಬದ ಎಲ್ಲ ಸದಸ್ಯರೂ ತೋರುವ ಪ್ರೀತಿ ಎಂದರೆ, ಅದು ಒಬ್ಬ ಮನುಷ್ಯ, ಇನ್ನೊಬ್ಬನನ್ನು ತನ್ನಂತೆಯೇ ಮನುಷ್ಯನೆಂದು ಭಾವಿಸಿ ತೋರಿಸುವಂತಹ ಪ್ರೀತಿ, ಇಲ್ಲಿ ಈ ಲೇಖಕಿಯ ಪ್ರೀತಿ ಕೇವಲ ಮನುಷ್ಯ ವರ್ಗಕ್ಕಷ್ಟೇ ಸೀಮಿತವಾಗಿಲ್ಲ. ಪ್ರಾಣಿ, ಪಕ್ಷಿ ಮತ್ತು ಮರಗಿಡಗಳವರೆಗೂ

6

ವಿಸ್ತರಿಸಿರುವಂಥದು. ಆದ್ದರಿಂದಲೇ ಅವರು ಅಲಾಬಕ್ಷ್ಯನ ಬಗ್ಗೆ ಬರೆದಿರುವ ಪ್ರಬಂಧದಲ್ಲಿ, ಅವರ ಮನೆಯ ಪಕ್ಕದ ಪೇರಲ ಗಿಡದಲ್ಲಿ ಕಪ್ಪು ಮಂಗಗಳು ಸೇರಿಕೊಂಡು ಮಾಡುತ್ತಿದ್ದ ಗಲಾಟೆಗೆ ಹೆದರಿ, ಆ ಗಿಡವನ್ನು ಕಡಿದು ಹಾಕಿದಾಗ; ಹಕ್ಕಿಗಳು, ಇಣಚಿಗಳು, ಗೆಳತಿಯರು ಎಲ್ಲರೂ ತನ್ನಿಂದ ದೂರವಾದಂತೆ, ತಾನು ಒಂಟಿಯಾದಂತೆ, ತಾಯಿಯ ಸಾಂತ್ವನದ ನುಡಿಗಳೂ ಇವರ ಹೃದಯವನ್ನು ಸ್ಪರ್ಶಿಸಲಾಗದಂತೆ ದುಃಖಿತಪ್ತರಾಗುತ್ತಾರೆ. ಊಟ ಮಾಡಲಾಗದೇ ಅಳುತ್ತಾರೆ.

ಹೀಗೆ ಸುನಂದಾ ಬೆಳಗಾಂವಕರ ಅವರ ಪ್ರಬಂಧಗಳು ಆತ್ಮೀಯ ಗುಣಗಳನ್ನು ಒಳಗೊಂಡು ನವುರಾದ ಹಾಸ್ಯದೊಂದಿಗೆ ಓದುಗರಿಗೆ ಭಾವಗೀತೆಯ ಭಾವತೀವ್ರತೆಯನ್ನು ತಂದುಕೊಡುತ್ತವೆ.

□□□

೧೦. ಎ.ಎಸ್. ಮೂರ್ತಿ ಅವರ ಮಕ್ಕಳ ನಾಟಕಗಳ ತಾತ್ತ್ವಿಕ ನೆಲೆಗಳು

– *ಗಿರೀಶ್ ಎಂ.ಬಿ.*

ಒಂದು ಕಥೆ ಹೀಗಿದೆ; ಮನೆಯೊಂದರಲ್ಲಿ ಬೆಂಕಿ ಬಿದ್ದಿದ್ದು, ಅದರೊಳಗೆ ಒಬ್ಬ ವ್ಯಕ್ತಿ ಗಾಢ ನಿದ್ರೆಯಲ್ಲಿದ್ದನು. ಜನರು ಅವನನ್ನು ಕಿಟಕಿಯಿಂದ ಹೊರತರಲು ಪ್ರಯತ್ನಿಸಿದರು, ಆಗಲಿಲ್ಲ. ಬಾಗಿಲಿನಿಂದ ಹೊರತರಲು ಪ್ರಯತ್ನಿಸಿದರು, ಅದೂ ಆಗಲಿಲ್ಲ. ಅವನು ತುಂಬಾ ಎತ್ತರವಾಗಿಯೂ ದಪ್ಪಗೂ ಇದ್ದನು. ಅವರು ಸಾಕಷ್ಟು ನಿರಾಶರಾದಾಗ, ಯಾರೋ ಒಬ್ಬರು ಸೂಚಿಸಿದರು, 'ಅವನನ್ನು ಎಬ್ಬಿಸಿ, ಆಗ ಅವನೇ ಹೊರಗೆ ಹೋಗುವನು'.[೧]

ಚಿಕ್ಕ ಸ್ವರೂಪದ ಈ ಕಥೆ ಮಹತ್ತರವಾದ ಹಲವು ಆಯಾಮಗಳನ್ನು ಒಳಗೊಂಡಿದೆ. ಈ ಕಥೆಯ ನಮ್ಯತೆ ಗುಣವನ್ನು ಮಕ್ಕಳ ವ್ಯಕ್ತಿತ್ವ ರೂಪಿಸುವ ಕಾರ್ಯಕ್ಕೂ ಅನ್ವಯ ಮಾಡಿಕೊಳ್ಳಬಹುದು. ಮಕ್ಕಳನ್ನು ಎಲ್ಲಾ ಬಂಧನಗಳಿಂದ ಮುಕ್ತಗೊಳಿಸಬೇಕೆಂದರೆ ಅವರನ್ನು ಎಚ್ಚರಿಸಿದರೆ ಸಾಕು! ಅವರು ಸ್ವಇಚ್ಛೆಯ ಆಧಾರದ ಮೇರೆಗೆ ತಮ್ಮ ಬದುಕನ್ನು ಸುಂದರಗೊಳಿಸಿಕೊಳ್ಳುತ್ತಾರೆ. ಪೋಷಕರ ಪೋಷಕತ್ವದ ಅಧಿಕಾರತನ ಅವರನ್ನು ಮುಂದೆ ಸಾಗಿಸುವುದಾದರೆ ಅವರ ಏಳಿಗೆ ಕುಂಠಿತಗೊಳ್ಳಬಹುದು. ಅಲ್ಲದೆ, ಭವಿಷ್ಯದ ಅಪಾಯಕಾರಿ ಸನ್ನಿವೇಶಗಳು ಮಕ್ಕಳ ಜಡತ್ವವನ್ನು ಧೀಮಂತಗೊಳಿಸಿ ಅವರ ಸೃಜನಶೀಲ ಬದುಕಿಗೆ ಉಬ್ಬು ತಗ್ಗುಗಳಾಗಬಹುದು. ಈ ಹಿನ್ನೆಲೆಯಲ್ಲಿ ಎ.ಎಸ್. ಮೂರ್ತಿ ಅವರು ತಮ್ಮ ನಾಟಕಗಳಿಂದ ಪೋಷಕರನ್ನು, ಸಮಾಜವನ್ನು ಎಚ್ಚರಿಸುವ ಕೆಲಸ ಮಾಡಿದ್ದಾರೆ.

ಎ.ಎಸ್. ಮೂರ್ತಿ ಅವರು ಮಕ್ಕಳ ರಂಗಭೂಮಿಯ ಪ್ರಾಮಾಣಿಕ ಪ್ರಜ್ಞೆ, ಬೀದಿನಾಟಕ ಚಳವಳಿಗಳ ಮೂಲಕ ಗುರುತಿಸಿಕೊಂಡಿದ್ದ ಇವರು ಮಕ್ಕಳೆಲ್ಲರು ರಂಗಭೂಮಿಯಲ್ಲಿ ನಿರಂತರವಾಗಿ ತರಬೇತಿಗೆ ಒಳಗಾಗಿ ತಮ್ಮ ವ್ಯಕ್ತಿತ್ವವನ್ನು ಧೀಮಂತಗೊಳಿಸಿಕೊಳ್ಳಬೇಕೆಂಬ ಆಶಯದೊಂದಿಗೆ ೧೯೭೯ರಲ್ಲಿ ಬೆಂಗಳೂರಿನ

ಹನುಮಂತನಗರದಲ್ಲಿ ಮಕ್ಕಳ ಸಂಸ್ಥೆ 'ಬಿಂಬ'ವನ್ನು ಹುಟ್ಟುಹಾಕಿದರು. ಈಗ ಎ.ಎಸ್. ಮೂರ್ತಿ ಅವರು (೧೬.೮.೧೯೨೯– ೧೮.೧೨.೨೦೧೨) ದೈಹಿಕವಾಗಿ ನಮ್ಮೊಂದಿಗೆ ಇಲ್ಲದಿದ್ದರೂ 'ಬಿಂಬಮಕ್ಕಳ' ಮೂಲಕ ಜೀವಂತವಾಗಿದ್ದಾರೆ. ಅವರು ಸ್ಥಾಪಿಸಿದ 'ಬಿಂಬ' ಸಂಸ್ಥೆ ಇಂದಿಗೂ ಮಕ್ಕಳಲ್ಲಿರುವ ಅಗಮ್ಯ ಪ್ರತಿಭೆಯನ್ನು, ಸೃಜನಶೀಲ ಮನಸ್ಸನ್ನು ಅನಾವರಣ ಮಾಡಲು ಕ್ರಿಯಾಶೀಲವಾಗಿದೆ.

ಎ.ಎಸ್. ಮೂರ್ತಿ ಅವರು ರಂಗಸಂಸ್ಥೆ ನಡೆಸುವುದರ ಜೊತೆಗೆ ಮಕ್ಕಳ ನಾಟಕಗಳನ್ನು ಬರೆದಿದ್ದಾರೆ. ಅವರು ಬರೆದಿರುವ '೫ ಮಕ್ಕಳ ನಾಟಕಗಳು' ಪುಸ್ತಕದಲ್ಲಿ ಹೆಸರೇ ಸೂಚಿಸುವಂತೆ ಐದು ನಾಟಕಗಳಿವೆ. ೧. ಮಂತ್ರವಾದಿ ೨. ಓ ನನ್ನ ಮರವೇ ೩. ಚಿನ್ನದ ಚೆಂಡು ೪. ಹಕ್ಕಿ ಹಾಡು ೫. ಕಾಶಿ – ಕಿಟ್ಟಿ. ಈ ನಾಟಕಗಳು ತಮ್ಮದೇ ಆದ ಭಿನ್ನ ಮಾದರಿಯ ಕಥಾ ಹಂದರವನ್ನು ಹೊಂದಿವೆ. ಕೃತಿಕಾರತರು ತಮ್ಮ ಕೃತಿಯಲ್ಲಿ ವಿಶೇಷವಾದ ತಾತ್ತ್ವಿಕ ನೆಲೆಗಳನ್ನು ನಿರ್ಮಾಣ ಮಾಡಿ, ಅವುಗಳನ್ನು ಸಾಧಿಸುವ ನಿಟ್ಟಿನಲ್ಲಿ ರಂಗ ಪ್ರಯೋಗಕ್ಕೆ ಒಳಪಡಿಸಿ, ಒಂದು ಆಯಾಮದ ಕೆಲಸವನ್ನು ಪೂರೈಸಿದ್ದಾರೆ.

ನಿರ್ದೇಶಕನ ದೃಷ್ಟಿಯಲ್ಲಿ ನಾಟಕಕೃತಿ ರಂಗಪ್ರಯೋಗಕ್ಕೆ ಒಳಪಡುವುದರಿಂದ ಅರ್ಥಪೂರ್ಣ ಅಭಿವ್ಯಕ್ತಿ ಸಾಧ್ಯ ಎಂಬ ಅಭಿಪ್ರಾಯದ ಹಿನ್ನೆಲೆಯಲ್ಲಿ ತಾನು ರಚಿಸಿದ, ಅಥವಾ ಇತರರು ರಚಿಸಿದ ನಾಟಕಗಳನ್ನು ಪ್ರಯೋಗಕ್ಕೆ ಒಳಪಡಿಸುವಾಗ ನಾಟಕ ಬದಲಾವಣೆಗೆ ಒಳಪಡುವುದು ಸಹಜಕ್ರಿಯೆ. ಆದರೆ ನಾಟಕದ ವಸ್ತು, ಆಶಯ ಮತ್ತು ತಾತ್ತ್ವಿಕ ನೆಲೆಗಳು ಬದಲಾಗುವುದಿಲ್ಲ. ಅವುಗಳು ಮತ್ತೆ ಮತ್ತೆ ಪ್ರಾಧಾನ್ಯತೆಗೆ ಒಳಪಡುತ್ತವೆಯೇ ಹೊರತು ಮಂಕಾಗುವುದು ವಿರಳ.

ಬೆಂಗಳೂರಿನ ಹನುಮಂತನಗರದ 'ಬಿಂಬ' ನಾಟಕ ತಂಡ ಪ್ರದರ್ಶನಗಳ ಮೂಲಕ ತನ್ನನ್ನು ತಾನು ಹೆಚ್ಚು ಪ್ರಯೋಗಕ್ಕೆ ಒಳಪಡಿಸಿಕೊಳ್ಳುತ್ತಿರುವ ರಂಗ ಮಂದಿರ. ನಾಟಕ ಪ್ರದರ್ಶನಗಳಿಂದ ಒಬ್ಬ ನೋಡುಗನ ದೃಷ್ಟಿಯೊಳಗೆ ಜನಜಾಗೃತಿ ಮೂಡಿಸುವ ಕೆಲಸ ಹೇಗೆ ಸ್ವೀಕಾರವಾಗುತ್ತದೆ ಎಂಬ ಪ್ರಮಾಣದ ಏರಿಳಿತಗಳು ಗೊತ್ತಾಗುತ್ತವೆ. ನಾಟಕದ ಸಾರ್ಥಕಮಾರ್ಗಸೂಚಿ ದಕ್ಕುತ್ತದೆ.

ನಾಟಕದ ಯಶಸ್ಸು ನಿಲ್ಲುವುದು ಅದು ಪ್ರದರ್ಶನಗೊಂಡ ಒಟ್ಟು ಮೊತ್ತದ ಲೆಕ್ಕದಲ್ಲಿ. ಪ್ರದರ್ಶನವೂ ಕೂಡ ಒಂದು ಪ್ರಮಾಣೀಕೃತ ಮಾದರಿ. ಈ ಕೃತಿಯ ಟಿಪ್ಪಣಿ ಭಾಗದಲ್ಲಿ (ಪುಟ –x, xi, xii) ಈ ರೀತಿ ಉಲ್ಲೇಖವಾಗಿದೆ.

ಮಂತ್ರವಾದಿ – ೨೫ ಬಾರಿ ರಂಗಕ್ಕೆ ಬಂದಿರುವ ನಾಟಕವಿದು.

ಓ ನನ್ನ ಮರವೇ – 'ಬಿಂಬ'ದಿಂದ ೫೦ ಬಾರಿ ಪ್ರದರ್ಶನಗೊಂಡ ಜನಪ್ರಿಯ ಮಕ್ಕಳ ನಾಟಕ.

ಚಿನ್ನದ ಚೆಂಡು – ಇದು 'ಬಿಂಬ'ದಿಂದ ಆರು ಬಾರಿ ರಂಗಕ್ಕೆ ಬಂದಿದೆ.

ಹಾಡು ಹಕ್ಕಿ – 'ಬಿಂಬ' ಈ ನಾಟಕವನ್ನು ಐದು ಬಾರಿ ಅಭಿನಯಿಸಿದೆ.

ಕಾಶಿ – ಕಿಟ್ಟಿ – 'ಬಿಂಬ' ಈ ನಾಟಕವನ್ನು ನಾಲ್ಕು ಬಾರಿ ಪ್ರದರ್ಶಿಸಿದೆ.

(ಈ ಪುಸ್ತಕ ಮುದ್ರಣಗೊಳ್ಳುವ ಮೊದಲೇ ಇಷ್ಟೊಂದು ಜನಪ್ರಿಯತೆ ಸಿಕ್ಕಿರುವುದು ವಿಶೇಷ.)

ಈ ಎಲ್ಲಾ ಸಾರ್ಥಕತೆಯ ಹಿನ್ನೆಲೆಯಲ್ಲಿ ಎ.ಎಸ್. ಮೂರ್ತಿ ಅವರ ಮಕ್ಕಳ ನಾಟಕಗಳ ತಾತ್ತ್ವಿಕ ನೆಲೆ ಯಾವುವು? ಹೇಗೆ ಅಭಿವ್ಯಕ್ತಿಗೊಂಡಿವೆ? ಎಂಬ ವಿಷಯದ ಮೇಲೆ ವಿಮರ್ಶಾತ್ಮಕ ಸಂಶೋಧನೆಯ ಲಿಖಿತ ಮಂಡನೆ ಇಲ್ಲಿದೆ. ಇಲ್ಲಿರುವ ಪ್ರತಿಯೊಂದು ನಾಟಕವನ್ನು ಬಿಡಿ ಬಿಡಿಯಾಗಿ ಬಿಡಿಸಿ ನೋಡಿ ಅನಂತರ ಎಲ್ಲ ನಾಟಕಗಳ ಒಟ್ಟು ತಾತ್ತ್ವಿಕ ಹಂದರವನ್ನು ಕಟ್ಟಿಕೊಡುವ ಪ್ರಯತ್ನ ಇಲ್ಲಿದೆ.

೧. ಕಾಯಕ ತತ್ವ

ಎ.ಎಸ್. ಮೂರ್ತಿ ಅವರ 'ಮಂತ್ರವಾದಿ' ಮತ್ತು 'ಚಿನ್ನದ ಚೆಂಡು' ನಾಟಕಗಳು ಪ್ರಧಾನವಾಗಿ ಶ್ರಮ ಸಂಸ್ಕೃತಿಯನ್ನು, ಕಾಯಕ ತತ್ವವನ್ನು ಸುಲಭ ಗ್ರಾಹ್ಯ ನೆಲೆಯಲ್ಲಿ ದರ್ಶನಕ್ಕೆ ಒಳಪಡಿಸುತ್ತವೆ.

ಮಂತ್ರವಾದಿ

ಬಡವ ಸೋಂಪನ ಬದುಕಿನ ಸುತ್ತ ಹೆಣೆದಿರುವ ಈ ನಾಟಕದ ಕಥಾವಸ್ತುವಿನ ಅಂತಿಮ ನೋಟ ಮಕ್ಕಳಾದಿಯಾಗಿ ಎಲ್ಲರಿಗೂ ಅನ್ವಯಿಸುತ್ತದೆ. ತಾನು ಬಡವನೆಂಬ ಒಂದೇ ಕಾರಣಕ್ಕೋಸ್ಕರ ಶ್ರೀಮಂತ ಮಕ್ಕಳ ಆಟ – ಕೂಟಗಳಿಂದ ಬೇರಾಗುವ ಸೋಂಪನಿಗೆ ತನ್ನ ಅಜ್ಜನು ಕೊಟ್ಟ ಮಾಂತ್ರಿಕ ಕೊಳಲಿಂದ ಶ್ರೀಮಂತನಾಗುವ ಅವಕಾಶ ಲಭಿಸುತ್ತದೆ. ಇದಕ್ಕೆ ಮಂತ್ರವಾದಿಯ ಮಾರ್ಗದರ್ಶನವೂ ಕೂಡ ಇರುತ್ತದೆ. ಸೋಂಪನ ಬಡತನದ ಬದುಕು ಸಿರಿತನದೆಡೆಗೆ ಹೋಗುವ ಸಂದರ್ಭ ಕ್ಲಿಷ್ಟಕರವಾಗಿರದೆ (ಶ್ರಮರಹಿತ) ಸಲೀಸು ಆಗಿರುತ್ತದೆ. ಸುಖದ ಸುಪ್ಪತ್ತಿಗೆಯಲ್ಲಿ ಮೆರೆಯುವ ಸೋಂಪನು ತಾನು ಬಂದ ಹಾದಿಯನ್ನೇ ಧಿಕ್ಕರಿಸಿ ದರ್ಪ ತೋರುವ, ಕೃತಘ್ನನಾಗುವ ಸನ್ನಿವೇಶಕ್ಕೆ ಒಳಗಾಗುತ್ತಾನೆ. ಮಂತ್ರವಾದಿಯು ಈ ವರ್ತನೆಯಿಂದ ಮುಜುಗರಕ್ಕೆ ಒಳಗಾಗಿ ಶ್ರಮರಹಿತ ಫಲಕ್ಕೆ ಯಾವುದೇ ಬೆಲೆ ಇಲ್ಲ. ಏನಿದ್ದರೂ ಬೆವರು ಸುರಿಸುವ ಫಲವೇ ಅಂತಿಮ ಎಂಬ ಸಂದೇಶವನ್ನು ವ್ಯಕ್ತಪಡಿಸುತ್ತಾನೆ. ಭೋಗ ಭಾಗ್ಯಗಳಿಂದ ಕೂಡಿದ ಜೀವನ ಕ್ಷಣಾರ್ಧದಲ್ಲಿಯೇ ಇಲ್ಲವಾಗಿ ಶ್ರಮದ ಕಡೆಗೆ ತಿರುಗುವುದು ಈ ನಾಟಕದ ಕಥಾವಸ್ತು.

ಚಿನ್ನದ ಚೆಂಡು

ಹಾಸಿಗೆ ಇದ್ದಷ್ಟು ಕಾಲುಚಾಚುವ ರೈತಾಪಿ ಕುಟುಂಬದಲ್ಲಿ ದುಡಿಮೆಗೆ ಬೆಲೆ ಕೊಡುವ ಮನೆಯ ಯಜಮಾನ ಒಂದೆಡೆಯಾದರೆ, ಹಾಯಾಗಿ ಬದುಕನ್ನು ಬಯಸುವ ಹೆಂಡತಿ ಮಕ್ಕಳು ಒಂದೆಡೆ. ಈ ಕುಟುಂಬಕ್ಕೆ ಬೇಸಾಯದಲ್ಲಿ ಭಕ್ತಿ ಇದ್ದ ಕಾರಣವಾಗಿ ಆಗಂತುಕ ವ್ಯಕ್ತಿಯೊಬ್ಬ ಪ್ರವೇಶವಾಗುತ್ತಾನೆ. ಆತಿಥ್ಯ ಸ್ವೀಕರಿಸಿ ತನ್ನ ಬಳಿಯಲ್ಲಿದ್ದ 'ಚಿನ್ನದ ಚೆಂಡ'ನ್ನು ವರವಾಗಿ ಬದಲಾಯಿಸಿ, ಕೇಳುವುದಿದ್ದರೆ ಏನಾದರೂ ಮೂರೇ ಮೂರು ವರಗಳನ್ನ ಕೇಳಬೇಕೆಂಬ ನಿಬಂಧನೆ ವಿಧಿಸಿ' ಒಳಿತಾಗಲಿ ಎಂದು ಹಾರೈಸಿ ಹೋಗುತ್ತಾನೆ.

'ಆಸೆ ದುರಾಸೆ ಆದಾಗ ತಮ್ಮ ಬಳಿ ಇದ್ದ ವರವೂ ಕೂಡ ಶಾಪವಾಗುತ್ತದೆ' ಎಂಬ ನಿಜಾಂಶದಲ್ಲಿ ಘಟನೆಗಳು ಜರುಗುತ್ತವೆ. ಅಂತ ಸಂಕಷ್ಟ ಸ್ಥಿತಿಯನ್ನು ಎದುರಿಸಿ ಅವರಿಂದ ಪಾರಾಗುವ ಮತ್ತು ಕುಳಿತುಕೊಂಡು ಬೇಡಿದರೆ ಯಾವ ವರವೂ ಯಶಸ್ವಿಯಾಗುವುದಿಲ್ಲ ಎಂಬ ಕಥಾವಸ್ತುವನ್ನು ಒಳಗೊಂಡ ಈ ನಾಟಕ ದುಡಿಮೆಗೆ ಬೆಲೆ ಕೊಡುತ್ತದೆ.

'ಮಂತ್ರವಾದಿ' ಮತ್ತು 'ಚಿನ್ನದ ಚೆಂಡು' ಎರಡು ನಾಟಕಗಳು ಮಾಯಾವಸ್ತುಗಳ ಮೂಲಕ (ಕೊಳಲು ಮತ್ತು ಚಿನ್ನದ ಚೆಂಡು) ಫ್ಯಾಂಟಸಿ ಜಗತ್ತನ್ನು ಸೃಷ್ಟಿಸಿ ಆ ಮೂಲಕ ವಾಸ್ತವ ಲೋಕದ ಅರಿವನ್ನು ದರ್ಶನ ಮಾಡುವ ಕ್ರಿಯೆ ನಿಜಕ್ಕೂ ಅರ್ಥಪೂರ್ಣ ತಾತ್ವಿಕತೆ. ಬದುಕಿಗೆ ದುಡಿಮೆ ಆವಶ್ಯಕ. ಸಾರ್ಥಕ ಸಾಧನೆಯ ಹಿಂದೆ ಶ್ರಮದ ಬೆಲೆ ಬಹುದೊಡ್ಡದು. **"ಶ್ರಮವಿರುವ ಬದುಕಿಗೆ ದುಡಿಮೆಯೇ ವಿರಾಮ!"** ಆದ್ದರಿಂದ ಕಾಯಕ ತತ್ವದ ಪ್ರೇರಣೆ ಪ್ರಭಾವ ಈ ನಾಟಕಗಳಲ್ಲಿ ಅಡಗಿವೆ. ತಾನು ದಿಢೀರನೆ ಶ್ರೀಮಂತನಾಗಬೇಕೆಂಬ ಹಂಬಲ ಇತರರನ್ನು ಮೀರಿಸುವುದಕ್ಕಾಗಿಯೇ ಹುಟ್ಟುವಂತಹುದು. ಈ ರೀತಿಯ ತೌಲನಿಕ ಸಾಮ್ಯತೆ ವ್ಯಕ್ತಿಯೊಬ್ಬನ ಸಾಧಾರಣ ವ್ಯಕ್ತಿತ್ವವಾಗಿ ಕಂಡುಬರುತ್ತದೆ. ಆದ್ದರಿಂದ ಶ್ರಮದ ಬೆಲೆ ಅರಿತ ಯಾರೇ ಆಗಲಿ ಸುಲಭ ಸ್ವೀಕಾರಕ್ಕೆ ಒಳಗಾಗುವುದಿಲ್ಲ. ಅದೃಷ್ಟ ಎನ್ನುವುದು ಯಾವುದೇ ಕಾರಣಕ್ಕೂ ಕೆಲಸ ಮಾಡುವುದಿಲ್ಲ.

'ಮಂತ್ರವಾದಿ' ನಾಟಕದ ಕೇಂದ್ರ ಪಾತ್ರ ಸೋಂಪನು ತನ್ನ ತಾತನಿಂದ ಪಡೆದ ಕೊಳಲು ಮತ್ತು ಅದರ ಉಪಯೋಗ ಒಂದು ಹಂತಕ್ಕೆ ಮಾತ್ರ ಚೆನ್ನಾಗಿತ್ತು. ಆದರೆ ಆಸೆ ದುರಾಸೆಯಾದಾಗ, ತಾನು ನಡೆದು ಬಂದ ಬದುಕಿನ ದಾರಿಯನ್ನು ಮರೆತಾಗ ಅವನಿಗೆ ಕಂಟಕ ಹತ್ತಿರವಾಗುತ್ತದೆ. "ಈ ಆಸೆ ಅನ್ನೋದು ಒಂದು ಏಣಿ ಇದ್ದ ಹಾಗೆ. ಒಂದು ಮೆಟ್ಟಿಲು ಹತ್ತಿದ ಮೇಲೆ ಇನ್ನೊಂದು ಮೆಟ್ಟಿಲು

ಕಾಣಿಸ್ತಾನೇ ಇರುತ್ತೆ, ಆಗಲೇ ಎಲ್ಲರಿಗೂ ದಾಹ. ಬೇಕು ಬೇಕು ಎನ್ನುವ ದಾಹ"[೨೨] ಈ ಅರ್ಥದ ಹಿನ್ನೆಲೆಯಲ್ಲಿ ಸೋಂಪನು ತನ್ನ ವ್ಯಕ್ತಿತ್ವವನ್ನು ನಿರೂಪಿಸಿಕೊಳ್ಳುವುದನ್ನು ಸಾಬೀತು ಮಾಡುತ್ತಾನೆ.

ಬಯಕೆಯೊಂದು ನೂರಾದಾಗ ಬಂಧನ ಇಮ್ಮಡಿಯಾಗುತ್ತದೆ. ಬರುವ ಬಯಕೆಯನ್ನು ಈಡೇರಿಸುವ ಸಾಧನಕ್ಕೆ ಮರೆಯದೆ ಕೃತಜ್ಞನಾಗಿದ್ದರೆ ಮತ್ತೊಂದು ಬಯಕೆ ಅಥವಾ ಆಸೆ ಈಡೇರಿಕೆ ಸಲೀಸು. ಆದರೆ ಬಯಕೆಯನ್ನು ಈಡೇರಿಸುವ ಸಾಧನದಿಂದ ಚಿಕ್ಕ ಅವಘಡವಾದರೆ ಮನುಷ್ಯತ್ವ ಮರೆತು ಮೃಗೀಯ ವರ್ತನೆ ಅಭಿವ್ಯಕ್ತಿಯಾದಾಗ ಆ ಸಾಧನ ಬಹುದೂರ ಹೋಗುವ ಸಾಧ್ಯತೆ ಇರುತ್ತದೆ. ಈ ಹಿನ್ನೆಲೆಯಲ್ಲಿಯೇ ಸೋಂಪನು ತನ್ನ ವ್ಯಕ್ತಿತ್ವಕ್ಕೆ ಮಸಿ ಬಳಿದುಕೊಳ್ಳುತ್ತಾನೆ. ಕೊಳಲಿನ ಮಾಯಾಶಕ್ತಿಯಿಂದ ಧರೆಗಿಳಿದ ರಾಜಕುಮಾರಿ ಏಣಿಯಿಂದ ಎಡವಿ ಬಿದ್ದಾಗ, "ಅಯ್ಯೋ ... ಬಿದ್ದ್ಯಾ ನನ್ನ ಗಿಣಿ .... ಥೂ ಎಲ್ಲಾ ಈ ಹಾಳು ಏಣಿಯಿಂದ .... ದರಿದ್ರ ಏಣಿ"[೨೩] ಎಂದು ನಿಕೃಷ್ಟ ಭಾವ ತಾಳಿ ಏಣಿಯನ್ನು ತುಚ್ಛೀಕರಿಸುವ ಸೋಂಪನ ವರ್ತನೆಯಿಂದ ಮಂತ್ರವಾದಿ ಜಾಗೃತನಾಗುತ್ತಾನೆ.

"ಏ ಸೋಂಪ .... ನಿಮ್ಮ ತಾತ ನಿನಗೆ ಕೊಟ್ಟ ಈ ಕೊಳಲಿನ ವಿಚಿತ್ರ ಶಕ್ತಿಯಿಂದ ನೀನು ಕನಸಿದ್ದೆಲ್ಲ ನನಸಾಗ್ತಿತ್ತು ..... ಕೇಳಿದ್ದೆಲ್ಲ ಹಾಜರಾಗುತ್ತಿತ್ತು. ಅಂಥ ಪ್ರಚಂಡ ಶಕ್ತಿ ಆ ಕೊಳಲಿಗಿದೆ. ಆ ಶಕ್ತಿ ಬಳಸಿ ಬಹಳಷ್ಟು ಒಳ್ಳೇದೂ ಮಾಡಬಹುದಿತ್ತು, ಕೆಟ್ಟದೂ ಮಾಡಬಹುದಿತ್ತು, ಆದರೆ ನೀನು ಸ್ವಾರ್ಥಿ ..... ಪರಮ ಸ್ವಾರ್ಥಿ .... ನಿನ್ನ ಆಸೆಗಳಿಗೆ ಕೊನೆ ಮೊದಲೇ ಇರಲಿಲ್ಲ. ದುರಹಂಕಾರ ತುಂಬಿ ತುಳುಕಿ ಹತ್ತಿದ ಏಣಿಯನ್ನೇ ಸಂಪೂರ್ಣ ಮರೆತೆ. ಅ–ಆ–ಇ–ಈ ಕಲಿಸಿದ ಗುರುವನ್ನೇ ಮರೆತು ಘನಪಂಡಿತನಾಗಿ ಏನು ಪ್ರಯೋಜನ? ಅದಕ್ಕಾಗಿ ಈ ಏಣೀನ, ರಾಜಕುಮಾರೀನ ಇಬ್ಬರನ್ನೂ ಕರಸ್ಕೊಂಡೆ ನಾನು ...."[೨೪]

ಈ ದೃಶ್ಯದ ಹಿನ್ನೆಲೆಯ ತಾತ್ತ್ವಿಕ ನೆಲೆಯು ಮುಂದಿನ ಸಂದರ್ಭದಲ್ಲಿ ಸೂಚ್ಯವಾಗುತ್ತದೆ.

"ಯಾರಿಗೆ ಆಗ್ಲಿ ಇಷ್ಟು ಸುಲಭವಾಗಿ ಕೇಳಿದ್ದೆಲ್ಲ ಸಿಕ್ತಾ ಹೋದರೆ ಎಲ್ಲಾ ಮನುಷ್ಯರೂ ಸೋಂಬೇರಿ ಕಟ್ಟೆಗಳಾಗ್ತಾರಷ್ಟೇ ..... ಬದುಕಿಗೊಂದು ಆದರ್ಶ ಗುರಿ ಇರಬೇಕು .... ಆದರ್ಶದ ಗುರಿ ಮುಟ್ಟಲಿಕ್ಕೆ ಬೇಕಾದ್ದನ್ನು ಪಡೆದುಕೊಳ್ಳಲಿಕ್ಕೆ ಹೋರಾಡಬೇಕು. ಆ ಹೋರಾಟದಲ್ಲಿ ಹುಡುಕಾಟದಲ್ಲಿ ಒಂದು ಥರಾ ಸಮಾಧಾನವಿರುತ್ತೆ ..... ಆ ಹೋರಾಟವೇ ಜೀವನ"[೨೫]

"..... ಕಷ್ಟಪಟ್ಟು ದುಡಿದಾಗಲೇ ನಿಜವಾದ ನೋವು – ನಲಿವು ಅರ್ಥವಾಗೋದು .... ನಿನ್ನ ಕಾಲ ಮೇಲೆ ನೀನು ನಿಲ್ಲೋ ಶಕ್ತಿ ಬರೋದು"[೬]

ಈ ಮೇಲಿನ ಮೂರು ಸನ್ನಿವೇಶ ಸಂದರ್ಭದ ಮಾತಿನ ಸಾರ ಇಡೀ ನಾಟಕದ ತಾತ್ವಿಕ ನೆಲೆಯಾಗಿದೆ. ಈ ಮುಖೇನ ಶ್ರಮದ ಬೆಲೆಗೆ ಎಲ್ಲರೂ ಮಹತ್ವ ಕೊಡಬೇಕೆಂಬ ಮಹತ್ತರವಾದ ತಿರುಳು ಇಲ್ಲಿದೆ.

'ಚಿನ್ನದ ಚೆಂಡು' ಇದೊಂದು ಮಾಯಾರೂಪಕ. ಷರತ್ತಿನ ಅನ್ವಯ ವಿಧಿಸಿರುವ ಮೂರು ವರಗಳು ಪೂರಕ ರೀತಿಯಲ್ಲಿ ಈಡೇರುವುದು ವಿನೋದಮಯವಾಗಿ ಕಂಡುಬರುತ್ತದೆ. ಕೇಳುವ ವರಗಳು ಮೂರೇ ಆದರೂ ಬಯಕೆಗಳು ನೂರಾರು. ಆದರೆ ಆ ಮನೆಯ ಯಜಮಾನನು ಶ್ರಮದ ಮಹತ್ವ ಅರಿತಿದ್ದರಿಂದ ಒಪ್ಪೊತ್ತಿನ ಊಟವಷ್ಟೇ ವರವಾಗಿ ಕೇಳುವುದು ಮಾದರಿ ಆಸೆಯಾಗಿ ಕಂಡುಬರುತ್ತದೆ. 'ದುಡಿಮೆಯೇ ಜೀವನ' ಎಂಬ ಮಹತ್ವದ ಅಂಶದ ಹಿನ್ನೆಲೆಯಲ್ಲಿ ಮನೆಯವರೆಲ್ಲರೂ ಪರಿವರ್ತನೆಗೆ ಒಳಪಡುವುದರಿಂದ ಈ ನಾಟಕದ ತಾತ್ತ್ವಿಕ ನೆಲೆ ಮತ್ತಷ್ಟು ಗಟ್ಟಿಯಾಗುತ್ತದೆ.

ಮಗ : "ಅಪ್ಪನ ಜತೆ ನಾವೆಲ್ಲ ನಾಳೆಯಿಂದ ದುಡಿಯೋಣ
ಬೆವರು ಸುರಿಸಿ ದುಡಿದೇ ಹಣ ಸಂಪಾದಿಸೋಣ"[೭]

....


ಗಂಡ : "ಈ ವರವೂ ಸಾಕು ... ಈ ಚಿನ್ನದ ಚೆಂಡೂ ಸಾಕು ... (ಆಚೆ ಎಸೆವ)
ಹಾಕೋಣ ಇನ್ನು ಈ ವರಗಳಿಗೆ ಬ್ರೇಕು
ದುಡಿದು ತಿನ್ನೋದೇ ಚೆನ್ನ ಅನ್ನಬೇಕು"[೮]

ಉತ್ತಮ ಮಾದರಿಯೊಂದನ್ನು ಅನುಸರಿಸುವುದು ಸದ್ವಿನಯ ವಿದ್ಯಾವಂತರ ಲಕ್ಷಣ. ಬದುಕೇ ಒಂದು ಸಂದೇಶವಾದಾಗ ನಮ್ಮ ಮನೆ ಮತ್ತು ಸುತ್ತಮುತ್ತಲ ವಾತಾವರಣವೂ ಸಮಾಜಮುಖಿ ನೆಲೆಯಲ್ಲಿ ಸ್ವಚ್ಛವಾಗುವುದರಲ್ಲಿ ಸಾಧ್ಯತೆ ಇದೆ. ಜೊತೆಗೆ "ಮಕ್ಕಳಿಗೆ ಹತ್ತಿರವಾಗುವ ಚೆಂಡಿನ ಉಪಮೆಯೊಂದಿಗೆ ಚಿಕ್ಕದಾಗಿ ಚೊಕ್ಕದಾಗಿ ನಿರೂಪಿಸುತ್ತ ಆಸೆ, ಅದೃಷ್ಟಗಳಿಗೆ ಗುಲಾಮರಾಗದೆ ಬೆವರಿನ ಬೆಲೆಯ ಬಲವನ್ನು ಆಶ್ರಯಿಸುವ ಅಗತ್ಯವನ್ನು ಉತ್ತಮ ಫ್ಯಾಂಟಸಿಯಾಗಿಸಲು ಮೂರ್ತಿ ಅವರು ಪ್ರಸ್ತುತ ಕೃತಿಯಲ್ಲಿ ಯತ್ನಿಸಿದ್ದಾರೆ".[೯]

ಒಟ್ಟಿನಲ್ಲಿ ಕಾಯಕ ತತ್ವದ ಹಿನ್ನೆಲೆಯಲ್ಲಿ ಮಕ್ಕಳಿಗೆ ಪೂರ್ಣಪಾಠ ನೀಡಿರುವ ಈ ನಾಟಕಗಳು ಕೇವಲ ಅವರಿಗಷ್ಟೇ ಸೀಮಿತವಾಗುವುದಿಲ್ಲ. ಭೂಮಿ ಮೇಲಿನ ಪ್ರತಿಯೊಬ್ಬ ಮನುಷ್ಯನಿಗೂ ಇಲ್ಲಿಯ ತಾತ್ತ್ವಿಕ ನೆಲೆಯ ಸಾರವು ಅನಿವಾರ್ಯ

ಮತ್ತು ಅವಶ್ಯಕವಾಗಿದೆ. ಶ್ರಮ ತತ್ವವನ್ನು ನಿರೂಪಣೆಯೊಂದಿಗೆ ಬೆರೆಸಿ ಹೇಳಿರುವ ನಾಟಕಕಾರನ ಗುರಿ ಮತ್ತು ಉದ್ದೇಶದಲ್ಲಿ ಸ್ಪಷ್ಟತೆ ಇರುವುದನ್ನು ಕಾಣಬಹುದು.

೨. ನಿಸರ್ಗದೊಡನೆ ಸಾವಯವ ಸಂಬಂಧ



ಜೀವ ಜಗತ್ತು ಸೃಷ್ಟಿ ಆದ ಮೇಲೆ ಮನುಷ್ಯನು ವಿಕಾಸ ಹೊಂದುತ್ತಾ ಹೋದಂತೆ ನಾಗರಿಕನಾದನು. ಬುದ್ಧಿ ಬಂದಂತೆ ತನ್ನ ಸುತ್ತಮುತ್ತಲಿನ ಸಂಪತ್ತನ್ನು ಅವಶ್ಯಕತೆಗೆ ಮೀರಿ ನಾಶಮಾಡುವಷ್ಟು ಪ್ರಬುದ್ಧನಾದನು! ಕಾಡಿನಿಂದ ತನ್ನನ್ನು ತಾನು ಬೇರ್ಪಡಿಸಿಕೊಂಡು ಇರುವ ತಾಣವನ್ನು 'ನಾಡು' ಎಂದು ಕರೆದು ಪ್ರಕೃತಿಯೊಂದಿಗಿನ ಸಾವಯವ ಸಂಬಂಧವನ್ನು ದೂರ ಮಾಡಿಕೊಳ್ಳುತ್ತಾ ಬಂದನು. ಪ್ರಾಣಿ ಪ್ರೀತಿ, ಪಕ್ಷಿ ಪ್ರೀತಿ, ಗಿಡ – ಮರ ಮುಂತಾದ ಪ್ರಾಕೃತಿಕವಾದ ಅನ್ಯೋನ್ಯ ಸಂಬಂಧಗಳನ್ನು ಕೆಲವೊಂದಕ್ಕೆ ಮಾತ್ರ ಸೀಮಿತ ಮಾಡಿಕೊಂಡು ತನ್ನ ಬದುಕಿನ ವಿಸ್ತಾರವನ್ನು ಸ್ವಾರ್ಥತೆಯ ನೆಲೆಯಲ್ಲಿ ಸಂಕ್ಷಿಪ್ತಗೊಳಿಸಿಕೊಂಡನು. ಕಾಡಿನ ಸಂಪತ್ತೆಂದರೆ ಭಕ್ಷಿಸುವಷ್ಟು ದುರಾಸೆಯನ್ನು ಬೆಳೆಸಿಕೊಂಡು 'ಅಭಿವೃದ್ಧಿ' ಹೆಸರಿನಲ್ಲಿ ನಾಡಿನ ವಿಸ್ತಾರತೆಗೆ ನೆಪವೊಡ್ಡಿ, ಸಮಾಜದಲ್ಲಿರುವ ಜಾತಿ, ಭಯೋತ್ಪಾದನೆ, ಭ್ರಷ್ಟಾಚಾರ ಮುಂತಾದ ಸಮಸ್ಯೆಗಳ ವಿನಾಶಕ್ಕೆ ಮುಂದಾಗದೆ ಸಕಲರಿಗೆ ಲೇಸನ್ನು ಬಯಸುವ ಪ್ರಕೃತಿಯ ವಿನಾಶಕ್ಕೆ ಕಾರಣನಾದನು. ನಿಸರ್ಗದೊಡನೆ ಜೀವ ಬೆರೆತ ದೇಹದ ಚಪಲತೆಗೆ ವಿಭಿನ್ನ ಮಾರ್ಗಗಳನ್ನು ಕಂಡುಕೊಂಡನು. ಆದರೂ ಕೊನೆಗೊಮ್ಮೆ ಜೀವರಹಿತ ದೇಹ ಮಣ್ಣಾದರೂ ನಿಸರ್ಗದೊಡನೆ ಸಾವಯವ ಸಂಬಂಧ ಕಳೆದುಕೊಳ್ಳಲಾರದ ಸತ್ಯವನ್ನು ಮುಂದಿಟ್ಟನು.

ಈ ಹಿನ್ನೆಲೆಯಲ್ಲಿ 'ಓ ನನ್ನ ಮರವೇ' ಮಕ್ಕಳ ನಾಟಕದ ತಾತ್ತ್ವಿಕತೆಯನ್ನು ಗ್ರಹಿಸಬಹುದು. ಎಲ್ಲರಲ್ಲಿಯೂ ಪರಿಸರದ ನಡುವಿನ ಸಾವಯವ ಸಂಬಂಧವನ್ನು ಅರಿವುಗೊಳಿಸುವ ಉದ್ದೇಶದಿಂದ ರೂಪುಗೊಂಡಿರುವ ಈ ನಾಟಕದ ನಾಂದಿ ಪದ್ಯ ನಾಟಕಕಾರನ ಉದ್ದೇಶವನ್ನು ಸ್ಪಷ್ಟಗೊಳಿಸುತ್ತದೆ.

"ಅಡಗೂಲಜ್ಜಿ ಕತೆ ಇದು ಅಲ್ಲ
ಪೌರಾಣಿಕದ ನಾಟಕವಲ್ಲ
ನಿತ್ಯ ನಡೆಯುವ ಸತ್ಯಕೆ ನಾವು
ಕನ್ನಡಿ ಇಲ್ಲಿ ಹಿಡಿತೇವ"[೧೦]

ಈ ನಾಟಕದ ಕೇಂದ್ರ ಪಾತ್ರ ಅನಾಥ ಹುಡುಗ 'ನಿಂಗ'. ಇವನು ತಿಮ್ಮಯ್ಯ ದಂಪತಿ ಮನೆಯ ಆಳು ಮಗ. ಈ ಮನೆಯಲ್ಲಿ ನಡೆಯುವ ಒತ್ತಡದ ಕೆಲಸದ ನಡುವೆಯೂ ಅವನು ತಾನು ಬೆಳೆಸಿದ ಮರದ ಜೊತೆಗೆ ಅವಿನಾಭಾವ ಸಂಬಂಧವನ್ನು ಇಟ್ಟುಕೊಂಡಿರುತ್ತಾನೆ. ತನ್ನ ಭಾವನೆಗಳನ್ನು, ನೋವುಗಳನ್ನು ಆ ಮರದೊಂದಿಗೆ ಹಂಚಿಕೊಂಡಿರುತ್ತಾನೆ. "ಯಜಮಾನನಿಗೆ ಜೀವತೇದು ದುಡಿತಿದ್ರೂ ಹೊಡಸ್ಕೊಳ್ಳೋದು ಬೈಸ್ಕೊಳ್ಳೋದು ತಪ್ಪಲಿಲ್ಲವಲ್ಲ"[೧೧] ಎಂಬ ಚಿಂತೆ ಅವನದ್ದು. ಅಷ್ಟೇ ಅಲ್ಲ, "ಉಪಕಾರ ಮಾಡಿದವರನ್ನ ಪ್ರೀತಿಯಿಂದ ಸಾಕಿ, ಸಲಹಿ ಅನ್ನ ಹಾಕಿದ ಧಣೀನ ಮರೆಯೋ ಸ್ವಭಾವ ಮನುಷ್ಯರಿಗಿರಬಹುದು. ಮರಕ್ಕಂತಲೂ ಖಂಡಿತಾ ಇಲ್ಲ"[೧೨] ಎಂಬ ಅವನ ನಂಬಿಕೆ ಮರದೊಂದಿಗೆ ಇರುವ ಸಂಬಂಧದ ಘನೀಕರಿಸುವಿಕೆಗೆ ಪ್ರಬಲ ಕಾರಣವಾಯಿತು. ಮರದೊಂದಿಗೆ ಯಾವುದೇ ಲಾಭವನ್ನು ನಿರೀಕ್ಷಿಸದ ನಿಂಗನಿಗೆ ತನ್ನ ನೋವುಗಳ ಶಮನಕ್ಕೆ ಮರವೊಂದೇ ಆಧಾರವಾಗಿತ್ತು. ಆದರೆ 'ಅಭಿವೃದ್ಧಿ' ಎಂಬ ಶಾಪದ ಕ್ರಿಯೆ ನಿಂಗನು ಪ್ರೀತಿಸುತ್ತಿದ್ದ ಮರವನ್ನು ಆಹುತಿ ತೆಗೆದುಕೊಂಡಿತು. ಇಂಥ ಪರಿಸ್ಥಿತಿಯ ನಿರ್ಮಾಣ ಪರಿಸರಕ್ಕೆ ಆದ ದೊಡ್ಡ ಅನ್ಯಾಯ ಎಂದು ಯಾರು ಅರಿಯುವಲ್ಲಿ ವಿಫಲರಾಗಿದ್ದಾರೆ.. "ಗಿಡ ಮರ ಕಡಿಯೋದು ಅನ್ಯಾಯ ಅಂತ ನೀನು ಹೇಳ್ತಿ ...ಆದ್ರೆ ಸದಾ ಹಣದ ಹೊಳೇಲಿ ತೇಲೋ, ಸಿರಿಸಂಪತ್ತಿನ ಕನಸು ಕಾಣೋ ಆ ಕಟುಕರಿಗೆ ಇದು ಅನ್ಯಾಯ ಅಂತ ತಿಳಿಯೋದು ಯಾವ ಕಾಲಕ್ಕೆ?"[೧೩] ಎಂಬ ಮರದ ಪ್ರಶ್ನೆಗೆ ಉತ್ತರಿಸುವವರೇ ಕಡಿಮೆ.

ಒಟ್ಟಿನಲ್ಲಿ 'ಓ ನನ್ನ ಮರವೆ' ನಾಟಕ ಪರಿಸರ ಸಂರಕ್ಷಣೆಗಾಗಿ ರೂಪುಗೊಂಡಿರುವ ಸುಂದರ ರಚನೆ. ಬರಗೂರು ರಾಮಚಂದ್ರಪ್ಪ ಅವರು ಹೇಳುವಂತೆ, "ಈ ನಾಟಕವು ಪರಿಸರದ ಬಗ್ಗೆ ನಮ್ಮ ಮನಸ್ಸಿನೊಂದಿಗೆ ಮಾತನಾಡುವ ಮಾನವೀಯ ಮಕ್ಕಳ ನಾಟಕ. ಮರವೇ ಮನುಷ್ಯನಾಗಿ ಕಾಡಿಸುವ ಆಶಯ ನನಗೆ ಮೆಚ್ಚುಗೆಯಾಗಿದೆ. ಈ ನಾಟಕವು ಎಳೆಯ ಮನಸ್ಸನ್ನಷ್ಟೇ ಅಲ್ಲ, ಹಿರಿಯ ಮನಸ್ಸುಗಳನ್ನು ಪರಿಸರದ ಬಗ್ಗೆ ಕಾಡಿಸುವ ನಾಟಕದ ಉದ್ದೇಶವು ಪ್ರಯೋಗದಲ್ಲಿ ಪ್ರಕಟವಾಗಿದೆ ಉದ್ದೇಶ ಸಾರ್ಥಕವಾಗಿದೆ".[೧೪]

೩. ಸ್ವತಂತ್ರವಾದ ಕಲಾಭಿವ್ಯಕ್ತಿ ಮತ್ತು ಹಳ ಬೆರೆತ ಜೀವನ

ಕಲೆ ವ್ಯಕ್ತಿಯೊಬ್ಬನ ಪ್ರತಿಭೆಯಾದರೂ ಅದು ಸಮಾಜವನ್ನು ಪ್ರತಿಬಿಂಬಿಸಿರುತ್ತದೆ. ಸಮಾಜವನ್ನು ಅನುಕರಿಸದೆ ಕಲೆ ಅಭಿವ್ಯಕ್ತವಾಗಲಾರದು. ಎಚ್ಚರಿಸುವ, ಸರಿದೂಗಿಸುವ,

ಸಮತೋಲನ ಕಾಪಾಡುವ, ಸ್ವಸ್ಥ ಮನಸ್ಸುಗಳನ್ನು ರೂಪಿಸುವ ಬಹು ಆಯಾಮದ ಮಾದರಿಯಾಗಿ ಕಲೆ ಕಂಡುಬರುತ್ತದೆ. 'ಕಲಾಭಿವ್ಯಕ್ತಿ' ಅರ್ಥವಿಸ್ತಾರವಾಗಬೇಕಾದರೆ ಕಲಾ ಮಾಧ್ಯಮವಾಗಿ ರೂಪುಗೊಂಡ ವ್ಯಕ್ತಿಯೊಬ್ಬನು ಜಂಗಮನಾಗಿರಲೇಬೇಕು. ಬಂಧಿತ ನೆಲೆಯಲ್ಲಿ ತಾನು ಕಲೆಯ ಮೂಲಕ ಇಡೀ ಸಮಾಜವನ್ನು ಬಹು ದೀರ್ಘಕಾಲ ಸೂಚ್ಯೀಕರಿಸುತ್ತೇನೆ ಎಂಬ ದೃಢ ಮನಸ್ಸು ಇದ್ದರೆ ಅಂಥ ಮನಸ್ಸು ದ್ರವೀಕರಣಕ್ಕೆ ಒಳಗಾಗಬೇಕಾಗುತ್ತದೆ. ಆಗಲೇ ಸೃಜನಶೀಲ ಪ್ರಕ್ರಿಯೆಯೊಂದರ ಅದ್ಭುತ ಕಾರ್ಯ ಕಲೆಯ ಮೂಲಕ ಸಮಾಜವನ್ನು ಪ್ರತಿನಿಧಿಸಲು ಸಾಧ್ಯ. ಈ ಕ್ರಿಯೆ ಸಾರ್ಥಕಗೊಳ್ಳಬೇಕಾದರೆ ಹಸಬೆರೆತ ಜೀವನ ನಮ್ಮದಾಗಬೇಕು. ಬದುಕಿನ ಭಲ ಬದುಕಿನುದ್ದಕ್ಕೂ ಇದ್ದರೆ, ಬೆಂಗಾಡವನ್ನು ಹಸಿರು ಮಾಡುವಂತಹ ಕೆಲಸ ಕಾರ್ಯಗಳು ಫಲಿತಗೊಳ್ಳುತ್ತವೆ. ಈ ಹಿನ್ನೆಲೆಯಲ್ಲಿ ಎ.ಎನ್. ಮೂರ್ತಿ ಅವರ 'ಹಕ್ಕಿ ಹಾಡು' ಮತ್ತು 'ಕಾಶೀ ಕಿಟ್ಟಿ' ಮಕ್ಕಳ ನಾಟಕಗಳು ರೂಪಿತಗೊಂಡಿವೆ.

'ಹಾಡು ಹಕ್ಕಿ' ನಾಟಕದ ರಾಜನು ಮೂರನೇ ಮಗಳಿಗೆ ತನ್ನ ಆಸ್ತಿ ಎಂಬಂತೆ 'ಬಂಗಾರ ಪಂಜರದಲ್ಲಿರುವ ಗಿಳಿ'ಯೊಂದನ್ನು ಉಡುಗೊರೆಯಾಗಿ ಕೊಡುತ್ತಾನೆ. ಇದರಿಂದ ದುಃಖಿತಳಾಗುವ ರಾಜಕುಮಾರಿಗೆ 'ಗಿಳಿ'ಯ ಹಾಡು ಮೋಡಿಯಂತೆ ಕಂಡು ಬಂದು, ಕಣ್ಣೀರಿನ ಉಪಶಮನಕ್ಕೆ ಕಾರಣವಾಗುತ್ತದೆ. ಆದರೆ, ಗಿಳಿಗೆ ತಾನು ನಿರ್ಬಂಧ ಪ್ರದೇಶದಲ್ಲಿ ಅನುಭವಕ್ಕೆ ಒಳಗಾಗಿ ತನ್ನ ಕಲೆಯ ಹಾಡುಗಾರಿಕೆ ಕಲೆಯನ್ನು ಅಭಿವ್ಯಕ್ತಿಸಬೇಕು ಎಂದು "ಹಾರಲು ಬಿಟ್ಟರೆ ಹೊರಕ್ಕೆ ನನ್ನ, ಸುತ್ತಾಡಿ ಬಂದು ಮತ್ತೆ ಹಾಡುವೆ"ಎಂಬ ಸಹಜ ಬಯಕೆಯನ್ನು ತಿಳಿಸುತ್ತದೆ.

"ಪಂಜರವೆಂದರೆ ಬಂದೀಖಾನೆ
ಖೈದಿಯಂತೆ ಕೂತು ನಾನು
ಇನ್ನು ಇಲ್ಲಿ ಹಾಡಲಾರೆ
ಛಳಿ – ಮಳೆ ಗಾಳಿಯಲ್ಲಿ
ಬೆಟ್ಟ – ಗುಡ್ಡ ಸುತ್ತಿ ಬರುವೆ
ಜನನ ನೋವು – ನಲಿವಿನರಿತು
ತಿರುಗಿ ಬಂದು ಹಾಡುವೆ"

(ಹಕ್ಕಿ ಹಾಡು – ಪುಟ ೯೦)

ಎಂದು ಮನವಿಯನ್ನು ಇಟ್ಟು ತಾನು ಬಂಧಿಯಾಗಿರುವ ವ್ಯವಸ್ಥೆಯನ್ನು ಟೀಕಿಸುತ್ತದೆ. ಜೊತೆಗೆ ತಾನು ಸಾಧಿಸಬೇಕಿರುವ ಸೃಜನಶೀಲ ಅಭಿವ್ಯಕ್ತಿಯ ಉದ್ದೇಶವನ್ನು ಸ್ಪಷ್ಟಪಡಿಸುತ್ತದೆ. ಈ ವಿಚಾರವಾಗಿ ಯಾರೊಬ್ಬರೂ ಒಪ್ಪಲು ಸಿದ್ಧರಿರುವುದಿಲ್ಲ. ಕೊನೆಗೆ, ಸ್ವತಂತ್ರ ಬಯಸಿ ಹಾರಾಡಿ, ಹಾಡುವ ಹಕ್ಕಿಯು ಸತ್ತಂತೆ ನಟಿಸಿ ಬಂಧನದಿಂದ ಮುಕ್ತಗೊಳ್ಳುತ್ತದೆ.

"ರಾಜಕುಮಾರಿ – ರಾಜಕುಮಾರಿ
ಬಂದಿಹೆ ನಾನು ದೇಶವ ಸುತ್ತಿ
ಜನದ ನಾಡಿ ಮಿಡಿತವೀಗ
ನನಗೆ ತಿಳಿದಿದೆ
ಜನರ ರಾಯಭಾರಿ ನಾನು
ಎಲ್ಲಿ ಇರಲಿ ಹೇಳು?
ನಿನ್ನ ಮಾತು ಕೇಳದಿದ್ರೆ
ಆಗ ನನ್ನ ಹೇಳು"

(ಹಕ್ಕಿ ಹಾಡು – ಪುಟ ೯೭)

ಹೀಗೆ ಸ್ವತಂತ್ರಗೊಂಡ ಹಕ್ಕಿ ಜನದ ನಾಡಿಮಿಡಿತ ತಿಳಿದು ತನ್ನ ಹಾಡಿನ ಮೂಲಕ ಸಮಾಜದ ನೋವನ್ನು, ಸಂಕಟವನ್ನು ಇನ್ನೊಬ್ಬರಿಗೆ ತಿಳಿಸುವ ಕಾರ್ಯಸಾಧ್ಯತೆಯನ್ನು ತನ್ನ ಜೀವನದಲ್ಲಿ ರೂಢಿಸಿಕೊಂಡಿರುವುದು ಸೃಜನಶೀಲ ಕಲಾಭಿವ್ಯಕ್ತಿಯ ಮಾಧ್ಯಮಕ್ಕೊಂದು ಸಾಕ್ಷಿಪ್ರಜ್ಞೆಯಾಗಿ ಕಂಡುಬರುತ್ತದೆ.

ಒಟ್ಟಿನಲ್ಲಿ ಕಲೆಯ ಅಭಿವ್ಯಕ್ತಿಯ ಸ್ವಾತಂತ್ರ್ಯದ ಬಯಕೆಯೇ ಇಲ್ಲಿನ ಮುಖ್ಯ ಆಶಯ. ಹಾಡುವ ಹಕ್ಕಿಗಳಿಗೆ ಪಂಜರದ ಬಂಧನ ಬೇಕಿಲ್ಲ. ದಿಕ್ಕು ದಿಕ್ಕುಗಳಲ್ಲಿ ಹಾಡುವ, ಎಲ್ಲ ಕಾಲಕ್ಕೂ ಮೈ ತೆರೆಯುವ, ಜನರ ನೋವು–ನಲಿವುಗಳಿಗೆ ಸಂವೇದಿಸುವ ಮುಕ್ತ ಬಯಕೆಯ ಹಂಬಲ ವ್ಯಕ್ತವಾಗಿವೆ. ಜೊತೆಗೆ ಕಲೆಯ ಮಾಧ್ಯಮವಾಗಿರುವ ವ್ಯಕ್ತಿಯೊಬ್ಬನು ಸಮಾಜದ ನಾಡಿಮಿಡಿತಗಳನ್ನು ತಿಳಿದುಕೊಳ್ಳಲು ಬಂಧಮುಕ್ತನಾಗಿ ಬಯಲುಗೊಂಡು ಎಲ್ಲವನ್ನು ಗ್ರಹಿಸಬೇಕು ಎಂಬ ತಾತ್ತ್ವಿಕ ನೆಲೆಯನ್ನು ಇಲ್ಲಿ ಸ್ಪಷ್ಟವಾಗಿ ಗುರುತಿಸಬಹುದು.

'ಕಾಶಿ–ಕಿಟ್ಟಿ' ಮಕ್ಕಳ ನಾಟಕವು ಕಲೆಯ ನೆಲೆಯಲ್ಲಿ ಸಾಧನೆಯ ಛಲವನ್ನು ಪ್ರತಿಬಿಂಬಿಸುತ್ತದೆ. ಕಲಾಭಿವ್ಯಕ್ತಿಗೆ ಒಂದು ಪೂರಕ ವೇದಿಕೆ ಸಿಗುವ ತನಕ ತಾಳ್ಮೆಯಿಂದ ಕಾಯಬೇಕು ಎಂಬ ಅರ್ಥದ ನೆಲೆಯಲ್ಲಿ ಈ ನಾಟಕ ರೂಪುಗೊಂಡಿದೆ. ಹಾಡುಗಾರ ಕಾಶಿ, ವಾದ್ಯಗಾರ ಕಿಟ್ಟಿ ಇಬ್ಬರಿಗೂ ಒಂದು ವೇದಿಕೆ ಸಿಗದೆ ಅನೇಕ ಸಮಸ್ಯೆಗಳಿಗೆ ಸಿಕ್ಕಿಕೊಳ್ಳುತ್ತಾರೆ.

"ಕಾಶಿ – ಕಿಟ್ಟಿಯ ಹಿಂಸೆ ತಡೆಯಕ್ಕೆ ಆಗಿಲ್ಲ. ಎಷ್ಟು ಹೇಳಿದರೂ ಕೇಳದೆ ಅಪಸ್ವರದಲ್ಲಿ ಹಾಡ್ತಾ – ವಾದ್ಯ ಬಾರಿಸ್ತಾ ಶಬ್ದಮಾಲಿನ್ಯಕ್ಕೂ ಕಾರಣರಾಗಿದ್ದಾರೆ"[೨೫] ಎಂಬ ದೂರು ಹೊತ್ತರೂ ಛಲ ಬಿಡದ ಇವರು ತಮ್ಮ ಪ್ರತಿಭೆಯನ್ನು ವ್ಯಕ್ತಪಡಿಸುತ್ತಾರೆ. ಮಕ್ಕಳ ನಾಲಗೆ ಮತ್ತು ಕೈ ಕತ್ತರಿಸಬೇಕೆಂಬ ಅಹವಾಲು ಹೋದಾಗ ಬಂಕಾಪುರದ ಗೌಡನು, "ನಾಲಿಗೆ ಕತ್ತರಿಸಿ – ಕೈ ಕತ್ತರಿಸಿ' ಅಂದ್ರಲ್ಲ ಇವರು ನಿಮ್ಮ ಮಕ್ಕಳೇ ಆಗಿದ್ದಿದ್ರೆ ಈ ಮಾತು ಹೇಳತಿದ್ರಾ ..... ಖಂಡಿತಾ ಇಲ್ಲ .... ಕಂಡೋರ ಮಕ್ಕಳನ್ನ

ಬಾವೀಗೆ ತಳ್ಳೋದು ನನ್ನ ಸೊಭಾವ ಅಲ್ಲ. ಎಷ್ಟೇ ಆಗ್ಲಿ ಅವರು ಸ್ವತಂತ್ರ ದೇಶದ ಸ್ವತಂತ್ರ ಪ್ರಜೆಗಳು ನಿಮ್ಮ ಹಾಗೆ. ಹಾಡುವ ಸ್ವಾತಂತ್ರ್ಯ ಅವರಿಗೆ ಇದ್ದೇ ಇದೆ"[೧೬] ಎಂಬ ಪ್ರೋತ್ಸಾಹ ಪೂರಕ ನುಡಿ ಹೇಳಿದರೂ ಮಕ್ಕಳು ಬಹಿಷ್ಕಾರಕ್ಕೆ ಒಳಗಾಗುತ್ತಾರೆ. ಕಾಡನ್ನು ಸೇರಿ ಭೂತಗಳೊಂದಿಗೆ ಸೇರಿ ಅವರ ಸಹಾಯದ ಮೇರೆಗೆ ಮತ್ತೆ ಹಾಡು ಮತ್ತು ವಾದ್ಯದ ಮೂಲಕ ರಾಜ್ಯಕ್ಕೆ ಒದಗಿದ ಆಪತ್ತನ್ನು ಬಗೆಹರಿಸಿ ತಮ್ಮ ಕಲಾ ಸಾಮರ್ಥ್ಯವನ್ನು ವ್ಯಕ್ತಪಡಿಸುತ್ತಾರೆ.

ಹೀಗೆ ಈ ನಾಟಕ ಛಲ ಮತ್ತು ಶ್ರದ್ಧೆಯನ್ನು ಬದುಕಿನಲ್ಲಿ ಎಲ್ಲರೂ ಅಳವಡಿಸಿಕೊಳ್ಳಬೇಕು ಎಂಬ ಸರಳ ಕಥಾ ನಿರೂಪಣೆಯನ್ನು ಕಟ್ಟಿಕೊಳ್ಳದೆ, ಕಾಣುವ ಹೊಂಗನಸು ಮಾಡಿಕೊಳ್ಳುವ ದಾರಿ ಕಠಿಣವೆನಿಸಿದರೂ ಸಾರ್ಥಕತೆಗೊಳ್ಳುವುದು ಹಠಬೆರೆತ ಜೀವನಕ್ರಮದಿಂದ ಎಂಬ ತಾತ್ತ್ವಿಕ ನೆಲೆಯನ್ನು ಒಳಗೊಂಡಿದೆ.

ಅಡಿ ಟಿಪ್ಪಣಿಗಳು

೧. ಬೆಳಕಿನಡೆಗೆ – ೨ ಪುಟ. ೧೩೩.
೨. ೫ ಮಕ್ಕಳ ನಾಟಕಗಳು, ಮಂತ್ರವಾದಿ, ಪುಟ೭.
೩. ಅದೇ , ಪುಟ ೧೭.
೪. ೫ ಮಕ್ಕಳ ನಾಟಕಗಳು, ಪುಟ ೧೯.
೫. ಅದೇ, ಪುಟ ೨೦.
೬. ಅದೇ, ಪುಟ ೨೧.
೭. ಅದೇ, ಪುಟ. ೭೮.
೮. ೫ ಮಕ್ಕಳ ನಾಟಕಗಳು, ಪುಟ ೭೮.
೯. ೫ ಮಕ್ಕಳ ನಾಟಕಗಳು, ಪುಟ ೮೦ರಲ್ಲಿ ನಾರಾಯಣರಾಯಚೂರು ಅವರ ಅಭಿಪ್ರಾಯ.
೧೦. ೫ ಮಕ್ಕಳ ನಾಟಕಗಳು, ಓ ನನ್ನ ಮರವೇ, ಪುಟ ೩೧.
೧೧. ಅದೇ, ಪುಟ ೪೧.
೧೨. ೫ ಮಕ್ಕಳ ನಾಟಕಗಳು, ಓ ನನ್ನ ಮರವೇ, ಪುಟ ೩೯.
೧೩. ಅದೇ, ಪುಟ ೫೭.
೧೪. ಅದೇ, ಪುಟ ೬೧.
೧೫. ೫ ಮಕ್ಕಳ ನಾಟಕಗಳು, ಕಾಶಿ–ಕಿಟ್ಟಿ, ಪುಟ ೧೧೧
೧೬. ೫ ಮಕ್ಕಳ ನಾಟಕಗಳು, ಕಾಶಿ–ಕಿಟ್ಟಿ, ಪುಟ ೧೧೩.

□□□

೧೧. 'ಅನಾದಿ-ಅನಂತ' ಕಾದಂಬರಿಯಲ್ಲಿ ಕಾಮ-ಪ್ರೇಮ ಮೀಮಾಂಸೆ

- ಷಣ್ಮುಖ. ಗಣಾಚಾರಿ

ಆಧುನಿಕ ಕನ್ನಡ ಸಾಹಿತ್ಯ ಲೋಕದ ವಿರಾಟಪುರುಷ, ನಾಟಕಕಾರ, ಮಹಾಮೇಧಾವಿಗಳಾಗಿದ್ದ ಶ್ರೀರಂಗರು ನಮ್ಮ ಪ್ರಮುಖ ಕಾದಂಬರಿಕಾರರಲ್ಲಿ ಒಬ್ಬರಾಗಿದ್ದಾರೆ. ೧೯೩೪ರಲ್ಲಿ ಪ್ರಕಟವಾದ 'ವಿಶ್ವಾಮಿತ್ರನ ಸೃಷ್ಟಿ'ಯಿಂದ ಮರಣೋತ್ತರ ಪ್ರಕಟವಾದ 'ಶಾಮರಾಯನ ಸತ್ಯ' (೧೯೮೭)ದ ವರೆಗೆ ಒಟ್ಟು ಹದಿಮೂರು ಕಾದಂಬರಿಗಳನ್ನು ಬರೆದಿದ್ದಾರೆ. ಅವರೇ ಹೇಳುವಂತೆ ಅವರ ಒಂದೊಂದು ಕಾದಂಬರಿಯೂ ಒಂದೊಂದು ಶೈಲಿಯನ್ನು ಹಾಕಿಕೊಟ್ಟಿದೆ. ಅವರು ತಮ್ಮ ಕಾದಂಬರಿಗಳಿಗಾಗಿ ಆಯ್ದುಕೊಳ್ಳುವ ವಸ್ತುವಿನ ಸಮಕಾಲೀನತೆ ಮತ್ತು ಆಧುನಿಕತೆ, ಶೈಲಿಯ ನಾವಿನ್ಯತೆ ಮತ್ತು ವಿವಿಧತೆ ಹಾಗೂ ತಾತ್ವಿಕ ಸ್ವರೂಪ ಮತ್ತು ವೈಚಾರಿಕತೆ ಈ ಮೊದಲಾದ ಅಂಶಗಳಿಂದ ಶ್ರೀರಂಗರ ಕಾದಂಬರಿಗಳು ಮಹತ್ವ ಪಡೆದಿವೆ. ಇಂದಿನ ಸಮಾಜವೇ ನನ್ನ ಕಾದಂಬರಿಗಳ ವಸ್ತು ಎನ್ನುವ ಶ್ರೀರಂಗರು, ತಮ್ಮ ಕಾದಂಬರಿಗಳಲ್ಲಿ ಸಾಮಾಜಿಕ, ಧಾರ್ಮಿಕ, ರಾಜಕೀಯ, ಲೈಂಗಿಕತೆಯ ಸಂದರ್ಭದಲ್ಲಿ ಗಂಡು-ಹೆಣ್ಣುಗಳ ಸಂಬಂಧ, ಸಂಪ್ರದಾಯ ಮತ್ತು ಆಧುನಿಕತೆಗಳ ಸಂಘರ್ಷ, ನೈತಿಕ ಸಂಸ್ಕೃತಿ ಮತ್ತು ನಿಸರ್ಗ ನಿಯಮಗಳ ತಾಕಲಾಟ ಈ ಮೊದಲಾದ ಅಂಶಗಳನ್ನು ವಿಶ್ಲೇಷಿಸಿದ್ದಾರೆ.

ಪ್ರಸ್ತುತ ಲೇಖನದಲ್ಲಿ ಶ್ರೀರಂಗರ 'ಅನಾದಿ - ಅನಂತ' (೧೯೫೩-೧೯೫೯) ಕಾದಂಬರಿಗೆ ಸಂಬಂಧಿಸಿದಂತೆ, ಆಧುನಿಕ ಮನೋವಿಶ್ಲೇಷಣಾ ಸಿದ್ಧಾಂತಗಳ ನೆಲೆಗಟ್ಟಿನ ಹಿನ್ನೆಲೆಯಲ್ಲಿ 'ಕಾಮ-ಪ್ರೇಮ ಮೀಮಾಂಸೆ' ಮಾಡಲಾಗಿದೆ.ಈ ಕಾದಂಬರಿಯ ಯಶಸ್ಸಿಗೆ ಅದರ ಸಾರ್ವಕಾಲಿಕ ಪ್ರಸ್ತುತೆ ಹೊಂದಿದ ವಸ್ತು, ಶ್ರೀರಂಗರ ಅನುಭವ ಪ್ರಾಧಾನ್ಯತೆ ಹಾಗೂ ಕತೆ-ಪಾತ್ರಗಳ ಮುಖಾಂತರವಾಗಿ ಮಿತ ಸಂಭಾಷಣೆ-ಅಂತರಂಗದ ಚಿತ್ರದ ವರ್ಣನೆ ಮಾಡುವ ಹೊಸ ಶೈಲಿ

ಇವುಗಳೇ ಪ್ರಮುಖ ಕಾರಣವಾಗುತ್ತವೆ. ಸಾಂಖ್ಯರ 'ಪ್ರಕೃತಿ–ಪುರುಷ' ತತ್ವದ ಅಭಿವ್ಯಕ್ತಿ ಕಾದಂಬರಿಯುದ್ದಕ್ಕೂ ಕಂಡುಬರುತ್ತದೆ. ಹಾಗೆಯೇ ಕಾಳಿದಾಸನ 'ಶಾಕುಂತಲ'ದ ಪ್ರಸ್ತಾಪ ಮೇಲಿಂದ ಮೇಲೆ ಬಂದು ಹೋಗುತ್ತದೆ.

'ಅನಾದಿ–ಅನಂತ' ಕಾದಂಬರಿಯಲ್ಲಿ ಶ್ರೀರಂಗರು ಕಾಮ–ಪ್ರೇಮಗಳನ್ನು ವಸ್ತುವಾಗಿ ಆರಿಸಿಕೊಂಡು ಸಂಕೀರ್ಣವಾದ ಕಥೆಯನ್ನು ಹೆಣೆದಿದ್ದಾರೆ. ಇಲ್ಲಿ ಬರುವ ಪ್ರಮುಖ ಪಾತ್ರಗಳಾದ ರಾಮಣ್ಣ ಮತ್ತು ಕುಮುದಾ ಇವರ ಮನೋವಿಶ್ಲೇಷಣೆಯಲ್ಲಿ ಮತ್ತು ಅವರ ನೀತಿ ಅನೀತಿಯ ಮನಃಸಂಘರ್ಷದಲ್ಲಿ ಸಂಕೀರ್ಣತೆ ಕಂಡುಬರುತ್ತದೆ. ಸಂವೇದನಾಶೀಲ ಸಾಹಿತಿಯಾದ ರಾಮಣ್ಣನ ಸೂಕ್ಷ್ಮ ಪ್ರಜ್ಞೆ ಇಲ್ಲಿ ಅಭಿವ್ಯಕ್ತವಾಗುತ್ತದೆ. "ರಾಮಣ್ಣ ಮತ್ತು ಕುಮುದಾ ಇವರ ಸಂಬಂಧದ ಬಿಗುವು ಹಾಗೂ ಅದರ ಪರಿಹಾರ ಇವೇ ಕಾದಂಬರಿಯ ಮೂಲದ್ರವ್ಯ ಮತ್ತು ಕಥೆಯ ಚಲನೆ"[೧] ಎಂದು ಡಾ. ಜಿ.ಎಸ್. ಆಮೂರ್ ಅವರು ಒಂದೇ ವಾಕ್ಯದಲ್ಲಿ ಕಾದಂಬರಿಯ ಜೀವಾಳವನ್ನು ಎತ್ತಿ ತೋರಿಸಿದ್ದಾರೆ. 'ಪರಿಹಾರಕ್ಕಿಂತ ಇನ್ನಷ್ಟು ಪ್ರಶ್ನೆಗಳನ್ನು ಎತ್ತುತ್ತದೆ' ಎಂದೂ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಶ್ರೀರಂಗರಲ್ಲಿ ಪ್ರೇಮ ಹಾಗೂ ಕಾಮಗಳ ಸಂಬಂಧ, ಮನಸ್ಸು ಹಾಗೂ ದೇಹಗಳ ಸಂಬಂಧಕ್ಕೆ ಸಮವಾಯಿಯಾದ ಕಲ್ಪನೆ, ಕಾರಂತರ 'ಮೈ ಮನಗಳ ಸುಳಿಯಲ್ಲಿ' ಇದ್ದಂತೆ 'ಅನಾದಿ'ಯಲ್ಲಿಯೂ ಲೈಂಗಿಕತೆಯ ಸಂದರ್ಭದಲ್ಲಿ ದೇಹ ಹಾಗೂ ಮನಸ್ಸುಗಳ ದ್ವಂದ್ವ, ತಾತ್ವಿಕ ಅನ್ವೇಷಣೆಯ ವಿಷಯವಾಗಿದೆ. ಇದರಿಂದಾಗಿ ಈ ಕಾದಂಬರಿಯ ಪ್ರಸ್ತುತತೆ ತನ್ನಷ್ಟಕ್ಕೆ ತಾನೇ ಸಿದ್ಧವಾಗಿ ಬಿಡುತ್ತದೆ.[೨] ಈ ದ್ವಂದ್ವ ಸಾರ್ವತ್ರಿಕವಾದುದಲ್ಲದೆ, ಕಾದಂಬರಿಯ ವಸ್ತುವನ್ನು ಹಲವಾರು ಸಮಕಾಲೀನ ಕಾದಂಬರಿಗಳಲ್ಲಿ ಕಾಣಬಹುದಾಗಿದೆ.

ಪ್ರಸ್ತುತ 'ಅನಾದಿ – ಅನಂತ' ಕಾದಂಬರಿಯ ನಾಯಕ ರಾಮಣ್ಣ ಒಬ್ಬ ಸೃಜನಶೀಲ ಬರೆಹಗಾರನಾಗಿದ್ದು; ಶ್ರೀರಂಗರಲ್ಲಿದ್ದಂತೆ ನಾಟಕ ಮತ್ತು ಕಾದಂಬರಿಗಳೇ ಅವನ ಅಭಿವ್ಯಕ್ತಿ ಮಾಧ್ಯಮಗಳಾಗಿವೆ. ಅವನು ತನ್ನ ಹೆಂಡತಿ ಸರಳಾಳನ್ನು ಆಳವಾಗಿ ಪ್ರೀತಿಸುತ್ತಾನೆ. ಸರಳಾ ಸುಸಂಸ್ಕೃತಳೂ, ವಿಶಾಲ ಮನೋಭಾವದವಳೂ ಆಗಿದ್ದು; ರಾಮಣ್ಣನ ಸೃಜನಶೀಲತೆಗೆ ಸ್ಫೂರ್ತಿಯ ಸೆಲೆಯಾಗಿದ್ದಾಳೆ. ಇವಳಿಗೂ ರಾಮಣ್ಣನೇ ಸರ್ವಸ್ವ; ಅವನೇ ಅವಳ ಬದುಕು. ಆದರೆ ಸರಳಾ ಗುಣವಾಗದ, ದೀರ್ಘ ಖಾಯಿಲೆಯಿಂದ ಹಾಸಿಗೆ ಹಿಡಿದಿದ್ದಾಳೆ. ಹೀಗಾಗಿ ದಂಪತಿಗಳ ನಡುವಿನ ದೈಹಿಕ ಸಂಬಂಧ ತಪ್ಪಿ ಹೋಗಿದೆ. ಸರಳಾ ತನ್ನ ಅನುಕೂಲತೆಗಾಗಿ, ಅಣ್ಣನ ಮನೆಯಿಂದ ತನ್ನ ದೂರದ ಸಂಬಂಧಿಕರ ಅನಾಥ ಹುಡುಗಿ ಕುಮುದಾಳನ್ನು ಮನೆಗೆ

ಕರೆದುಕೊಂಡು ಬಂದಿದ್ದಾಳೆ. ಹರೆಯದ ಹುಡುಗಿ ಕುಮುದಳ ದೈಹಿಕ ಆಕರ್ಷಣೆಗೆ ಒಳಗಾಗಿ, ಅವಳಲ್ಲಿ ರಾಮಣ್ಣ ದೈಹಿಕ ಸಂಬಂಧವನ್ನು ಬೆಳೆಸಿ, ತೃಪ್ತಿಯನ್ನು ಪಡೆಯುವುದರ ಮೂಲಕ ತನ್ನ ಸೃಜನ ಶೀಲತೆಯನ್ನು ಉಳಿಸಿಕೊಳ್ಳುತ್ತಾನೆ. ಆದರೂ ಹೆಂಡತಿ ಸರಳೆಯಲ್ಲಿ ಅವನ ಪ್ರೀತಿ ಅಖಂಡವಾಗಿಯೇ ಉಳಿದಿರುತ್ತದೆ. ರಾಮಣ್ಣನಿಗೆ ತನ್ನಿಂದ ದೇಹ ತೃಪ್ತಿ ಮಾತ್ರ ಬೇಕಾಗಿದೆ, ತನ್ನ ಪ್ರೀತಿ–ಪ್ರೇಮ ಬೇಕಾಗಿಲ್ಲ ಎಂದು ಕುಮುದಳಿಗೆ ತಿಳಿಯುತ್ತದೆ. ರಾಮಣ್ಣನಿಗೆ ನೈತಿಕ ಪ್ರಶ್ನೆ ಎದುರಾಗಿ, ಗೊಂದಲದಲ್ಲಿ ಸಿಕ್ಕಿಹಾಕಿಕೊಳ್ಳುತ್ತಾನೆ. ಹೀಗಾಗಿ ಇಬ್ಬರೂ ದೇಹದಿಂದ ದೂರವಾದರೂ, ಮನಸ್ಸು ಮಾತ್ರ ಇಬ್ಬರದ್ದೂ ಎಳೆಯುತ್ತಿರುತ್ತದೆ. ಆದರೂ ರಾಮಣ್ಣ ಮತ್ತು ಕುಮುದರಲ್ಲಿ ಮೈ–ಮನಗಳ ತಾಕಲಾಟದಿಂದ ನೈತಿಕ ಸಮಸ್ಯೆಗಳು ಹೆಚ್ಚಾಗುತ್ತವೆ. ಇಬ್ಬರಿಗೂ ಪಾಪ ಪ್ರಜ್ಞೆ ಕಾಡುತ್ತದೆ. ಇಂಥ ಸಮಯದಲ್ಲಿ ಶುದ್ಧ ಅಂತಃಕರಣದ ಸರಳಾ, ರಾಮಣ್ಣ ಮತ್ತು ಕುಮುದಳ ಮದುವೆಯನ್ನು ಮಾಡುವ ಹಂಬಲ ವ್ಯಕ್ತಪಡಿಸುತ್ತಾಳೆ. ಆದರೆ ರಾಮಣ್ಣ ಎರಡನೇ ಮದುವೆ ನಿರಾಕರಿಸುತ್ತಾನೆ. ಸರಳಾ ತನ್ನ ಕೊನೆಯಾಸೆಯನ್ನು ಈಡೇರಿಸಿಕೊಳ್ಳದೆ ಸಾವನ್ನಪ್ಪುತ್ತಾಳೆ. ಅಷ್ಟರಲ್ಲಿ ಕುಮುದಾ ತಾಯಿಯಾಗುವ ಹಂತಕ್ಕೆ ತಲುಪಿರುತ್ತಾಳೆ. ಮದುವೆಯೊಂದೇ ಇದಕ್ಕೆ ಪರಿಹಾರವೆಂದು ರಾಮಣ್ಣ ಕುಮುದಳನ್ನು ಮದುವೆಯಾಗುತ್ತಾನೆ. ಮದುವೆಯಾದರೂ ದಾಂಪತ್ಯ ಜೀವನ ನಡೆಸಲಾಗದೆ, ಮಾನಸಿಕ ದ್ವಂದ್ವಗಳಲ್ಲಿ ತೊಳಲಾಡುತ್ತಿರುತ್ತಾರೆ. ಇದೆಲ್ಲ ಕಾದಂಬರಿಯ ಮೊದಲ ಭಾಗ 'ಅನಾದಿ'ಯಲ್ಲಿ ನಡೆದುಹೋಗುತ್ತದೆ.

ಕಾದಂಬರಿಯ ಎರಡನೆಯ ಭಾಗ 'ಅನಂತ'ದ ಘಟನೆಗಳು ಹತ್ತು ವರ್ಷಗಳ ತರುವಾಯಕ್ಕೆ ಸಂಬಂಧಿಸಿದ್ದು; ಅವರು ಎದುರಿಸುತ್ತಿರುವ ನೈತಿಕ ಸಮಸ್ಯೆಗಳು ಹಾಗೆಯೇ ಇವೆ. ಮಗ ಮೋಹನನ ಜನ್ಮದೊಂದಿಗೆ ಅವರ ದಾಂಪತ್ಯ ವಿರಸ ಪರಿಹಾರವಾಗಬಹುದೆಂಬ ಆಶಾವಾದವೂ, ಈಡೇರುವುದಿಲ್ಲ. 'ಅನಂತ'ದ ಕೊನೆಗೆ ಸತ್ಕಾರ ಸಮಾರಂಭಕ್ಕೆ ಮೋಹನನನ್ನು ಕರೆದುಕೊಂಡು ಹೋಗಬೇಕೆಂಬ ಆಸೆಯನ್ನು ರಾಮಣ್ಣ ಮತ್ತು ಕುಮುದರು ಹೊಂದಿರುತ್ತಾರೆ. ಆದರೆ ಅಪಘಾತದಲ್ಲಿ ಮೋಹನ ದುರ್ಮರಣಕ್ಕೀಡಾಗಿ ಅದು ಸಾಧ್ಯವಾಗದೆ, ಅನೇಕ ವ್ಯಂಗ್ಯಗಳೊಂದಿಗೆ ಕಾದಂಬರಿ ಮುಕ್ತಾಯವಾಗುತ್ತದೆ. ಈ ರೀತಿಯಾದ ಕಾದಂಬರಿಯ ಪಕ್ಷಿನೋಟದ ಹಿನ್ನೆಲೆಯಲ್ಲಿ, ಕಾದಂಬರಿಯ ಪ್ರಮುಖ ಪಾತ್ರಗಳಾದ ಕುಮುದಾ ಮತ್ತು ರಾಮಣ್ಣರ ಮನೋವಿಶ್ಲೇಷಣೆಯ ಮೂಲಕ ಕಾಮ–ಪ್ರೇಮ ಮೀಮಾಂಸೆಯನ್ನು ವ್ಯಕ್ತ ಪಡಿಸಬಹುದಾಗಿದೆ.

"................ಗ್ರೀಕ್ ಪುರಾಣದಲ್ಲಿ ಹೇಳುವಂತೆ, ನಾವು ಯಾವಾಗಲೂ ನಮ್ಮ ಸಾಮೂಹಿಕ ಸುಪ್ತಚೇತನದಲ್ಲಿ ಹುದುಗಿರುವ ವಿರುದ್ಧ ಲಿಂಗದ ಮುಖವನ್ನು ನೋಡಬಯಸುತ್ತಿರುತ್ತೇವೆ. ಇದರ ಫಲವಾಗಿ ಪ್ರಥಮ ದರ್ಶನದಲ್ಲೇ ರಾಮಣ್ಣ-ಕುಮುದರ ಆಕರ್ಷಣೆಯಾಗುತ್ತದೆ (ಈ ಕಾದಂಬರಿಯಲ್ಲಿ ಪ್ರಥಮ ಸ್ಪರ್ಶದಲ್ಲೇ ರಾಮಣ್ಣ – ಕುಮುದರ ಆಕರ್ಷಣೆಯಾಗುತ್ತದೆ). ನಮ್ಮಲ್ಲಿ ಹುದುಗಿರುವ ಅನ್ಯಲಿಂಗದ ಪ್ರಾಚೀನ ರೂಪವು ನಮ್ಮಲ್ಲಿರುವ ಬಯಕೆಗಳನ್ನು ಅಥವಾ ಕೊರತೆಗಳನ್ನು ಪೂರೈಸಲು ಪ್ರಯತ್ನಿಸುತ್ತದೆ. ಆದುದರಿಂದಲೇ ನಮ್ಮಲ್ಲಿ ಹುದುಗಿರುವ ಅನ್ಯಲಿಂಗದ ಪ್ರಾಚೀನ ರೂಪವನ್ನು ಕಂಡಾಗ ಆಕರ್ಷಿತರಾಗುತ್ತೇವೆ.[೩] ಯೂಂಗ್‌ನ ಮನೋವಿಶ್ಲೇಷಣಾ ಸಿದ್ಧಾಂತದ ಹಿನ್ನೆಲೆಯಲ್ಲಿ ರಾಮಣ್ಣ ಮತ್ತು ಕುಮುದರ ನಡುವೆ 'Love at first touch' ಆಗಿರುವುದು ಕಂಡುಬರುತ್ತದೆ.

ಕೈಗೆ ಕೈ ಸೋಂಕಿದ ಕುಮುದಳ ಮೊದಲ ಅನುಭವ ಹೀಗಿದೆ."ಅದೊಂದು ಅನುಭವವನ್ನು ಪಡೆದಾಕ್ಷಣ ತಾನು ಸತ್ತಿದ್ದರೂ ತನ್ನ ಜನ್ಮ ಸಾರ್ಥಕವಾದಂತೆ ಎಂದು ಅನಿಸಿತ್ತವಳಿಗೆ. ಸಾವು-ಜೀವ! ಅದೊಂದುಕ್ಷಣ ತಾನು ಜೀವದಿಂದಿರುವಳೆ ಇಲ್ಲವೆ ಎಂಬುದರ ಎಚ್ಚರ ಕೂಡ ಇದ್ದಿರಲಿಲ್ಲ. ಮೈ ಪುಳಕಿತವಾಗಿತ್ತು. ತೊಡೆಗಳು ನಡುಗುತ್ತಿದ್ದವು, ಎದೆ ಹಿಗ್ಗಿ ಹುಚ್ಚೆದ್ದು ಕುಣಿದಾಡುವುದೇನೋ ಎನ್ನುವಂತೆ ಹಾರುತ್ತಿತ್ತು. ತುಟಿ ಕಂಪಿಸುತ್ತಿದ್ದವು. ನಾಲಗೆ ಒಣಗಿದಂತಿದ್ದರೂ ಬಾಯಿಗೆ ನೀರೂರಿದಂತೆನಿಸಿತ್ತು. ಎರಡೂ 'ಎದೆ'ಗಳಲ್ಲಿ ಮಿಂಚಿನ ಒಂದು ಸುಖಕರವಾದ ವೇದನೆ. ಅಂದಿನಿಂದ ತಾನು ರಾಮಣ್ಣನ ಸೊತ್ತಾದಳು, ದೇಹದಿಂದಲ್ಲ, ಹೃದಯದಿಂದ[೪]. ಕೈ ಬೆರಳಿನ ಸೋಂಕಿನಿಂದಲೇ ಇಡೀ ದೇಹಕ್ಕೆ ಹೊಸ ಜೀವವನ್ನು ಕೊಟ್ಟವನಿಗೆ, ಇಡಿಯ ದೇಹವನ್ನೇ ಅರ್ಪಿಸುವುದು ಕಠಿಣವಾಗಿರಲಿಲ್ಲ ಕುಮುದಳಿಗೆ.

ರಾಮಣ್ಣನ ನೈತಿಕ ಪ್ರಶ್ನೆ ಇದಕ್ಕಿಂತ ಭಿನ್ನವಾದದ್ದು; ಕುಮುದಳ ಬಗ್ಗೆ ತನ್ನ ಭಾವ ಕಾಮವೋ, ಪ್ರೇಮವೋ ಎನ್ನುವುದರ ಬಗ್ಗೆ ಅವನಲ್ಲಿ ಬಲವಾದ ಸಂಶಯಗಳಿವೆ. ಕೆಸರಿನಲ್ಲಿ ಕಾಲು ಸಿಕ್ಕಂತಾಗುತ್ತದೆ, ರಾಮಣ್ಣನ ಸ್ಥಿತಿ. ಕುಮುದಳು ಈಗ ತನಗೆ ತೊಡಕಾಗಿದ್ದಾಳೆ ಎನಿಸುತ್ತದೆ." ಆ ದಿನ ತಾನು ಆಕೆಯನ್ನು ಒಮ್ಮೆಲೆ ಅಪ್ಪಿಕೊಂಡು ಮುದ್ದಿಟ್ಟದ್ದೇಕೆ? ಬುದ್ಧಿ ಪಕ್ವವಾಗಿದೆ. ಮನಸ್ಸು ಸುಸಂಸ್ಕೃತವಾಗಿದೆ, ಆದರೆ ದೇಹದ ಮೇಲೆ ಮಾತ್ರ ಮನುಷ್ಯನ ನಿಯಂತ್ರಣ ಎಂದಿಗೂ ಶಕ್ಯವಿಲ್ಲ. ಮನಸ್ಸನ್ನು ತಡೆಯುವುದು ಶಕ್ಯವಿದೆ. ಆದರೆ ದೇಹವನ್ನು ತಡೆಯುವುದು ಹೇಗೆ? ದೇಹವು ದಡ್ಡನಂತೆ ಹೇಳಿದರೆ ತಿಳಿಯುವುದಿಲ್ಲ; ದೇಹವು ಪಶುವಿನಂತೆ ನಿಸರ್ಗವನ್ನೇ ಹಿಂಬಾಲಿಸಿ ನಡೆಯುವುದು; ಇಂತಹ ದೇಹಶಕ್ತಿ ಅಂದು ತನ್ನ ಬುದ್ಧಿ-ಮನಸ್ಸುಗಳನ್ನು

ಜಯಿಸಿರಬೇಕು, ಹುಟ್ಟಿದ ದೇಹ ಮತ್ತೊಂದು ದೇಹವನ್ನು ಹುಟ್ಟಿಸಲೇಬೇಕು, ದೇಹದ ಹುಟ್ಟುಗುಣವದು. ತನ್ನ ದೇಹವು ಹಾಗೆಯೇ ನಡೆದುಕೊಂಡಿತ್ತು ಆ ರಾತ್ರಿ, ಸರಲೆ ಹಾಸಿಗೆ ಹಿಡಿದಂದಿನಿಂದ ತನ್ನ ದೇಹವು ಹೆಚ್ಚು ಹಸಿದಿರಬೇಕು. ಅವಳ ಸಾನಿಧ್ಯ –ಸಹವಾಸಗಳಿಂದ ಆ ಹಸಿವು ಮರೆತಿರಬೇಕೆ ಹೊರತು ಹಿಂಗಿರಲಿಕ್ಕಿಲ್ಲ. ಇಲ್ಲವಾದರೆ ಮೊದಲ ಸಲ ತನ್ನ ದೃಷ್ಟಿಗೆ ಬಿದ್ದೊಡನೆ – ಹದ್ದಿನಂತೆ ಹಾರಿ ಅದನ್ನು ಹೊಡೆಯುತ್ತಿರಲಿಲ್ಲ. ಅಂದು ಕುಮುದಳನ್ನು ಗಟ್ಟಿಯಾಗಿ ಬಿಗಿದಪ್ಪಿ, ಅವಳ ಹಣೆ, ತುಟಿ, ಕಣ್ಣೆವೆ, ಗಲ್ಲ, ಗದ್ದ, ಎದೆ, ಭುಜ ಇವುಗಳನ್ನು ಒಂದೇ ಸಮನೆ ಚುಂಬಿಸುವಾಗ ತಾನು ಆಕೆಗೆ ರಾಕ್ಷಸನಂತೆ ಕಂಡಿರಬಹುದಲ್ಲವೇ?"[೫] ಎಂದು ಆತಂಕ ಆಶ್ಚರ್ಯ ವ್ಯಕ್ತಪಡಿಸುತ್ತಾನೆ ರಾಮಣ್ಣ.

ಕುಮುದಳು ಅವನ ತೋಳ ಸೆರೆಯಿಂದ ಓಡಿ ಹೋದ ಮೇಲೆ ರಾಮಣ್ಣನಿಗೆ ಎಚ್ಚರ ಬಂದಂತಾಗಿತ್ತು. ಅವನ ಅರಿವೇ ಅವನಿಗಿರಲಿಲ್ಲ. ತಾನು ಮಾಡಿದ್ದು ತಪ್ಪು ಎನಿಸುತ್ತದೆ. ಬುದ್ಧಿಪೂರ್ವಕ ಮಾಡಿದ್ದಲ್ಲ. ಇನ್ನೊಮ್ಮೆ ಹೀಗಾಗದಂತೆ ಎಚ್ಚರಿಕೆಯಿಂದಿರಬೇಕೆಂದು ಸಮಾಧಾನ ಮಾಡಿಕೊಂಡರೂ, ಕುಮುದಳ ಆಲಿಂಗನದ ಸುಖವನ್ನು ಮರೆಯಲು ಸಾಧ್ಯವಾಗುತ್ತಿಲ್ಲ ಈ ಕಾಮಣ್ಣನಿಗೆ! ಅಲ್ಲ ರಾಮಣ್ಣನಿಗೆ. ಅವನ ಮನಸ್ಸು ಗೊಂದಲದ ಗೂಡಾಗಿದೆ. ಹತಾಶೆ ಅವಮಾನಗಳಿಂದ ಕಾಮ ಜೀವನವು ತನ್ನನ್ನು ಅಪಹಾಸ್ಯಕ್ಕೀಡು ಮಾಡಿತಲ್ಲ ಎಂದು ಚಡಪಡಿಸುತ್ತಾನೆ.

ಕುಮುದಳೊಡನೆಯ ಸರಸದೊಡನಾಟ ಅವನಿಗೊಂದು ಹೊಸ ಶಕ್ತಿಯನ್ನು, ಸ್ಫೂರ್ತಿಯನ್ನು ನೀಡುತ್ತದೆ.ಅದೇ ಪ್ರೇರಣೆಯಿಂದ ಒಂದು ಹೊಸ ಪುಸ್ತಕವನ್ನು ಬರೆಯಲು ಪ್ರಾರಂಭಿಸುತ್ತಾನೆ. ಎಂದಿಗಿಂತಲೂ ಹೆಚ್ಚು ಮೈ ಮರೆತು ಬರೆಯದೊಡಗಿದ್ದಾನೆ ಇವತ್ತು. ರಾಮಣ್ಣನಿಗೆ ಆಶ್ಚರ್ಯವಾಗಿತ್ತು. ಸಮಾಜದ ದೃಷ್ಟಿಯಿಂದ ತಾನು ಮಾಡಿದ್ದು ತಪ್ಪು, ಅಪರಾಧ, ಪಾಪಕೂಡ. ಆದರೂ ಅವನ ಮನಸ್ಸು ಉಲ್ಲಸಿತವಾಗಿದೆ, ಬುದ್ಧಿ ಚುರುಕಾಗಿದೆ, ದೇಹ ಬಲಗೊಂಡಂತಾಗಿದೆ! ಯಾಕೆ? ಕುಮುದಳಲ್ಲಿ ತನ್ನ ಪ್ರೀತಿ ಇರಬಹುದೇ? ಎಂದು ಸಂಶಯಗೊಳ್ಳುತ್ತಾನೆ.

ದೇಹ–ಬುದ್ಧಿ ಇವೆರಡರ ತಿಕ್ಕಾಟದಿಂದ ರಾಮಣ್ಣ ಕೆಲವು ದಿನಗಳವರೆಗೆ ಘಾಸಿಯಾಗಿದ್ದನು. ದೇಹಕ್ಕೆ ಬೇಕೆನಿಸಿದ್ದು, ಬುದ್ಧಿಗೆ ಬೇಡವೆನಿಸುತ್ತಿತ್ತು. ಇದಕ್ಕೆ ಸಂಬಂಧಿಸಿದಂತೆ ಯೂಂಗನ ಮನೋವಿಶ್ಲೇಷಣಾ ಸಿದ್ಧಾಂತ: "ಅಹಂ ಸಮಾಜಬಾಹಿರವಾದ, ನೀತಿಬಾಹಿರವಾದ ಯಾವುದೇ ಕೆಲಸವನ್ನು ಮಾಡಲು ಸಮಯ ಸಂದರ್ಭವನ್ನು ಗಮನಿಸಿ, ಅನುಕೂಲವಾದಾಗ ಮಾಡಿ ಮುಗಿಸುತ್ತದೆ.

ಪ್ರತಿಕೂಲವಾಗಿದ್ದರೆ ಆ ಕಾರ್ಯವನ್ನು ಮುಂದೂಡುತ್ತದೆಯೇ ವಿನಃ ಆವೇಗದಿಂದ ಮಾಡುವುದಿಲ್ಲ. ಆದರೆ 'ಆತ್ಮಸಾಕ್ಷಿ', ಮಾಡಬೇಕಾದ ಕಾರ್ಯ ಅಧರ್ಮ–ಅನೀತಿಯುತವಾದುದಾದರೆ, ಅದನ್ನು ಸಂಪೂರ್ಣವಾಗಿ ಕೈ ಬಿಡುತ್ತದೆಯೇ ವಿನಃ ಮುಂದೂಡುವುದಿಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ. "ಅಹಂ" ತಡೆ ಎನ್ನುತ್ತದೆ; 'ಆತ್ಮ ಸಾಕ್ಷಿ' ಬೇಡವೇ ಬೇಡ ಎನ್ನುತ್ತದೆ".[೬]

ಆದರೆ ಯಾವಾಗಲೂ ದೇಹದ ಬೇಡಿಕೆ ಸಂತೃಪ್ತವಾದ ತರುವಾಯದಲ್ಲಿಯೇ, ಎಷ್ಟೋ ಸಲ ಬುದ್ಧಿಯು ಬೇಡವೆಂದು ವಾದಿಸಿದಷ್ಟೂ, ದೇಹದ ಹಟ ಹೆಚ್ಚಾಗುತ್ತಿತ್ತು. ಆದರೂ ದೇಹ–ಬುದ್ಧಿಗಳು ಪರಸ್ಪರ ವಿರುದ್ಧವಾಗಿ ಹೋರಾಡುತ್ತಿವೆ ಎಂದೂ ಹೇಳುವಂತಿರಲಿಲ್ಲ. ಯಾಕೆಂದರೆ ಪ್ರತಿಸಲ ದೇಹ ತೃಪ್ತಿಯಿಂದ ತಣಿದಂತೆ, ಬುದ್ಧಿ ಚುರುಕಾಗುತ್ತಿತ್ತು. ಪ್ರತಿಯೊಂದು ನೈಸರ್ಗಿಕ ವಾಸನೆಗೂ ಸಕಾಲದಲ್ಲಿ ತೃಪ್ತಿ ಇಲ್ಲದಿದ್ದರೆ, ಅದು ಮಾನವನನ್ನು ಹೀಗೆ ಹುಚ್ಚು ಹಿಡಿಸಿ ಕುಣಿಸಬಹುದು.

ಉಪನಿಷತ್ತಿನಲ್ಲಿ ಹೇಳಿದ ಹಾಗೆ ಕಾಮ–ಕಾಮವಾಸನೆ ಇವೆರಡೂ ಸೃಷ್ಟಿಸುವ ಮೂಲಶಕ್ತಿ ಎಂದು ಹೇಳಿದ್ದರಿಂದ, ಇದುವರೆಗಿನ ತನ್ನ ನಡತೆಗೆ ಉಪನಿಷತ್ತಿನ 'ಸರ್ಟಿಫಿಕೇಟು' ಸಿಕ್ಕಂತಾಯಿತು ಎಂದು ಸಮರ್ಥಿಸಿಕೊಳ್ಳುತ್ತಾನೆ ರಾಮಣ್ಣ. ಶರೀರ ಸಂಬಂಧಗಳ ಉದ್ದೇಶ ನಿಸರ್ಗವನ್ನು ನಡೆಸುವುದು; ಆ ಕಾರ್ಯವನ್ನು ತಾನು ಮತ್ತು ಕುಮುದ ಪೂರೈಸಿದ್ದೇವೆ. ಆದುದರಿಂದ ತಾವು ತಪ್ಪಿತಸ್ಥರಲ್ಲ ಎಂದು ಸಮಾಧಾನ ತಂದುಕೊಳ್ಳಲು ಪ್ರಯತ್ನಿಸುತ್ತಾನೆ.

ರಾಮಣ್ಣ ಕುಮುದಳ ಸಹವಾಸವನ್ನು ಬಯಸುವುದು ತನ್ನ ಸೃಜನಶೀಲತೆಯನ್ನು ಉಳಿಸಿಕೊಳ್ಳುವುದಕ್ಕಾಗಿ. "ನೀನು ನನ್ನ ಸ್ಫೂರ್ತಿದೇವಿ ಸುಳ್ಳಲ್ಲ, ಬೇಕಾದರೆ ನನ್ನ ಕೋಣೆಗೆ ಬಂದು ನೋಡು, ನಿನ್ನ ಸಹವಾಸದಿಂದ ಪ್ರೇರಿತನಾಗಿ ನಾನು ಹೊಸ ಪುಸ್ತಕವನ್ನು ಪ್ರಾರಂಭಿಸಿದ್ದೇನೆ. ಒಂದು ರಾತ್ರಿ ನಿನ್ನನ್ನು ಕಾಣದಿದ್ದರೆ, ನನ್ನ ಲೇಖನಿ ಕುಂಠಿತವಾಗುವುದು........ನನ್ನ ಸಾಹಿತ್ಯ ಜೀವನದ ಉಸಿರು ನೀನು!"[೭] ಎನ್ನುವ ರಾಮಣ್ಣ ಸರಳೆಯಿಂದ ಸಿಗಬೇಕಾದ ಸ್ಫೂರ್ತಿಯನ್ನು ಈಗ ಕುಮುದಳಿಂದ ಪಡೆಯುತ್ತಿರುವುದು ಗಮನಾರ್ಹ.

ಕುಮುದ ಮತ್ತು ರಾಮಣ್ಣರ ಮಾನಸಿಕ ದ್ವಂದ್ವಗಳು ಕಾಡುತ್ತಿದ್ದರೂ, ಅವರ ಕಾಮನಾಟಕ್ಕೆ ತೊಂದರೆಯಾಗಿರಲಿಲ್ಲ. ರಾಮಣ್ಣನ ದಾರಿಯನ್ನು ಪ್ರತಿದಿನ ರಾತ್ರಿ ಕಾಯುತ್ತಾ ಕುಮುದಾ ಚಡಪಡಿಸುತ್ತಿದ್ದಳು. ರಾಮಣ್ಣ ಸರಳೆಯೊಡನೆ ಏಕಾಂತದಲ್ಲಿ ಮಾತನಾಡುತ್ತಾ ಕುಳಿತು, ಒಂದು ದಿನ ತಡಮಾಡಿದ್ದಕ್ಕೆ ಅವನೊಡನೆ ಮನಸ್ತಾಪ ಮಾಡಿಕೊಳ್ಳುತ್ತಾಳೆ. ಸಾಯೋ ತನಕ ಕಣ್ಣೆತ್ತಿಯೂ ಅವನ ಮುಖ ನೋಡಬಾರದೆಂದು

ತೀರ್ಮಾನಿಸುತ್ತಾಳೆ. ಆದರೆ ರಾಮಣ್ಣನ ಪ್ರೀತಿಯ ಆಶ್ರಯ ದೊರೆತ ತಕ್ಷಣ, ಅವಳ ದೇಹ ಕರಗಿ ನೀರಾಗುತ್ತದೆ. ದೇಹದ ಆಶ್ರಯ ತಪ್ಪಿದ್ದಕ್ಕೇನೋ ಎನ್ನುವಂತೆ, ಅವಳ ಹೃದಯ ರಾಮಣ್ಣನ ಹೃದಯದ ಮೊರೆ ಹೋಗುತ್ತದೆ. ಸದ್ಯದ ಸುಖದಲ್ಲಿ ತನ್ಮಯಳಾಗುತ್ತಾಳೆ. 'ದೇವಾ ನಾನು ಅವರನ್ನು ಪ್ರೀತಿಸಿದಂತೆ, ಅವರೂ ನನ್ನನ್ನು ಪ್ರೀತಿಸುವಂತೆ ಮಾಡು' ಎಂದು ಪ್ರಾರ್ಥಿಸುತ್ತಾಳೆ.

ಒಂದು ರಾತ್ರಿ ರಾಮಣ್ಣ ಕುಮುದಳೊಡನೆ ಪಶುವಿನಂತೆ ನಡೆದುಕೊಳ್ಳಲು ಅವನ ಇಂದ್ರಿಯ ಸುಖದ ಹಪಾಹಪಿ ಕಾರಣವಾಗಿತ್ತು. 'ಪಶು! ನಾನು ಪಶು!'ಎಂದು ಹಳಿದುಕೊಂಡಿದ್ದ. ಆಗ ಸುಖದ ಕನಸುಗಳಿದ್ದವು, ಆದರೆ ಈಗ ಕನಸಿನಲ್ಲಿಯೂ ಸುಖವಿಲ್ಲ ಎಂದು ಬೇಸರಗೊಂಡಿದ್ದಾನೆ. ಏಕೆಂದರೆ ಕುಮುದಳು ತನ್ನನ್ನು ಪ್ರೀತಿಸುತ್ತಿದ್ದಾಳೆ! ಈ ಮಾತು ಹೊಳೆದಾಗ ರಾಮಣ್ಣನ ಎದೆ ಧಸ್ಸೆಂದಿತ್ತು. ಇದೇನು ಹೊಸ ತೊಡಕು ಎಂದುಕೊಂಡಿದ್ದನು. ಮೇಲಾಗಿ ತನ್ನ ಕೈಮೀರಿದ ತೊಡಕು; ತಾನೊಂದು ಬಗೆದರೆ, ದೈವವೊಂದು ಬಗೆಯುತ್ತಿದೆಯಲ್ಲ–ಒಳಗಿನ ಪ್ರಪಂಚವೇ ವಿಚಿತ್ರವಾಗಿದೆ ಎಂದುಕೊಳ್ಳುವನು. ರಾಮಣ್ಣನಿಗೆ 'ಕಾಮ' ಬೇಕಾಗಿದೆ. ಆದರೆ ಪ್ರೇಮ ಬೇಕಾಗಿಲ್ಲ; ಕುಮುದಳ ಜೊತೆ ಪ್ರಣಯ ಬೇಕಾಗಿದೆ. ಪ್ರೀತಿ ಬೇಕಾಗಿಲ್ಲ. ಎರಡನೆಯ ಮದುವೆಯಂತೂ ಬೇಡವೇ ಬೇಡವಾಗಿದೆ. ಇದುವರೆಗಿನ ತನ್ನ ನಡತೆ ಕುಮುದಳಿಗೆ ಪ್ರೋತ್ಸಾಹ ಕೊಟ್ಟಿದ್ದಕ್ಕೆ ತನ್ನ ಮೂರ್ಖತನಕ್ಕೆ ತಕ್ಕ ಪ್ರಾಯಶ್ಚಿತ್ತ ಎಂದು ಬೈದುಕೊಳ್ಳುತ್ತಿದ್ದಾನೆ. ಕಾಮ ಜೀವನ ಎಂದರೆ ಹೆಣ್ಣಿಗೆ ಮೊದಲು ಮದುವೆಯ ವಿಚಾರವೇ! ಒಂದು ವಾಸನೆಯ ತೃಪ್ತಿಗಾಗಿ ಅವರ ವಿಚಾರವಿಲ್ಲ; ಅದಕ್ಕೊಂದು ನೈತಿಕ ಬಂಧನದ ಹಿನ್ನೆಲೆ ಬೇಕೆ ಬೇಕು; ಎಂಬ ವಿಚಾರ ಬಂದು ಹೋಗುತ್ತದೆ. " 'Romantic love' ಅಂದರೆ ಸುಳ್ಳು ಪ್ರೀತಿ. ಇದು ಶರೀರದ ಆಕರ್ಷಣೆ ಅಷ್ಟೆ. ಈ ಪ್ರೀತಿಗೆ ಆಳವೂ ಇಲ್ಲ; ಬದ್ಧತೆಯೂ ಇಲ್ಲ" ಎಂದು ತನ್ನ ಮನೋವಿಶ್ಲೇಷಣಾ ಸಿದ್ಧಾಂತದಲ್ಲಿ ಎರಿಕ್ ಫ್ರಾಮ್ ವಿವರಿಸುತ್ತಾನೆ. ರಾಮಣ್ಣನ ವಿಚಾರದ ಹಿನ್ನೆಲೆಯಲ್ಲಿ ಈ ಮಾತು ಉಚಿತವೆನಿಸುತ್ತದೆ.

ರಾಮಣ್ಣನಿಂದ ಪವಿತ್ರ ಪ್ರೇಮವನ್ನು ಬಯಸುತ್ತಿದ್ದ ಕುಮುದಳಿಗೆ ನಿರಾಸೆಯಾಗಲಿಕ್ಕೆ ತಡವಾಗಲಿಲ್ಲ. ರಾಮಣ್ಣ ತನ್ನನ್ನು ಮದುವೆಯಾಗಲು ಸಿದ್ಧನಿಲ್ಲವೆಂಬ ವಿಚಾರ ತಿಳಿದು ದಿಗಿಲುಗೊಂಡಳು. ರಾಮಣ್ಣ ಮದುವೆಯಾಗಲಿ, ಆಗದಿರಲಿ ತನ್ನ ದೇಹ ಮಾತ್ರ ಅವನದೇ ಸೊತ್ತು. ಒಂದು ತರಹದ ಯಜ್ಞದಲ್ಲಿ ತನ್ನ ದೇಹ ಆಹುತಿಯಾಗಿದೆ ಎಂದು ಸಂಕಟ ಪಡುತ್ತಾಳೆ. ಈಗ ತಾನು ಅವರಿಗೆ ಬೇಡವಾಗಿದ್ದೇನೆ. ಈ ಜಗತ್ತಿಗೇ ಬೇಡವಾಗಿದ್ದೇನೆ. ದೇಹದಿಂದ ವಿಧವೆಯಲ್ಲ,

ತನ್ನನ್ನು ಸಾಯುವವರೆಗೂ 'ಹೃದಯದಿಂದ ವಿಧವೆ' ಎನ್ನುತ್ತ ಅವಳ ಮೈ ಗದಗದ (ದಗದಗ) ನಡುಗುತ್ತಿತ್ತು. ಮನಸ್ಸಿಗೆ **ಅಭಿಮಾನವಿದ್ದಂತೆ ದೇಹಕ್ಕೆ ಸ್ವಾಭಿಮಾನ ಎಂಬುದು ಇಲ್ಲವೇ ಇಲ್ಲ ಎಂದುಕೊಳ್ಳುತ್ತಾಳೆ.**

ಜೀವನ ಪ್ರೀತಿ ಕಡಿಮೆಯಾದರೆ, ಸಾವಿನ ಪ್ರೀತಿ ಅದರ ಜಾಗವನ್ನು ಆಕ್ರಮಿಸುತ್ತದೆ. ಮೂರು ವರ್ಷಗಳ ದೀರ್ಘಕಾಲದ ಅನಾರೋಗ್ಯದಿಂದ ಬಳಲಿ-ಬೆಂಡಾದ ಸರಳೆಯು ಈಗ ಬದುಕುವ ಭರವಸೆಯನ್ನು ಸಂಪೂರ್ಣ ಕಳೆದುಕೊಂಡಿದ್ದಾಳೆ. ತನ್ನ ಜೀವನದ ಕೊನೆಯ ವಾಸನೆ ಎಂಬಂತೆ ಅವರಿಬ್ಬರ ಮದುವೆಯ ವಿಚಾರವನ್ನು ರಾಮಣ್ಣನ ಮುಂದೆ ಪ್ರಸ್ತಾಪ ಮಾಡಿದಾಗ, ಅವನು ವಿಚಾರಿಸಲು ಇನ್ನೆರಡು ದಿನ ಕಾಲಾವಕಾಶ ಬಯಸುತ್ತಾನೆ. ಆದರೆ ಮರುದಿನವೇ ಶುದ್ಧ ಅಂತಃಕರಣದ ಸರಳಾ ತನ್ನ ಕೊನೆಯ ವಾಸನೆಯೊಂದಿಗೆ, ಕೈಲಾಸವಾಸಿಯಾಗುತ್ತಾಳೆ. ರಾಮಣ್ಣ ಪ್ರೇಮಣ್ಣನಾಗದೆ, ಕುಮುದಳ ವಿಷಯದಲ್ಲಿ ಕಾಮಣ್ಣನಾಗಿರಲು ಮಾತ್ರ ಬಯಸಿದ್ದೆ, ಅವನ ಮೂರ್ಖತನದ ಪರಮಾವಧಿ ಎನಿಸುತ್ತದೆ. ಸರಳಾ ರಾಮಣ್ಣನ ಬಗ್ಗೆ ಕೇವಲ ಸಹಾನುಭೂತಿಯನ್ನು ಅಲ್ಲ, ಅದಕ್ಕಿಂತಲೂ ಮಿಗಿಲಾದ ತದನುಭೂತಿ ಹೊಂದಿದ್ದಳು. 'ಪ್ರೇಮಕ್ಕೆ ಮಾನವನನ್ನು ಮತ್ತು ಅವನ ಪರಿಸರವನ್ನು ಶ್ರೀಮಂತಗೊಳಿಸುವ ಸಾಮರ್ಥ್ಯವಿರುತ್ತದೆ' ಎಂಬ ಸಮಾಜಶಾಸ್ತ್ರಜ್ಞ ಸೋರೋಕಿನ್‌ರ ಮಾತಿನಂತೆ, ರಾಮಣ್ಣನ ವಿಷಯದಲ್ಲಿ ಸರಳಾ ನಿಸ್ವಾರ್ಥ ಪ್ರೇಮ ಪುತ್ಥಳಿಯಾಗಿದ್ದಳು.

ಸಾವಿನ ಗಳಿಗೆಯಲ್ಲೂ ಸರಳಕ್ಕ ಅವರಿಗೆ ಬಾಯಿಬಿಟ್ಟು ಹೇಳಿದರೂ, ತನ್ನ ಹೆಂಡತಿಯನ್ನು ಉಳಿಸಿಕೊಳ್ಳಲು ಕೂಡ ತನ್ನನ್ನು ಮದುವೆಯಾಗಲು ಒಪ್ಪಲಿಲ್ಲ. ತನ್ನೊಡನೆ ಮದುವೆ ತಪ್ಪಿಸಿಕೊಳ್ಳಲು ಹೆಂಡತಿಯ ಆಹುತಿಕೊಡಲು ಸಿದ್ಧವಾದರು! ಇದನ್ನರಿತೂ ತನ್ನ ದೇಹ ಅವರ ಸ್ವತ್ತಾಗಿದೆ; ಅಷ್ಟೆ ಅಲ್ಲ............ಈಗ ಅವರ ಸತ್ವವನ್ನು ಒಳಗೆ ಇಟ್ಟುಕೊಂಡಿದೆ. ನಾಚಿಕೆಗೇಡು ಎಂದು ದುಃಖಿಸುವಳು. ಆದರೆ ಒಂದೇ ಒಂದು ವಿಚಾರದಲ್ಲಿ ಅವಳಿಗೆ ವಿಷಾದವಾಗುತ್ತದೆ. ಮನೆಗೆ ಮಕ್ಕಳು ಬೇಕು ಎಂದು ಸರಳಕ್ಕ ಕಣ್ಣಾರೆ ನೋಡದೆ ಹೋದಳಲ್ಲ-ಎಂದು. ಈಗ ಯಾರಿಗೆ ಇದು ಸಂತಸದ ಸಂಗತಿ? ರಾಮಣ್ಣನಿಗೆ? ಅತ್ಯಂತ ತಿರಿಸ್ಕಾರದ ನಗೆಯಿಂದ, ಗೆಲುವಿನ ಮುಖದಿಂದ, ಸುದ್ದಿಯನ್ನು ರಾಮಣ್ಣನಿಗೆ ತಿಳಿಸಬೇಕು; ಅವನಿಗಾಗುವ ವ್ಯಥೆಯನ್ನು ಕಣ್ತುಂಬ ನೋಡಿ ಹೊಟ್ಟೆತುಂಬ ನಗಬೇಕೆಂದು ಬಯಸುತ್ತಾಳೆ.

ರಾಮಣ್ಣನೂ ಕೂಡ ಸರಳೆಯ ಬಲವಾದ ಆಕಾಂಕ್ಷೆಯನ್ನು ಈಡೇರಿಸುವ ನಿಟ್ಟಿನಲ್ಲಿ ಯೋಚನಾ ಮಗ್ನನಾಗಿದ್ದಾಗ, ಕುಮುದ ನಗುತ್ತ ಬರುತ್ತಾಳೆ. ಅವಳಿಗೆ ತನ್ನ ಸಂತೋಷದ ವಿಚಾರ ತಿಳಿಸಬೇಕೆನ್ನುವಷ್ಟರಲ್ಲಿ; ಅವಳೇ ಮುಂದಾಗಿ 'ನಾನೀಗ

ತಾಯಿಯಾಗುವಾಕೆ' ಎಂದು ಒಮ್ಮೆಲೆ ಹೇಳುತ್ತಾಳೆ.ರಾಮಣ್ಣನ ಹೃದಯ ಒಂದು ಕ್ಷಣ ಸ್ತಬ್ಧವಾದರೂ, ಅನಿವಾರ್ಯವಾಗಿ 'ಭಲೆ ಒಳ್ಳೇ ಸಂತೋಷದ ಸುದ್ದಿ' ಎನ್ನುತ್ತಾನೆ. ಅವನ ಉತ್ತರದಿಂದ ಕುಮುದಳೂ ಚಕಿತಳಾಗುತ್ತಾ 'ಈ ಮನುಷ್ಯ ತನ್ನಂತೆ ಎಲ್ಲದಕ್ಕೂ ಸಿದ್ಧನಾಗಿರುವನಲ್ಲ' ಎಂದುಕೊಳ್ಳುತ್ತಾಳೆ. ಮುಂದೆ ಎರಡು ತಿಂಗಳಲ್ಲಿ ಕುಮುದ – ರಾಮಣ್ಣರ ಮದುವೆಯಾಗುತ್ತದೆ. ಅಕ್ಕನ ಮಾತು ನಡೆಸಲಿಕ್ಕೆ ಕುಮುದ, ಹೆಂಡತಿಯ ಕೊನೆಯಾಸೆಯನ್ನು ಈಡೇರಿಸಲು ರಾಮಣ್ಣ ಮದುವೆಯಾಗಲು ಒಪ್ಪಿದರು ಎಂದು ಜನರು ಅವರಿಬ್ಬರ ನಿಷ್ಠೆಯನ್ನು ಪ್ರಶಂಸಿಸುವುದರಲ್ಲಿ ಶ್ರೀರಂಗರ ವ್ಯಂಗ್ಯದ ದರ್ಶನವಾಗುತ್ತದೆ.

'ಅನಾದಿ'ಯ ಘಟನೆಗಳು ನಡೆದ ಹತ್ತು ವರ್ಷಗಳ ತರುವಾಯದ ಸಂದರ್ಭಕ್ಕೆ 'ಅನಂತ'ದ ಘಟನೆಗಳು ನಡೆಯುತ್ತವೆ. ರಾಮಣ್ಣ ಮತ್ತು ಕುಮುದ ಎದುರಿಸುತ್ತಿರುವ ನೈತಿಕ ಸಮಸ್ಯೆಗಳು ಹಾಗೆಯೇ ಉಳಿದುಕೊಂಡಿವೆ. ಈ ಹತ್ತು ವರ್ಷಗಳಲ್ಲಿ ನಡೆದ ಮುಖ್ಯ ಘಟನೆಯೆಂದರೆ, ಮೋಹನನ ಜನ್ಮ. ಆದರೆ ಮೋಹನನ ಬರವು ಕೂಡ ರಾಮಣ್ಣ–ಕುಮುದರ ವಿರಸವನ್ನು ಹೋಗಲಾಡಿಸುವುದಿಲ್ಲ. ಇಷ್ಟೇ ಅಲ್ಲದೆ, ಮೋಹನ ಹುಟ್ಟಿದ ಮೇಲೆ ಎರಡುಸಲ ಕುಮುದ ರಾಮಣ್ಣನನ್ನು ಬಿಟ್ಟು ಅವರ ಸೋದರತ್ತೆಯ ಮನೆಗೆ ಹೋಗಿ, ಅವಳ ಉಪದೇಶಕ್ಕೆ ಬೆಲೆಕೊಟ್ಟು ಮರಳಿ ಬಂದಿದ್ದಾಳೆ. ಅಲ್ಲದೆ ರಾಮಣ್ಣನು ಅವಳು ಹಾಕುವ ಎಲ್ಲ ಕರಾರಿಗೆ ಒಪ್ಪಿಕೊಂಡಿದ್ದಾನೆ. ಆದರೂ ಅವರ ದಾಂಪತ್ಯ ಸಂಬಂಧ ಮುಂದುವರೆಯುವುದಿಲ್ಲ.

'ಅನಂತ'ದ ವರ್ತಮಾನ ಕ್ರಿಯೆ ಒಂದು ಘಂಟೆಯ ಕಾಲಕ್ಕೆ ಸೀಮಿತವಾಗಿದೆ. ಕಾದಂಬರಿಯ ಈ ಭಾಗದಲ್ಲಿ ರಾಮಣ್ಣ ಮತ್ತು ಕುಮುದ ಇಬ್ಬರೂ ತಮ್ಮ ತಮ್ಮ ಕೋಣೆಗಳಲ್ಲಿ ಕುಳಿತು ಜೀವನದ ಹಿಂದಿನ ನೆನಪುಗಳನ್ನು ಮೆಲಕು ಹಾಕುತ್ತಿದ್ದಾರೆ. ಸಾಹಿತಿ ರಾಮಣ್ಣನ ಸತ್ಕಾರ ಸಭೆಗೆ ಇಬ್ಬರೂ ಆಮಂತ್ರಿಸಲ್ಪಟ್ಟಿದ್ದಾರೆ. ಆಟವಾಡಲು ಹೋದ ಮೋಹನನನ್ನು ಕರೆದುಕೊಂಡು ಹೋಗುವ ಇಚ್ಛೆಯಿಂದ ದಂಪತಿಗಳಿಬ್ಬರೂ ತಮ್ಮ ತಮ್ಮ ತಯಾರಿ ನಡೆಸಿದ್ದಾರೆ. ಸಂಘಟನಾ ಸಮಿತಿಯವರ ಬರವಿಗಾಗಿ ಕಾಯುತ್ತಿದ್ದಾರೆ. ದುರಂತವೆಂದರೆ, ಕಾರ್ಯಕ್ರಮಕ್ಕೆ ಕರೆಯಲು ಬಂದ ವಾಹನವೇ ಮೋಹನನಿಗೆ ಹಾಯ್ದು ಅಪಘಾತವಾಗಿ ಸಾವಿಗೀಡಾಗುತ್ತಾನೆ. 'ಅನಂತ'ದ ವರ್ತಮಾನ ಕ್ರಿಯೆ ಕೇವಲ ಒಂದು ಗಂಟೆಗೆ ಸೀಮಿತವಾಗಿದ್ದರೂ ಹತ್ತುವರ್ಷಗಳ ದೀರ್ಘಕಾಲದ ನೆನಪುಗಳನ್ನು ಜೀವಂತಗೊಳಿಸುತ್ತದೆ.

> **"ಕಾಮ ಅನಾದಿ, ಅದಕ್ಕೆ ಅಂತವೇ ಇಲ್ಲ**
> **ಪ್ರೇಮ ಅನಂತ, ಅದರ ಆದಿಯನ್ನೆ ಅರಿಯುವಂತಿಲ್ಲ,**
> **ಅನಾದ್ಯನಂತ ಕಾಮ; ಅನಂತ–ಅನಾದಿ ಪ್ರೇಮ**
> **ಆದ್ದರಿಂದ ಕಾಮವೆಂದರೆ ಪ್ರೇ....................."[೮]**

ಎಂದು ರಾಮಣ್ಣ ಮನಸ್ಸಿನಲ್ಲಿ ಕಾಮ-ಪ್ರೇಮದ ಕುರಿತು ಯೋಚಿಸುತ್ತಿದ್ದಾನೆ. ಕಾಮ, ಪ್ರೇಮ! ತಾನು, ಮನಸ್ಸು! ಎಂದು ಚಿಂತನೆ ಮಾಡುತ್ತಿದ್ದ. ದುಷ್ಯಂತ-ಶಕುಂತಲೆಯರ ವೈವಾಹಿಕ ಜೀವನ ಕುರಿತು ನೆನಪಿಸಿಕೊಳ್ಳುತ್ತಾನೆ.

ರಾಮಣ್ಣ ಮದುವೆಯ ಮೊದಲ ವಾರ್ಷಿಕೋತ್ಸವವೆಂದು ಕುಮುದಳನ್ನ ಉತ್ಸಾಹಗೊಳಿಸಲು ಯತ್ನಿಸುತ್ತಾನೆ. ಕಟ್ಟಿದ ಮನೆ ಸೋರಲು, ಅದನ್ನು ತಪ್ಪಿಸಲು ದುರಸ್ತಿ ಮಾಡುವುದಿಲ್ಲವೆ? ಹಾಗೆ ತಮ್ಮ ಮದುವೆ-ಎಂದಿದ್ದಳು ಕುಮುದ! ಈಕೆ ತನ್ನ ಕುಮುದಳೇ ಎನ್ನಿಸಿತ್ತು ರಾಮಣ್ಣನಿಗೆ. ಒಂದೇ ವರ್ಷ ಮುಂಚಿತ ಬಾಲೆಯಾಗಿದ್ದವಳು, ಈಗ? ತಾಯ್ತನದಿಂದ ಎದೆ ತುಂಬಿದೆ. ಹಿರಿತನದ ಕಳೆ ಬಂದಿದೆ. ಮುಖದಲ್ಲಿ ಆಕರ್ಷಣೆ ಇದೆ.ಮಗುವಿಗೆ ಆಧಾರವಾಗಿದ್ದ ತೊಡೆಗಳು ಹೊಸ ಶಕ್ತಿ ಸೌಂದರ್ಯಗಳನ್ನು ಪಡೆದಿವೆ. ರಾಮಣ್ಣನ ಸ್ಥೈರ್ಯ ಉದುಗಿ, ತಾನು ಬಂದುದೇಕೆಂಬುದನ್ನು ಮರೆತು, 'ಕುಮುದ' ಎಂದಿದ್ದನು. ಗಂಡು ಹೃದಯದ ಕರೆ ಆಗಿದ್ದಿತು ಆ ಕೂಗು, ನಿಸರ್ಗದಲ್ಲಿ ಹೆಣ್ಣನ್ನು ಒಲಿಸಿಕೊಳ್ಳುವ ಗಂಡಿನ ಸರ್ವಶಕ್ತಿಯಾಗಿತ್ತು ಆ ಕೂಗು. ಅದನ್ನು ಕೇಳಿದಾಕ್ಷಣ ಇರಿಯಲು ತಲೆಬಾಗಿನಿಂತ ಹಸುವಿನಂತೆ ಇದಿರಾಗುತ್ತಾಳೆ ಕುಮುದ. ಆಗ ರಾಮಣ್ಣನ ವಿವೇಕ ಶಕ್ತಿ ಭ್ರಾಂತವಾಗಿತ್ತು. ತನ್ನಲ್ಲಿ ಉದ್ಭವಿಸಿದ ವಿಚಾರಗಳಿಗೆ ನಾಚಿಕೆಯಾಗಿತ್ತು.

ಹತ್ತು ವರ್ಷಗಳ ತರುವಾಯ ಇಂದಿಗೂ ಕುಮುದಳಿಗೆ ಈ ಗೂಢ ಬಿಟ್ಟಿರಲಿಲ್ಲ; 'ಒಂದೆಡೆ ಅಗಾಧವಾದ ಪ್ರೇಮ, ಇನ್ನೊಂದೆಡೆ ಅಷ್ಟೇ ದ್ವೇಷ' ರಾಮಣ್ಣನ ಬಗ್ಗೆ. 'ವ್ಯಕ್ತಿಯ ಪ್ರತಿಯೊಂದು ವರ್ತನೆಯ ಹಿನ್ನೆಲೆಯಲ್ಲಿ ಮೂಲ ಲೈಂಗಿಕ ಬಯಕೆ ಅಡಕವಾಗಿರುತ್ತದೆ.'[೯] ಎಂಬ ಸಿಗ್ಮಂಡ್ ಫ್ರಾಯ್ಡ್‌ನ ಮಾತು ಕುಮುದಳ ಈ ಗೂಢತೆಗೆ ಉತ್ತರವಾಗಿದೆಯಲ್ಲವೆ? ರಾಮಣ್ಣ ಮತ್ತು ಕುಮುದರು ತಮ್ಮನ್ನು ತಾವು ವೈಯಕ್ತಿಕವಾಗಿ ಅರ್ಥಮಾಡಿಕೊಳ್ಳುತ್ತಿಲ್ಲ. ಹಾಗೆಯೇ ಪರಸ್ಪರರನ್ನು ಅರ್ಥಮಾಡಿಕೊಳ್ಳುತ್ತಿಲ್ಲ. ದೇಹಾಭಿಮಾನದ ಹುಟ್ಟು ಅವರ ಸಮಸ್ಯೆಯ ಮೂಲವಾಗಿದೆ ಎನಿಸುತ್ತದೆ.

"ಮದುವೆಯಾದ ನಂತರ ಕಾಮಜೀವನ ನಡೆಯಿತೆಂದು ಸರಳೆಯಲ್ಲಿ ಪ್ರೇಮ, ಕಾಮಜೀವನದ ತರುವಾಯ ಮದುವೆಯಾಯಿತೆಂದು ಕುಮುದಳಲ್ಲಿ ವ್ಯಭಿಚಾರ ಎನ್ನಬೇಕೆ"[೧೦] ಎಂಬ ರಾಮಣ್ಣನ ನೈತಿಕ ಪ್ರಶ್ನೆ ತೀರ ಭಿನ್ನವಾದುದು. ಬೌದ್ಧಿಕವಾಗಿ ಈ ಪ್ರಶ್ನೆಗೆ ಉತ್ತರವನ್ನು ನಿಸರ್ಗ ನಿಯಮದ ಹಿನ್ನೆಲೆಯಲ್ಲಿ ಕಂಡುಕೊಂಡು ಸಮಾಧಾನ ತಂದುಕೊಳ್ಳುತ್ತಾನೆ. ಮೋಹನನಲ್ಲಿ ಅವರಿಬ್ಬರಿಗೂ ಇರುವ ಪ್ರೀತಿಯ ಮೂಲಕ ವಿರಸ ಕೊನೆಗೊಳ್ಳಬಹುದು ಎಂಬ ಸೂಚನೆ ಮೂಡುತ್ತಿರುವಂತೆಯೋ,

ಮೋಹನ ಅಪಘಾತಕ್ಕೀಡಾಗಿ ಸಾಯುವುದರಿಂದ ಕಾದಂಬರಿಗೆ ಸುಖಾಂತ ಸಾಧ್ಯತೆಗಳು ತಪ್ಪಿ ಹೋಗುತ್ತವೆ. ದುಷ್ಯಂತ ಶಕುಂತಲೆಯರು ಭರತನ ಮೂಲಕ ಒಂದುಗೂಡಿದಂತೆ ರಾಮಣ್ಣ-ಕುಮುದರೂ ಮೋಹನನ ಕಾರಣದಿಂದಾಗಿ ಒಂದುಗೂಡಬಹುದಿತ್ತು. ಆದರೆ ವಾಸ್ತವಿಕ ಸಂದರ್ಭದಲ್ಲಿ ಶ್ರೀರಂಗರಿಗೆ ದುಃಖಾಂತ ಹೆಚ್ಚು ಸಂಭವ ಎಂದು ಕಂಡಿರಬೇಕು.

'ಅನಂತ'ದ ಕೊನೆಯಲ್ಲಿ ಸೂಚಿತವಾಗುವ ರಾಮಣ್ಣ ಕುಮುದರ ಸಂಬಂಧದ ದುರಂತ ವ್ಯಂಗ್ಯದಷ್ಟೆ ವೇಧಕವಾದ ಇನ್ನೊಂದು ವ್ಯಂಗ್ಯವೂ ಕಾದಂಬರಿಯಲ್ಲಿದೆ. ತನ್ನನ್ನು ಪ್ರಸಿದ್ಧ ಸಾಹಿತಿಯೆಂದು ಜನ ಸತ್ಕರಿಸುವುದೂ ಅವನಿಗೆ ವ್ಯಂಗ್ಯವಾಗಿ ಕಾಣುತ್ತದೆ. ಇಡಿಯ ಪ್ರಪಂಚವೇ ಮಾಯೇ, ನಿಜವಿದ್ದುದು ಕೇವಲ ನಮ್ಮ ಪಾಶವೀ ವೃತ್ತಿಯ ಆಹಾರ, ನಿದ್ರಾ, ಭಯ, ಮೈಥುನದ ಜೀವನ ಮಾತ್ರ. ಮಾನವನ ಇತಿಹಾಸವನ್ನು ಶೋಧಿಸಿದಾಗ ಶ್ರೀರಂಗರಿಗೆ ಕಂಡ ಸತ್ಯ ಕೂಡ ಇದೇ ಆಗಿದ್ದಿತು. "ಆಸೆಗಾಗಿ ಸತ್ತವರು ಕೋಟಿ, ಆಯುಷಕ್ಕಾಗಿ ಸತ್ತುದು ಕೋಟಿ, ಹೊನ್ನು, ಹೆಣ್ಣು, ಮಣ್ಣಿಗಾಗಿ ಸತ್ತುದು ಕೋಟಿ, ಗುಹೇಶ್ವರಾ......." ಎಂಬ ಅಲ್ಲಮನ ವಚನ ಸಂದೇಶವೂ ಪ್ರಸ್ತುತವೆನಿಸುತ್ತದೆ.

ಒಟ್ಟಾರೆ, ದಾಂಪತ್ಯ ಪ್ರೇಮದ ಅಭಿವ್ಯಕ್ತಿಯಲ್ಲಿ ಲೈಂಗಿಕ ಕಾಮದ ಪಾತ್ರ ಎಷ್ಟೇ ಇದ್ದರೂ, ಅವೆರಡೂ ಒಂದೇ ಅಲ್ಲ ಎಂಬುದು ಸ್ಪಷ್ಟ. ಕಾಮ ದಾಂಪತ್ಯ ಪ್ರೇಮದ ಒಂದು ಅಂಶವಷ್ಟೆ. ಅದು ಮುಖ್ಯವಾದ ಅಂಶವೇ ಆಗಿರಬಹುದು. ಆದರೂ ಕಾಮವೇ ಪ್ರೇಮವಲ್ಲ. ಲೈಂಗಿಕ ಸಂಯೋಗ ಒಂಟಿತನವನ್ನು ನಿವಾರಿಸಿಕೊಳ್ಳುವ ದೈಹಿಕ ವಿಧಾನ; ಮಾನಸಿಕವಾದುದಲ್ಲ. ಪ್ರೇಮರಹಿತ ಕಾಮ ಇಬ್ಬರು ವ್ಯಕ್ತಿಗಳ ನಡುವಣ ಸೇತುವೆಯಾಗಲಾರದು. ರಾಮಣ್ಣ ಮತ್ತು ಕುಮುದರ ವಿಷಯದಲ್ಲಿ ಮೋಹನ ಸೇತುವೆಯನ್ನು ಕಟ್ಟಿದರೂ; ಸೇತುವೆ ಶಿಥಿಲವಾಗಿದ್ದಕ್ಕೆ ರಾಮಣ್ಣನ ಪ್ರೇಮ ರಹಿತ ಕಾಮವೇ ಪ್ರಮುಖ ಕಾರಣವೆಂದರೆ ತಪ್ಪಾಗಲಾರದು. ಏಕೆಂದರೆ ದೈಹಿಕ ಸಂಯೋಗ ಐಕ್ಯತೆಯ ಭ್ರಮೆ ಅಷ್ಟೇ, ಸತ್ಯವಲ್ಲ. ಪ್ರೇಮ ರಹಿತವಾದ ಸಂಯೋಗದ ನಂತರ ಗಂಡು ಹೆಣ್ಣುಗಳ ನಡುವಣ ಅಂತರ, ಏಕಾಂಗಿತನ ಅಧಿಕಗೊಳ್ಳುತ್ತದೆ. ರಾಮಣ್ಣ ಮತ್ತು ಕುಮುದರು ಮದುವೆಯಾಗಿ ಹತ್ತು ವರುಷಗಳು ಕಳೆದರೂ, ಮೋಹನ ಜನಿಸಿದ್ದರೂ, ದಾಂಪತ್ಯ ಜೀವನ ನಡೆಸಲು ಸಾಧ್ಯವಾಗಲಿಲ್ಲ. ಒಂದೊಂದು ವೇಳೆ ಪ್ರೇಮ ರಹಿತ ಲೈಂಗಿಕ ಕ್ರಿಯೆ ಗಂಡು-ಹೆಣ್ಣುಗಳ ಮನಸ್ಸಿನಲ್ಲಿ ದ್ವೇಷಾಸೂಯೆಗಳನ್ನು ಹುಟ್ಟಿಸುತ್ತದೆ; ಮಾಡಬಾರದ್ದನ್ನು ಮಾಡಿದ ಅಳುಕು-ತಪ್ಪು ಮಾಡಿದ ಭಾವನೆ ಉದ್ಭವವಾಗುತ್ತದೆ. ಆದ್ದರಿಂದ ದಾಂಪತ್ಯ ಪ್ರೇಮದ ಅಭಿವ್ಯಕ್ತಿಯಲ್ಲಿ, ಒಂದು ವ್ಯಕ್ತಿ ಇನ್ನೊಂದು ವ್ಯಕ್ತಿಗೆ ಸಂಪೂರ್ಣವಾಗಿ ಅರ್ಜಿಸಿಕೊಳ್ಳುವ ಸ್ವಯಂಬದ್ಧ ತೀರ್ಮಾನವಿರುತ್ತದೆ.

ಪ್ರೀತಿ ವಿಶ್ವಾಸಗಳು ದಾಂಪತ್ಯ ಜೀವನದ ಮೇಲೆ ಪ್ರಭಾವ ಬೀರುವ ಪ್ರಮುಖ ಅಂಶಗಳು. ಪರಸ್ಪರರಲ್ಲಿ ನಂಬಿಕೆ, ಗೌರವಗಳಿಲ್ಲದಿದ್ದರೆ ದಾಂಪತ್ಯ ಜೀವನ ನರಕವಾಗುತ್ತದೆ. ದಂಪತಿಗಳು ಒಬ್ಬರಿಗೊಬ್ಬರು ಪೂರಕವಾಗಿರಬೇಕು; ಆಸಕ್ತಿ, ಅಭಿವೃದ್ಧಿಗಳಲ್ಲಿ ಸಾಮ್ಯವಿರಬೇಕು: ಜೀವನದಲ್ಲಿ ಸಾಮರಸ್ಯವಿರಬೇಕು. ಕುಮುದ-ರಾಮಣ್ಣ ಇವರ ಪಾತ್ರಗಳ ಮೂಲಕ ಶ್ರೀರಂಗರು ಕಾಮ-ಪ್ರೇಮ ಮೀಮಾಂಸೆಯನ್ನು ಮನೋವಿಶ್ಲೇಷಣಾ ಸಿದ್ಧಾಂತದ ಹಿನ್ನೆಲೆಯಲ್ಲಿ ಮತ್ತು ಸಾಂಖ್ಯದ 'ಪ್ರಕೃತಿ-ಪುರುಷ' ತತ್ವದ ಚೌಕಟ್ಟಿನಲ್ಲಿ ಮಾಡಿರುವುದು 'ಅನಾದಿ-ಅನಂತ' ಕಾದಂಬರಿಯ ವಿಶೇಷವೆನಿಸುತ್ತದೆ.

ಕೊನೆಟಿಪ್ಪಣಿಗಳು

೧. ಶ್ರೀರಂಗ: ಎನ್ಕೆ ಕುಲಕರ್ಣಿ: ಸಾಹಿತ್ಯ ಅಕಾಡೆಮಿ, ದೆಹಲಿ, ಪು. ೧೧೨.
೨. ವಿರಾಟ ಪುರುಷ : ಜಿ.ಎಸ್. ಆಮೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು. ೩೭೨.
೩. ಕಾರ್ಲ್ ಗೆಸ್ಟೋವ್ ಯೂಂಗ್ ಪು. ೫೭.
೪. ಶ್ರೀರಂಗ ಸಾರಸ್ವತ : ಸಂಪುಟ ೨, ಪು. ೧೩.
೫. ಶ್ರೀರಂಗ ಸಾರಸತ್ವ : ಪು. ೨೯-೩೦.
೬. ಕಾರ್ಲ್‌ಗೆಸ್ಟೋವ್ ಯೂಂಗ್: ಪು. ೩೨.
೭. ಶ್ರೀರಂಗರ ಸಾರಸ್ವತ : ಪು. ೫೩.
೮. ಶ್ರೀರಂಗರ ಸಾರಸ್ವತ : ಪು. ೧೦೩.
೯. ಕಾರ್ಲ್ ಗೆಸ್ಟೋವ್ ಯೂಂಗ್ : ಪು. ೧೪.
೧೦. ವಿರಾಟ ಪುರುಷ : ಪು. ೩೭೮.

ಪರಾಮರ್ಶನ ಗ್ರಂಥಗಳು

೧. ಆಮೂರ ಜಿ.ಎಸ್: 'ವಿರಾಟಪುರುಷ', ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೫
೨. ಕುಲಕರ್ಣಿ ಎನ್ಕೆ: ಶ್ರೀರಂಗ, ಸಾಹಿತ್ಯ ಅಕಾಡೆಮಿ, ದೆಹಲಿ, ೧೯೯೬.
೩. ಚಂದ್ರಶೇಖರ ಸಿ.ಆರ್: 'ನಮ್ಮ ಮಾತು, ವರ್ತನೆ, ವ್ಯಕ್ತಿತ್ವವನ್ನು ನಿರ್ಧರಿಸುವವರು ಯಾರು?' ಎರಿಕ್ ಫ್ರಾಮ್, ವಿಸ್ಮಯ ಪ್ರಕಾಶನ, ಮೈಸೂರು, ೨೦೧೧.
೪. ನಟರಾಜ.ಪಿ: ಕಾರ್ಲ್ ಗೆಸ್ಟೋವ್ ಯೂಂಗ್, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ೨೦೦೨
೫. ಬಸವಣ್ಣ. ಎಂ: ಈಡಿಪಸ್ ಕಾಂಪ್ಲೆಕ್ಸ್, ಅಭಿನವ ಪ್ರಕಾಶನ, ಬೆಂಗಳೂರು, ೨೦೦೭.

□□□

೧೨. ತುಂಬರಗುದ್ದಿ ತಾಮ್ರ ಶಾಸನ : ಪುನರ್ ವಿಮರ್ಶೆ

– ಬಿ.ಎಸ್. ಅನಿಲ ಕುಮಾರ



'ತುಂಬರಗುದ್ದಿ ಕೆರೆ' ತಾಮ್ರ ಶಾಸನ

ಶಾಸನ ಇರುವ ಸ್ಥಳ: ಬೊಮ್ಮಘಟ್ಟ ಗ್ರಾಮ, (ಸಂಡೂರು ತಾಲೂಕು, ಬಳ್ಳಾರಿಜಿಲ್ಲೆ)

ಇದುವರೆಗೆ ಅಪ್ರಕಟಿತವಾಗಿದ್ದ ಈ ತಾಮ್ರಶಾಸನವನ್ನು (ತುಂಬರಗುದ್ದಿ ಗ್ರಾಮದ ಸಮೀಪದಲ್ಲಿರುವ ಬೊಮ್ಮಘಟ್ಟ ಗ್ರಾಮದ ಶಾನುಭೋಗರಾದ ಬಿ. ಭೀಮಸೇನರಾಯರಿಂದ) ಸಂಗ್ರಹಿಸಿ ಅಧ್ಯಯನ ಮಾಡಿದ ಡಾ. ಗಿರಿಜಾ ಅವರು ಒಂದು ಪರಿಚಯಾತ್ಮಕ ಲೇಖನವನ್ನು ಬರೆದಿದ್ದು, ಅದು **'ವಿಜಯನಗರ ಅಧ್ಯಯನ' ಸಂಪುಟ-೧೧ರಲ್ಲಿ (೨೦೦೬ರಲ್ಲಿ)** ಪ್ರಕಟವಾಗಿದೆ. ಅಲ್ಲಿಯ ಕೆಲವು ತಪ್ಪು ಗ್ರಹಿಕೆಯ ಅಭಿಪ್ರಾಯಗಳಿಗೆ ಪ್ರತಿಕ್ರಿಯೆಯ ರೂಪದಲ್ಲಿ ಈ ಲೇಖನವನ್ನು ಸಿದ್ಧಪಡಿಸಲಾಗಿದೆ.

ಈ ತಾಮ್ರಶಾಸನವು ಬೊಮ್ಮಘಟ್ಟ ಗ್ರಾಮದಲ್ಲಿ ದೊರೆತಿರುವುದರಿಂದ **'ಬೊಮ್ಮಘಟ್ಟ ಶಾಸನ'**ವೆಂದು ಹೆಸರಿಸಿದ್ದಾರೆ.	ಆದರೆ ವಾಸ್ತವವಾಗಿ ಇದು ತುಂಬರಗುದ್ದಿ ಗ್ರಾಮದ ಕೆರೆ ಮತ್ತು ಜಮೀನಿಗೆ ಸಂಬಂಧಿಸಿರುವುದರಿಂದ ಇದನ್ನು **'ತುಂಬರಗುದ್ದಿ ಶಾಸನ'**ವೆಂದು ಕರೆಯುವುದೇ ಹೆಚ್ಚು ಸೂಕ್ತ.
'ಸಾಳ್ವ ನರಸಿಂಹರಾಯರ ಆಳ್ವಿಕೆಯ ಕಾಲದಲ್ಲಿ ಕ್ರಿ.ಶ. ೧೪೯೦ರಲ್ಲಿ ಹೊರಡಿಸಿದ್ದ ತಾಮ್ರ ಶಾಸನವು ಒಂದು ದಾನ ಶಾಸನವಾಗಿದೆ' ಎಂದು ನಿರ್ಣಯಿಸಿದ್ದಾರೆ.	ಆದರೆ ವಾಸ್ತವವಾಗಿ **ಇದು ಸಾಳ್ವ ನರಸಿಂಹರಾಯನ ಕಾಲದ ಶಾಸನವಲ್ಲ**. ವ್ಯಾಸರಾಯರು ಅವನ ಕಾಲದಲ್ಲಿ ತಮಗೆ ಬಂದ ಗ್ರಾಮದಲ್ಲಿ **ಬಹುವರ್ಷಗಳ ನಂತರ** ಕೈಗೊಂಡ ಅಭಿವೃದ್ಧಿಕಾರ್ಯಗಳನ್ನು ತಿಳಿಸುವ ಶಾಸನವಾಗಿದೆ.
(ಶಾಸನದ ಕಾಲವನ್ನು ಶಾಲಿವಾಹನ ಶಕೆ ೧೨೫೬ ವಿಭವ ಸಂವತ್ಸರ ಎಂದು ಕಂಡರಿಸಲಾಗಿದೆ.) *'ಶಾಸನದ ಕಾಲ ಕ್ರಿ.ಶ. ೧೩೩೪ ಆಗುತ್ತದೆ. ಆದರೆ ಆಗ ಇನ್ನೂ ವಿಜಯನಗರದ ಸ್ಥಾಪನೆ ಆಗದಿರುವುದರಿಂದ ಸಂವತ್ಸರದ ಆಧಾರದಿಂದ ಕ್ರಿ.ಶ. ೧೪೯೦'* ಎಂದು ನಿರ್ಧರಿಸಿದ್ದಾರೆ.	ವಾಸ್ತವವಾಗಿ ಕ್ರಿ.ಶ. ೧೪೯೦ರಲ್ಲಿ ಸಾಧಾರಣ ಸಂವತ್ಸರ ಇರುತ್ತದೆಯೇ ಹೊರತು ವಿಭವ ಸಂವತ್ಸರ ಇರುವುದಿಲ್ಲ. ಆದರೆ ಕ್ರಿ.ಶ. ೧೫೦೮ರಲ್ಲಿ ವಿಭವ ಸಂವತ್ಸರವಿರುತ್ತದೆ. ಹೀಗಾಗಿ **ಈ ಶಾಸನದ ಕಾಲವನ್ನು ಕ್ರಿ.ಶ. ೧೫೦೮ರ ವಿಭವ ಸಂವತ್ಸರ** ಎಂದು ತಿಳಿಯಬೇಕಾಗಿದೆ.
'ಈ ಶಾಸನದ ಲಿಪಿ ಮತ್ತು ಲೋಹದ ಹಲಗೆಗಳು ಕೇವಲ ನೂರು ವರ್ಷಗಳಷ್ಟು ಮಾತ್ರ ಹಳೆಯದು.	ಹಳೆಯ ಶಾಸನವು ಶಿಥಿಲವಾಗುತ್ತಿದ್ದ ಅವಧಿಯಲ್ಲಿ ಅದರ ಪ್ರತಿಯೊಂದನ್ನು ಸ್ಥಳೀಯವಾಗಿ ತಯಾರಿಸಿದಂತಿದೆ. ಹೀಗಾಗಿ ಈ ಶಾಸನದ ಲಿಪಿ ಮತ್ತು ಲೋಹದ ಹಲಗೆಗಳು ಕೇವಲ ನೂರು ವರ್ಷಗಳಷ್ಟು ಮಾತ್ರ ಹಳೆಯದಾಗಿರಬಹುದೆ?

ವ್ಯಾಕರಣದೋಷ, ಭಾಷೆ ಈ ಕಾರಣಗಳಿಂದ ಈ ಶಾಸನವು ಕೂಟಶಾಸನವಾಗಿರಬೇಕು'	*ಗ್ರಾಮೀಣ ಲಿಪಿಕಾರರ ಮಿತಿಗಳಿಂದಾಗಿ ವ್ಯಾಕರಣ ದೋಷ, ಭಾಷೆಯ ದೋಷಗಳು ಆಗಿರಬಹುದೆ?*
ಶಾಸನದ ಮೇಲ್ಭಾಗದಲ್ಲಿ ಯಾವುದೇ ಧರ್ಮದ ಚಿಹ್ನೆಗಳಿಲ್ಲದಿರುವುದು	ಪ್ರಾರಂಭದಲ್ಲಿ ಸಂಡೂರು ಪ್ರಾಂತ್ಯದ ದೈವವಾದ ಕುಮಾರಸ್ವಾಮಿಯ ಹೆಸರಿದೆ. ಶ್ರೀರಾಮಚಂದ್ರಾಯ ನಮಃ ಎನ್ನುವುದು ಶಾಸನ ಕರ್ತರಾದ ವ್ಯಾಸರಾಯರ ಪೂಜಾಮೂರ್ತಿಯಾದ ರಾಮದೇವರ ಸಂಕೇತವಾಗಿದೆ. ಹೀಗಾಗಿ ಯಾವುದೇ ಧರ್ಮದ ಚಿಹ್ನೆಗಳಿಲ್ಲ ಎನ್ನುವ ಮಾತು ಸರಿಯಲ್ಲ.
ಶಾಸನದ ಕೊನೆಯಲ್ಲಿ ವಿರೂಪಾಕ್ಷ ಎಂಬ ಸಹಿ ಇಲ್ಲದಿರುವುದು ಈ ಕಾರಣಗಳಿಂದ ಈ ಶಾಸನವು ಕೂಟಶಾಸನವಾಗಿರಬೇಕು' ಎಂಬ ಸಂದೇಹವನ್ನು ವ್ಯಕ್ತಪಡಿಸಿದ್ದಾರೆ.	ವಿಜಯನಗರದ ಅರಸರು ಹೊರಡಿಸಿದ್ದರೆ ಮಾತ್ರ ಶಾಸನದ ಕೊನೆಯಲ್ಲಿ ವಿರೂಪಾಕ್ಷ ಎಂಬ ಸಹಿ ಇರಲು ಸಾಧ್ಯ. ಹಳೆಯ ಶಾಸನದ ಸ್ಥಳೀಯ ಪ್ರತಿಯಾದ ಈ ತಾಮ್ರಶಾಸನದಲ್ಲಿ ವಿರೂಪಾಕ್ಷ ಎಂಬ ಸಹಿ ಇರಲು ಸಾಧ್ಯವಿಲ್ಲ. ಈ ಎಲ್ಲ ಕಾರಣಗಳಿಂದ ಈ ಶಾಸನವು ಕೂಟಶಾಸನವಾಗಿರಲಾರದು.
ಕೆರೆ ಕಟ್ಟಿಸಿದವರು ಮಠದ ಗುರುಗಳು, ಮತ್ತು ದಾನ ಸ್ವೀಕರಿಸಿದವರು ಅನೇಕ ಕುಲಕಸುಬಿನವರು ಮತ್ತು ಗೌಡ, ಶಾನುಭೋಗರು, ಆದ್ದರಿಂದ *'ಗೌಡ ಶಾನುಭೋಗರ ವಂಶದವರೆ ಈ ಕೆಲಸ ಮಾಡಿರಬೇಕು'* ಎಂಬ ನಿರ್ಣಯಕ್ಕೆ ಬಂದಿದ್ದಾರೆ.	ಆದರೆ ಈ ಅಭಿಪ್ರಾಯವನ್ನು ಒಪ್ಪಲು ಸಾಧ್ಯವಿಲ್ಲ. ಕಾರಣವೇನೆಂದರೆ ಪ್ರತಿಯೊಂದು ಗ್ರಾಮದಲ್ಲಿ ಜನಜೀವನ ನಡೆಯಲು ವಿವಿಧ ಸೇವೆಗಳನ್ನು ಸಲ್ಲಿಸುವ ವಿವಿಧ ಕಸುಬಿನ ಕುಶಲ ಕರ್ಮಿಗಳಿರುತ್ತಾರೆ. ಸಮಸ್ತ ಗ್ರಾಮವು ಅವರಿಂದ ಉಪಕಾರ ಪಡೆದಿರುವುದರಿಂದ ಊರಿನ ಸಾರ್ವಜನಿಕ ಆದಾಯದಲ್ಲಿ ಅವರಿಗೆಲ್ಲ ಒಂದೊಂದು ಪಾಲು ಸಲ್ಲಬೇಕೆಂಬುದು 'ಸಾಮಾಜಿಕ ನ್ಯಾಯವೇ' ಆಗಿದೆ.

ಈ ದೃಷ್ಟಿಕೋನದಿಂದ ಸದರಿ ಶಾಸನವನ್ನು ವಿಶ್ಲೇಷಿಸಿದರೆ ಕುತೂಹಲಕಾರಿಯಾದ ಮಾಹಿತಿಗಳು ಹೊರಬೀಳುತ್ತವೆ. ಗಿರಿಜಾ ಅವರು ಊಹಿಸುವಂತೆ ಒಂದೊಮ್ಮೆ ಗೌಡರೋ ಶಾನುಭೋಗರೋ ತಮ್ಮ ಸ್ವಾರ್ಥಕ್ಕಾಗಿ ಕೂಟ ಶಾಸನ ರಚಿಸಿದ್ದರೆ,

ಅವರು ಕೆರೆಯ ಆಯಕಟ್ಟಿನ ಬಹುಭಾಗವನ್ನು ತಮ್ಮ ಹೆಸರಿಗೆ ಬರೆದುಕೊಳ್ಳುತ್ತಿದ್ದರು. ಈ ಶಾಸನದಲ್ಲಿ ಹಾಗೆ ಕಂಡು ಬರದೆ, ಸ್ಥಳೀಯ ಗ್ರಾಮದ ಆಡಳಿತಾಧಿಕಾರಿಗಳಾದ ಅವರಿಗೂ ಇತರ ಕಸುಬುದಾರರ ಜೊತೆಯಲ್ಲಿಯೇ ಮಾನ್ಯಗಳನ್ನು ಹಂಚಿಕೊಡಲಾಗಿದೆ. **ಗೌಡ ಶಾನುಭೋಗರನ್ನು ಊರಿನ ಆಯಗಾರ (ಬಲೂತಿದಾರ)ರೆಂದು ಪರಿಗಣಿಸುವ ಪದ್ಧತಿ** ಆ ಪ್ರಾಂತದ ಗ್ರಾಮೀಣ ನಡಾವಳಿಗಳಲ್ಲಿ ಇಂದಿಗೂ ಪ್ರಚಲಿತದಲ್ಲಿದೆ. ಇದೇ ಕ್ರಮವು ಕರ್ನಾಟಕದ ಎಲ್ಲಭಾಗಗಳಲ್ಲೂ ಇತ್ತೆನ್ನುವುದಕ್ಕೆ ಕನ್ನಡನಿಘಂಟಿನಲ್ಲಿ ಪುರಾವೆಗಳಿವೆ. ಆದ್ದರಿಂದ ಈ ಶಾಸನವು **'ಸಾಮಾಜಿಕ ನ್ಯಾಯ'**ದ ಸಾಂಸ್ಕೃತಿಕ ಮಹತ್ವದ್ದು, ಹೆಚ್ಚಿನ ವಿವರಗಳು ಇಂತಿವೆ.

ತುಂಬರಗುದ್ದಿ ಶಾಸನವು ಸಾಳ್ವ ನರಸಿಂಹರಾಯ ಆ ಗ್ರಾಮವನ್ನು ವ್ಯಾಸರಾಯರಿಗೆ ದಾನವಾಗಿ ಕೊಟ್ಟ ವಿಚಾರವನ್ನು ದೃಢೀಕರಿಸುತ್ತದೆ. ಆದರೆ ದಾನದ ಕಾಲವನ್ನು ಹೇಳುವುದಿಲ್ಲ.

೧. ವ್ಯಾಸರಾಯರು ದೊಡ್ಡ ಕೆರೆಯನ್ನು ಕಟ್ಟಿಸಿದ ಕಾಲವನ್ನೂ ಹೇಳುತ್ತಿಲ್ಲ.

೨. ಕೆರೆಯನ್ನು ಕಟ್ಟಿಸಿದ ವರ್ಷವಾಗಲಿ ಅಥವಾ ಹಲವು ವರ್ಷಗಳ ನಂತರವಾಗಲಿ ಆ ಕೆರೆಯ ಹಿಂದಿನ ಜಮೀನುಗಳನ್ನು, ಗುತ್ತಿಗೆಗೆ ಕೊಡುವ ದರವನ್ನು ನಿಗದಿಪಡಿಸಿ, ಗುತ್ತಿಗೆ ಹಿಡಿಯುವವರು ಮಠಕ್ಕೆ ದಾಸೋಹಕ್ಕೆ ಸಲ್ಲಿಸಬೇಕಾದ ದವಸದ ಅಳತೆಯನ್ನು ನಿಖರವಾಗಿ ಈ ಶಾಸನ ಹೇಳುತ್ತದೆ.

ವಿಜಯನಗರ ರಾಜ್ಯಕ್ಕೆ ಸಲ್ಲುವ ಸಂಡೂರು ಪ್ರಾಂತ್ಯದ ತುಂಬರಗುದ್ದಿಗೆ ಮತ್ತೊಂದು ಹೆಸರು **'ವ್ಯಾಸಾಪುರ'** ಎಂಬ ಗ್ರಾಮವನ್ನು ವೀರಪ್ರತಾಪ ಸಾಳ್ವನರಸಿಂಹರಾಯನು ಆಳುವಾಗ ವ್ಯಾಸರಾಯಮಠಕ್ಕೆ ದಾನವನ್ನು ಕೊಟ್ಟಿದ್ದನು. ಹೀಗಾಗಿ ಆ ಊರಿನ ಸಮಸ್ತ ಭೂಮಿಗೆ ವ್ಯಾಸರಾಯರೇ ಅಧಿಪತಿಗಳಾಗಿದ್ದರು. ತಮ್ಮ ಮಠಕ್ಕೆ ಸೇರಿದ ಆ ಗ್ರಾಮದ ಜಮೀನುಗಳಿಗೆ ನೀರಾವರಿ ವ್ಯವಸ್ಥೆ ಕಲ್ಪಿಸುವುದು ತಮ್ಮ ಕರ್ತವ್ಯವೆಂದು ಭಾವಿಸಿ ಅವರು ಕೆರೆ ಕಟ್ಟಿಸುವ ನಿರ್ಧಾರಕ್ಕೆ ಬಂದಿರಬೇಕು. ಈ ಕೆರೆಯ ನಿರ್ಮಾಣದಿಂದ ಮಠದ ಜಮೀನಿನಲ್ಲಿ ಹೆಚ್ಚಿನ ಬೆಳೆ ಬೆಳೆಯುವುದು ಮತ್ತು ಆ ಊರಿನ ರೈತ ಕುಟುಂಬಗಳಿಗೆ ವ್ಯವಸಾಯಕ್ಕೆ ಅನುಕೂಲವನ್ನು ಒದಗಿಸಿದಂತಾಗುತ್ತದೆ ಎಂಬ ಅವರ ನಿರ್ಧಾರವು ಸೃಜನಶೀಲ ವ್ಯಕ್ತಿತ್ವದ ಸಂಕೇತವಾಗಿದೆ.

ಆ ಗ್ರಾಮದಲ್ಲಿ ವ್ಯಾಸರಾಯರು ಸ್ವತಃ ದೊಡ್ಡ ಕೆರೆಯನ್ನು ಕಟ್ಟಿಸಿ, ಅದರಿಂದ ಸಾಗುವಳಿಯಾಗುವ ಭೂಮಿಯನ್ನು ಎರಡು ಭಾಗಗಳನ್ನಾಗಿ ವಿಂಗಡಿಸಿ, ಕೆರೆಯ ಹಿಂದಿನ ಕೆಲವು ಜಮೀನುಗಳನ್ನು ನಿತ್ಯಗುತ್ತಿಗೆಗೆ ನೀಡಿ, ಗುತ್ತಿಗೆ ದರವನ್ನು ನಿಗದಿಪಡಿಸಿ, ತಮ್ಮ ಮಠದಲ್ಲಿ ನಡೆಯುವ ಅನ್ನದಾನದ ಬಳಕೆಗಾಗಿ ಒಂದು

ಖಂಡುಗ ಅಂದರೆ ೮೦ ಸೇರಿನ ೨೦ ಮೂಟೆ ಅಳತೆಯ ಧಾನ್ಯವನ್ನು ಪ್ರತಿ ವರ್ಷವೂ ಸಲ್ಲಿಸಬೇಕೆಂಬ ಷರತ್ತು ವಿಧಿಸಿದ್ದಾರೆ.

ಮತ್ತೆ ಕೆಲವು ಜಮೀನುಗಳನ್ನು ಬಾರಾ ಬಲೂತಿದಾರರಿಗೆ ಮಾನ್ಯವನ್ನಾಗಿ (ದಾನ ಅಥವಾ ಉಂಬಳಿಯನ್ನಾಗಿ) ಹಂಚಿ, ಅಳತೆ ಮಾಡಿಕೊಟ್ಟಿದ್ದಾರೆ. **'ಬಲೂತಿದಾರ'** ಎಂದರೆ ಹಳ್ಳಿಯಲ್ಲಿ ವಂಶಪರಂಪರೆಯಾಗಿ ಬಂದ ಕಸುಬನ್ನು ನಡೆಸಿ, ದವಸ ಇತ್ಯಾದಿ ವರಮಾನಗಳನ್ನು ಪಡೆಯುವ ಹಕ್ಕನ್ನು ಹೊಂದಿರುವವನು.[೧] **'ಬಾರಾಬಲೂತಿದಾರ'**ರೆಂದರೆ ೧೨ಜನ ಆಯಗಾರರಾದ ಗ್ರಾಮಾಧಿಕಾರಿಗಳು. ಗೌಡ, ಶಾನುಭೋಗ, ಪಂಚಾಂಗಿ, ತಳವಾರ, ತೋಟಿ, ನೀರಗಂಟಿ, ಅಗಸ, ನಾಯಿಂದ, ಕುಂಬಾರ, ಲೋಹರ, ಬಡಗಿ, ಅಕ್ಕಸಾಲಿ. ಈ ಪಟ್ಟಿಯಲ್ಲಿನ ಹೆಸರುಗಳು ಊರಿಂದ ಊರಿಗೆ ವ್ಯತ್ಯಾಸವಿರುತ್ತವೆ.[೨]

ಮಾನ್ಯ ಪಡೆದವರ ವಿವರ :

ಆಯಗಾರನ ವೃತ್ತಿ	ಆಯಗಾರನ ಹೆಸರು	ಉಂಬಳಿ ನೀಡಿದ ಭೂಮಿಯ ವಿಸ್ತೀರ್ಣ
ಗೌಡ	ಸಾದರ ಚಿಕ್ಕಣ್ಣನ ಮಗನಾದ ನಾರಾಯಣನಿಗೆ	ನಾಲ್ಕು ಎತ್ತಿನ ಗಳೇವು – ೨
ಶಾನುಭೋಗ	ವೆಂಕರಸಯ್ಯನ ಮಗ ತಿಮ್ಮರಸನಿಗೆ	ನಾಲ್ಕು ಎತ್ತಿನ ಗಳೇವು – ೨
ತಳವಾರ	ಮಡಿಗಂಡಲ ಚಿಂಗಿನಾಯಕನಿಗೆ	ನಾಲ್ಕು ಎತ್ತಿನ ಗಳೇವು – ೨
ಕಮ್ಮಾರ	ಮಲ್ಲೋಜನಿಗೆ	ಒಂದು ಗಳೇವು
ಬಡಿಗ	ದೊರೂಜನಿಗೆ	ಒಂದು ಗಳೇವು
ಅಕ್ಕಸಾಲಿಗ	ವರೂಜನಿಗೆ	ಅರ್ಧ ಗಳೇವು
ಬಾರಿಕ	ಕೊಂಡನಿಗೆ	ಅರ್ಧ ಗಳೇವು
ಅಗಸ	ನಾಗರಾಜನಿಗೆ	ಅರ್ಧ ಗಳೇವು
ಕ್ಷೌರಿಕ	ತಿಪ್ಪನಿಗೆ	ಅರ್ಧ ಗಳೇವು
ಬೇಗಾರ	ತಿಮ್ಮನಿಗೆ	ಒಂದು ಗಳೇವು
ಕುಂಬಾರ	ತಿಮ್ಮನಿಗೆ	ಅರ್ಧ ಗಳೇವು
ಮಾದಿಗ	ಯಲ್ಲಜ್ಜನಿಗೆ	ಒಂದು ಗಳೇವು

ದಕ್ಷಿಣಭಾರತದಲ್ಲಿ ದಾನಶಾಸನಗಳೇ ಹೆಚ್ಚಿನ ಸಂಖ್ಯೆಯಲ್ಲಿ ದೊರೆಯುತ್ತವೆ. ಅವು ಸಾಮಾನ್ಯವಾಗಿ ಬ್ರಾಹ್ಮಣರಿಗೆ ಅಥವಾ ದೇವಾಲಯಗಳಿಗೆ ಮಾತ್ರ ನೀಡುವ ದಾನಗಳಾಗಿರುತ್ತವೆ. ಆದರೆ **ಬ್ರಾಹ್ಮಣ ಯತಿಯೊಬ್ಬರು ಬ್ರಾಹ್ಮಣೇತರರಾದ, ಗ್ರಾಮೀಣ ಶ್ರಮಿಕವರ್ಗದ; ತಳವಾರ, ಕಮ್ಮಾರ, ಬಡಿಗ, ಅಕ್ಕಸಾಲಿಗ, ಬಾರಿಕ, ಅಗಸ, ಕ್ಷೌರಿಕ, ಬೇಗಾರ, ಕುಂಬಾರ, ಮಾದಿಗ ಮುಂತಾದ ಎಲ್ಲ ವೃತ್ತಿಯವರಿಗೂ ಮಾನ್ಯಗಳನ್ನು (ದಾನ ಅಥವಾ ಉಂಬಳಿಯನ್ನು) ವಿತರಿಸಿರುವ ಬಗ್ಗೆ ಬಹುಶಃ ಇದೇ ಮೊದಲ ದಾಖಲೆಯಾಗಿದೆ** ಎನಿಸುತ್ತಿದೆ. ವ್ಯಾಸರಾಯರು ಈ ಮೂಲಕ ಹೊಸ ಪದ್ಧತಿಯನ್ನು ಆರಂಭಿಸಿರುವಂತೆ ಕಂಡುಬರುತ್ತದೆ. **ಇದೊಂದು ಪ್ರಮುಖ ಸಾಮಾಜಿಕ ಸುಧಾರಣೆಯಾಗಿದೆ.**

ಪ್ರತಿಯೊಂದು ಗ್ರಾಮದಲ್ಲಿ ಜನಜೀವನ ಸುಲಲಿತವಾಗಿ ನಡೆಯಲು ವಿವಿಧ ಸೇವೆಗಳನ್ನು ಸಲ್ಲಿಸುವ ವಿವಿಧ ಕಸುಬಿನ ಕುಶಲಕರ್ಮಿಗಳಿರುತ್ತಾರೆ. ಜನಹಿತಕ್ಕಾಗಿ ಮಳೆ – ಚಳಿ – ಬಿಸಿಲುಗಳೆನ್ನದೆ ದುಡಿಯುವ ಬಲೂತಿದಾರರಿಂದ ಸಮಸ್ತ ಗ್ರಾಮವು ಉಪಕಾರ ಪಡೆದಿರುವುದರಿಂದ ಊರಿನ ಸಾರ್ವಜನಿಕ ಆದಾಯದಲ್ಲಿ ಅವರಿಗೆಲ್ಲ ಒಂದೊಂದು ಪಾಲು ಸಲ್ಲಬೇಕೆಂಬುದು **'ಸಾಮಾಜಿಕ ನ್ಯಾಯವೇ'** ಆಗಿದೆ. ಈ ದೃಷ್ಟಿಕೋನದಿಂದ ಸದರಿ ಶಾಸನವನ್ನು ವಿಶ್ಲೇಷಿಸಿದರೆ ಕುತೂಹಲಕಾರಿಯಾದ ಮಾಹಿತಿಗಳು ಹೊರಬೀಳುತ್ತವೆ.

ಮಾತು ಮಾತಿಗೂ **'ರೈತನ ಅಭಿವೃದ್ಧಿ'** ಎಂದು ಮಾತ್ರ ಬಡಬಡಿಸುವ ಇಂದಿನ ವಿಚಾರವಾದಿಗಳು, ಯೋಜನೆಗಳನ್ನು ಸಿದ್ಧಪಡಿಸುವವರು, ರೈತರ ಜೊತೆಗೆ **ಗ್ರಾಮೀಣ ಶ್ರಮಿಕವರ್ಗದ ಎಲ್ಲ ಇತರ ವೃತ್ತಿಯವರ ಹಿತವನ್ನೂ ಚಿಂತಿಸುವುದು ವರ್ತಮಾನಕಾಲದ ತುರ್ತುಅಗತ್ಯವಾಗಿದೆ.** ಈ ಹಿನ್ನೆಲೆಯಲ್ಲಿ **'ತುಂಬರಗುದ್ದಿ ಶಾಸನದಲ್ಲಿ ಕಂಡುಬರುವ ವ್ಯಾಸರಾಯರ ಪ್ರಕ್ರಮ'** ಇಂದಿಗೂ ಪ್ರಸ್ತುತವೆನಿಸುತ್ತದೆ.


ಕೊನೆಟಿಪ್ಪಣಿಗಳು

೧. ಪ್ರೊ. ಜಿ. ವೆಂಕಟಸುಬ್ಬಯ್ಯ, (ಸಂ) ೨೦೧೦ ಕನ್ನಡ ನಿಘಂಟು, ಕಸಾಪ ಸಂ: ೬, ಪು. ೬೨೮೩.

೨. ಅದೇ ಪು. ೬೩೯೨.

□□□

ಕೆ.ಸಂ. 2900–ಮೈ.ವಿ.ಮು.–300 ಪ್ರತಿಗಳು–17–06–2017



ಪ್ರಸಾರಾಂಗ

ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು